॥ ಓಂ ತತ್ಸತ್ ॥

ಶ್ರೀ

ಉಡುಪಿ ಕ್ಷೇತ್ರದ ನೈಜ ಚಿತ್ರ

ಮತ್ತು

ಚಾರಿತ್ರಿಕ ಹಿನ್ನೆಲೆ

ಲೇಖಕ ಮತ್ತು ಸಂಗ್ರಾಹಕ:

ಡಾ॥ ಮ. ಸು. ಅಚ್ಯುತ ಶರ್ಮಾ,

ಕಂಕನಾಡಿ, ಮಂಗಳೂರು.

ಕ್ರಿ. ಶ. **1969** — ಶಕ ೧೮೯೧.

ಪ್ರಕಾಶಕರು:

ಸತ್ಯಶೋಧ ಪ್ರಕಾಶನ,

ಮಂಗಳೂರು-೨. [ದ.ಕ.]

ಬೆಲೆ: ರೂ. ೩-೦೦

|| ಓಂ ತತ್ಸತ್ ||

ಶ್ರೀ

ಉಡುಪಿ ಕ್ಷೇತ್ರದ ನೈಜ ಚಿತ್ರ

ಮತ್ತು

ಚಾರಿತ್ರಿಕ ಹಿನ್ನೆಲೆ



ಲೇಖಕ ಮತ್ತು ಸಂಗ್ರಾಹಕ:

ಡಾ। ಮ. ಸು. ಅಚ್ಯುತ ಶರ್ಮಾ,

ಕಂಕನಾಡಿ, ಮಂಗಳೂರು.

ಕ್ರಿ. ಶ. 1969 — ಶಕ ೧೮೯೧.

ಪ್ರಕಾಶಕರು:

ಸತ್ಯಶೋಧ ಪ್ರಕಾಶನ,

ಮಂಗಳೂರು-೨. [ದ.ಕ.]

ಬೆಲೆ: ರೂ. ೩-೦೦

ಕೃತಜ್ಞತೆ.

ಈ ಪುಸ್ತಕದಲ್ಲಿ ಅಚ್ಚಾದ, ಉಡುಪಿ ಶ್ರೀ ಕೃಷ್ಣನ ವಿಗ್ರಹ ಮತ್ತು ಶ್ರೀ ಅನಂತೇಶ್ವರ ದೇವಾಲಯದ ಭಾವಚಿತ್ರಗಳನ್ನು ಒದಗಿಸಿಕೊಟ್ಟ ಬಗ್ಗೆ ಡಾ॥ ಪಿ. ಗುರುರಾಜ ಭಟ್, M.A., B.Ed., Phd., ಪ್ರಿನ್ಸಿಪಾಲ್ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜ್ ಇವರಿಗೆ ನನ್ನ ಕೃತಜ್ಞತೆಗಳು.

ಡಾ॥ ಎಂ. ಎಸ್. ಎ. ಶರ್ಮಾ.

ಮುನ್ನುಡಿ

ತತ್ವತಃ "ಈ ಉಡುಪಿ ಕ್ಷೇತ್ರದ ನೈಜಚಿತ್ರ, ಮತ್ತು ಚಾರಿತ್ರಿಕ ಹಿನ್ನಲೆ ಎಂಬ ಈ ಪುಸ್ತಕಕ್ಕೆ ಅಥವಾ ಸಂಶೋಧನಾತ್ಮಕ ಗ್ರಂಥಕ್ಕೆ ಮುನ್ನುಡಿಯು ಅಗತ್ಯವಿರುವುದಿಲ್ಲ; ಆದರೂ, ಈ ಸುಂದರ ಸತ್ಯಾನ್ವೇಷಣದ ಸತತ ಪ್ರಯತ್ನಗಳ ರೂಪವನ್ನು ತಾಳಿದ ಈ ಗ್ರಂಥವನ್ನು ನನ್ನ ಮಿತ್ರರಾದ ಡಾ॥ ಎಂ.ಎಸ್.ಎ. ಶರ್ಮರವರು ಆಧಾರಪೂರ್ವಕ ಹಾಗೂ ಸತಾರ್ಕಿಕವಾಗಿ ಉಲ್ಲೇಖಿಸಿರುತ್ತಾರೆ. ಸಂಶೊಧನ ಹಾಗೂ ಪರಿಶೋಧನವು ಸಾಹಿತ್ಯದ ತಥ್ಯಕಥನದ ಪ್ರಮುಖ ಅಂಗ. ಇಂತಹ ಎಲ್ಲಾ ಗ್ರಂಥಗಳಲ್ಲಿ ನಾನು ಸಂಪೂರ್ಣ ಸಹಮತನೆಂದು ಹೇಳಲಾರೆ; ಆದರೆ ಸತ್ಯವನ್ನು ಅರಿಯಲು ಈ ಗ್ರಂಥವು ಅತ್ಯಂತ ಸಹಾಯಕವಾಗುತ್ತದೆ–ಎಂದು ನನ್ನ ಖಚಿತ ಅಭಿಪ್ರಾಯ. ಇಂತಹ ಗ್ರಂಥಗಳು ಸಾಹಿತ್ಯದ ವಿಕಾಸ ಹಾಗೂ ಉತ್ಕರ್ಷವನ್ನು ಸಾಧಿಸುತ್ತವೆ. ಇಂತಹ ಗ್ರಂಥಗಳು ವಿಚಾರ ಪರಿಪ್ಲುತವಾಗಿವೆ. ಪ್ರಗತಿಪಥದಲ್ಲಿ ಇರಿಸುವ ಈ ಸತ್ಯದ ಅನ್ವೇಷಣವು ಪ್ರಶಂಸನೀಯ ಹಾಗೂ ಶ್ಲಾಘ್ಯ. ಕೆಲವುಸಲ ಇಂತಹ ಎಲ್ಲಾ ಅನ್ವೇಷಣಗಳು ಸಂಪೂರ್ಣಸತ್ಯವೆಂದು ಹೇಳುವುದು ಅನುಚಿತ; ಆದರೆ ಇಂತಹ ಅನೇಕ ಗ್ರಂಥಗಳು ಹೊರಬಂದು ಸತ್ಯದ ಅರಿವನ್ನು ಉಂಟು ಮಾಡಬಹುದು; ಕಟ್ಟಕಡೆಗೆ ಇದು ಇತಿಹಾಸ ಸಿದ್ಧಾಂತಗಳಾಗುವುದು.

ಮಂಗಳೂರು–2 ಇತಿ ಶಮ್,

11—3—69. ವೈದ್ಯಗುರು ಯಂ. ಆರ್. ಭಟ್, Ph.D.

N.B.—ಓದುಗರು ಅಂತ್ಯಕ್ಕೆ ಪ್ರಕಟಿಸಲ್ಪಟ್ಟ ಶುದ್ಧಾ ಅಶುದ್ಧ ತಿದ್ದುಪಡಿ ಮತ್ತು ಆಧಾರಗ್ರಂಥಗಳ ಅಂಶಗಳನ್ನು ಮೊದಲು ಓದಿಕೊಂಡರೆ ಉತ್ತಮ.

— ಲೇಖಕ



ದಿವಂಗತ ಪುತ್ತೂರು

ಶ್ರೀ ನಟ್ಟೋಜಿ ಶಿವರಾಯರು

ಇವರ ಶಾರದಾ ಲೈಬ್ರೆರಿಯಿಂದ ದೊರಕಿದ ಅನೇಕ ಆಧಾರ ಗ್ರಂಥಗಳಿಗಾಗಿ ಇವರಿಗೆ ನನ್ನ ಕೃತಜ್ಞತಾ ಅರ್ಪಣೆ. — ಲೇಖಕ.

॥ ಓಂ ತತ್ಸತ್ ॥

ಪ್ರಸ್ತಾವನೆ

ಉಡುಪಿ ಕ್ಷೇತ್ರವು ಶ್ರೀ ಕೃಷ್ಣಪರಮಾತ್ಮನಿಗೆ ಸಂಬಂಧಪಟ್ಟ ದೊಡ್ಡ ಕ್ಷೇತ್ರವೆಂದು ಈಗಿನ ಜನರು ಹೇಳಿಕೊಳ್ಳುವುದನ್ನು ಕೇಳಿ ಅದನ್ನು ಸಂದರ್ಶಿಸಬೇಕೆಂಬ ಕುತೂಹಲವು ನನಗೆ ಉಂಟಾದುದರಿಂದ ಅಲ್ಲಿಗೆ ಹೋದೆನು. ಹಾಗೆ ಹೋದವನು ಅಲ್ಲಿಯ ಕೃಷ್ಣಮಠದ ಮಾಧ್ವ ವೈಷ್ಣವ ಮಾಣಿಗಳ ಸಹಾಯದಿಂದ ಶ್ರೀ ಕೃಷ್ಣನ ದರ್ಶನವು ಒಂದು ಗಾಳಿ ಕಿಟಕಿಯ ತೂತಿನಿಂದ ಅತಿಪ್ರಯಾಸಪಟ್ಟು ಆಯಿತು. "ಉಡುಪಿ ಕೃಷ್ಣ ಪೊಡವಿಗೊಡೆಯ" ನೆಂಬ ಬಿರುದನ್ನು ಪಡೆದವನೂ ತನ್ನ ಗೀತೋಪದೇಶದಿಂದ, ಭಕ್ತರಿಗೆ ಅನುಗ್ರಹಮೂರ್ತಿಯೂ ಆದ ಶ್ರೀ ಕೃಷ್ಣಪರಮಾತ್ಮನು ಜಾತಿ ಮತಪಂಥಗಳೆಂಬ ಭೇದವಿಲ್ಲದೆ ಜನತೆಯ ಕಲ್ಯಾಣಕ್ಕಾಗಿ। ಅವತರಿಸಿ ಅವನ ಕ್ಷೇತ್ರವೆಂದು ಹೇಳಲ್ಪಡುವ ಈ ಉಡುಪಿಯಲ್ಲಿ ಗಾಳಿ ಸೋಕದ ಮಹಾದ್ವಾರವಿಲ್ಲದ ಒಂದು ಕೋಣೆಯಲ್ಲಿ ಅಡಗಿ ಕೂತುಕೊಂಡಿರುವುದು ನೋಡಿ ನನಗೆ ವಿಚಿತ್ರವಾಗಿ ಕಂಡಿತು.

ಅಲ್ಲದೆ, ಇಲ್ಲಿಯ ಪ್ರಧಾನ ದೇವರೆಂದು ಹೇಳಲ್ಪಡುವ ಈ ಕಡಗೋಲು ಕೃಷ್ಣನು ಇಲ್ಲಿಯ ಪುರಾತನವಾದ ಶ್ರೀ ಮದನಂತೇಶ್ವರ ಮತ್ತು ಶ್ರೀ ಚಂದ್ರಮೌಳೀಶ್ವರ ಶಿವಾಲಯಗಳ ಈಶಾನ್ಯ ಮೂಲೆಯಲ್ಲಿದ್ದುಕೊಂಡು ಉತ್ಸವಾದಿಗಳ ಕಾಲದಲ್ಲಿ ಇತರ ದೇವಾಲಯಗಳಂತೆ ತನ್ನ ದೇವಾಲಯಕ್ಕೆ ಪ್ರದಕ್ಷಿಣೆಬಾರದೆ, ಅಲ್ಲಿಯ ಮುಖ್ಯ ದೇವಸ್ಥಾನಗಳಾಗಿ ಕಾಣುವ ಮೇಲಿನ ಶಿವಾಲಯಗಳಿಗೆ ಪ್ರದಕ್ಷಿಣೆ ಬರುವುದನ್ನು ಕಾಣುವಾಗ ಈ ಕೃಷ್ಣನಿಗೆ ತನ್ನದೇ ಆದ ಸ್ವತಂತ್ರ ದೇವಾಲಯವಿಲ್ಲದೆ ಈ ಉಡುಪಿಯಲ್ಲಿ ಪ್ರಾಧಾನ್ಯತೆಯು ಹೇಗೆ ಬಂತು? ಏಕೆ ಬಂತು? ಯಾರಿಂದ ಬಂತು? ಎಂಬುದು ಸಂಶೋಧನೀಯವಾಗಿ ಕಂಡುಬಂತು. ಅದು ವಿನಹ ಈ ಕ್ಷೇತ್ರದಲ್ಲಿ ಪುರಾತನವಾದ ಈ ಎರಡು ದೊಡ್ಡ ಶಿವಾಲಯಗಳಿಂದ "ಶಿವನಹಳ್ಳಿ" ವ "ಶಿವಳ್ಳಿ"ಗ್ರಾಮ ಎಂಬ ಹೆಸರನ್ನು ಪಡಕೊಂಡು ಇಲ್ಲಿ ಒಬ್ಬನಾದರೂ ಶೈವ ವಾ ಸ್ಮಾರ್ತ ಸಂಪ್ರದಾಯದ ಬ್ರಾಹ್ಮಣನೂ ಇಲ್ಲದೆ ಬರೇ ತಪ್ತ ಮುದ್ರಾಧಾರಣೆ ಮಾಡಿಕೊಂಡಿರುವ ಊರ್ಧ್ವ ಪುಂಡ್ರಾಧಾರಿಗಳಾದ

ಮಾಧ್ವರಿಂದ ತುಂಬಿ ಆ ಎರಡು ಶಿವಾಲಯಗಳಲ್ಲೂ ಶೈವಾಗಮ ರೀತ್ಯಾ ಪೂಜೆಯಿಲ್ಲದಿರುವುದು ನೋಡಿಯೂ ಇಲ್ಲಿಯ ನೈಜಚಿತ್ರ ಮತ್ತು ಸತ್ಯತೆ ಬೇರೆಯೇ ಇರಬಹುದೆಂದು ಗ್ರಹಿಸಿ ಇದರ ಪರಿಶೋಧನೆಗೆ ತೊಡಗಿದೆನು.

ನಾನು ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಧರ್ಮದರ್ಶಿಯಾಗಿದ್ದಾಗ ಸಂಗ್ರಹಿಸಿದ ಅನೇಕ ಹಳೇ ದಾಖಲೆಗಳಿಂದಲೂ, ದಿವಂಗತ ಶ್ರೀ ನಟ್ಟೋಜಿ ಶಿವರಾಯರ ಶ್ರೀ ಶಾರದಾ ಲೈಬ್ರೆರಿಯಲ್ಲಿ ದೊರಕಿದ ಹಳೇ ಗ್ರಂಥಗಳ ಆಧಾರಗಳಿಂದಲೂ, ದಿವಂಗತ ಶ್ರೀ ಐ. ಕೆ. ಶ್ರೀನಿವಾಸರಾಯರು ಬರೆದಿಟ್ಟ ಹಸ್ತಪ್ರತಿಗಳ ಆಧಾರದಿಂದಲೂ ಅಲ್ಲದೆ ಇನ್ನಿತರ ಹಳೆಯ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟ ಆಧಾರಗಳಿಂದಲೂ ಸಂಗ್ರಹಿಸಿ ಈ ವಿಮರ್ಶಾತ್ಮಕ ರೂಪವಾದ ಚರಿತ್ರೆಯನ್ನು ಬರೆದುದಾಗಿದೆ. ಸತ್ಯವನ್ನು ಎತ್ತಿಹಿಡಿದು ಅಸತ್ಯವನ್ನು ಹೊರಪಡಿಸಿ ಜನತೆಗೆ ತೋರಿಸಿ ಕೊಡುವುದೇ ಈ ಲೇಖಕನ ಗುರಿಯಾಗಿದೆ. ಈ ಚರಿತ್ರೆಯನ್ನು ಓದುವುದರಿಂದ ಉಡುಪಿಯ ಮಾಧ್ವರು ಇದರಲ್ಲಿರುವ ವಿಷಯಗಳನ್ನು ಅರಿತುಕೊಂಡು ಭೇದಭಾವವನ್ನು ತೊರೆದು ಹಿಂದೂ ಸನಾತನಧರ್ಮದ ವಿಶಾಲಧ್ಯೇಯವನ್ನರಿತುಕೊಂಡು ತಮ್ಮ ಸ್ವಾರ್ಥವನ್ನು ಬಿಟ್ಟು ನಿಜವಾದ ಹಿಂದುಗಳಾಗಿ ದೇಶಸೇವೆಯನ್ನು ಇನ್ನಾದರೂ ಮಾಡಬಹುದೆಂಬ ಮಹತ್ವಾಕಾಂಕ್ಷೆಯಿಂದಲೂ ಇದನ್ನು ಬರೆದದಾಗಿದೆ.

ಮೇಲೆ ಹೇಳಿದ ದಾಖಲೆಗಳು ಸಿಕ್ಕಲು ಸಹಕರಿಸಿದ ದಿವಂಗತ ಶ್ರೀ ನಟ್ಟೋಜಿ ಶಿವರಾಯರ ಪುತ್ರ ಶ್ರೀ ನಟ್ಟೋಜಿ ಕೃಷ್ಣಯ್ಯನವರಿಗೂ, ಮಾನ್ಯದಿವಂಗತ ಡಾ। ಯಂ. ವಿ. ಶಾಸ್ತ್ರಿಗಳವರ ಪುತ್ರ ಡಾ। ಎಂ. ಸಿ. ಶಾಸ್ತ್ರಿಗಳವರಿಗೂ ಮತ್ತು ದಿವಂಗತ ಶ್ರೀ ಐ. ಕೆ. ಶ್ರೀನಿವಾಸರಾಯರ ಅಳಿಯ ಶ್ರೀ ಭೀಮರಾಯರಿಗೂ ನಾನು ಆಭಾರಿಯಾಗಿದ್ದೇನೆ. ಅಲ್ಲದೆ ಇದನ್ನು ಮುದ್ರಿಸಲು ರೂಪಾಯಿ 100ನ್ನು ದಾನವಾಗಿ ಕೊಟ್ಟು ಸಹಕರಿಸಿದ ಬಂಗಾಡಿ ಕೊಡಬೆಟ್ಟು ಪಟೇಲ ಶ್ರೀ ವೆಂಕಟಸುಬ್ಬರಾಯರಿಗೂ ಮತ್ತು ರೂಪಾಯಿ 25ನ್ನು ಕೊಟ್ಟ ಶ್ರೀ ಯಂ. ಆರ್. ಪ್ರಭು ಮಂಗಳೂರು ಇವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಅಲ್ಲದೆ ಈ ಪುಸ್ತಕವನ್ನು ಅಚ್ಚುಹಾಕಲು ತಮ್ಮ ಜಾಹಿರಾತುಗಳನ್ನು ಕೊಟ್ಟು ಸಹಕರಿಸಿದ ಮಹನೀಯರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಲೇಖಕನ ಮೊದಲ ಮಾತು

ತಾ. 18—1—1968ರಲ್ಲು ಪರ್ಯಾಯ ಪೀಠವನ್ನು ಏರಲಿರುವ ಶ್ರೀ ಪೇಜಾವರಮಠದ ಸ್ವಾಮಿಗಳವರು ಬಹಳ ವಿದ್ವಾಂಸರೆಂದೂ ಭೇದಭಾವವಿಲ್ಲದ ವಿಶ್ವಹಿಂದೂ ಪರಿಷತ್ತಿನ ಸಕ್ರಿಯ ಸದಸ್ಯರೆಂದೂ ತಿಳಿದು ಬಂದುದರಿಂದ ಅವರ ಮೂಲಕ ಉಡುಪಿ, ಮಠದವರಿಂದ ಈ ವೊದಲು ನಡೆದಿರುವ ಕೆಲವು ಲೋಪದೋಷಗಳನ್ನು ಸರಿಪಡಿಸಬಹುದೆಂಬ ಅಭಿಲಾಷೆಯಿಂದ ಅದರ ವಿಚಾರವನ್ನು ಒಳಗೊಂಡ "ವಿಜ್ಞಾಪನಾ ಪತ್ರ"ವೆಂಬ ಕರಪತ್ರ ಒಂದನ್ನು ಅವರ ಮತ್ತು ಇತರ ಸಾರ್ವಜನಿಕ ಹಿಂದೂ ಸನಾತನಧರ್ಮಾಭಿಮಾನಿಗಳ ಅವಗಾಹನೆಗೆ ಬರುವಂತೆ ಮುದ್ರಿಸಿ ಶ್ರೀಗಳವರ ಪರ್ಯಾಯ ಕಾಲದಲ್ಲಿ ಪರ್ಯಾಯ ಸ್ವಾಮಿಗಳಿಗೂ, ಇತರ ಸ್ವಾಮಿಗಳಿಗೂ, ಜನತೆಗೂ ತಿಳಿಯುವಂತೆ ವಿತರಣೆ ಮಾಡಿಸಿದೆನು. ಇದರ ಪರಿಣಾಮವಾಗಿ ಮಠಗಳ ಶ್ರೀಗಳವರ್ಯಾರಿಂದಲೂ ಸರಿಯಾದ ಉತ್ತರವು ಬಾರದೇ ಇದ್ದುದರಿಂದ ಈ ಉಡುಪಿ ಚರಿತ್ರೆಯನ್ನು ಬರೆದು ಉಡುಪಿಯ ಸತ್ಯಾಂಶವನ್ನು ಸಾರ್ವಜನಿಕರ ಅವಗಾಹನೆಗೆ ಬರುವಂತೆ ಪ್ರಕಟಿಸಬೇಕಾಯಿತು.

ಈ ಪುಸ್ತಕದ ಅಂತ್ಯದಲ್ಲಿ ವಿವರಿಸಿದ ಸೌರಪುರಾಣದ ಆಧಾರಗಳಿಗೆ ಅನುಗುಣವಾಗಿ ಈಗಲೂ ಅಷ್ಟಮಠದ ಯತಿಗಳು ನಡೆದುಕೊಳ್ಳುತ್ತಿರುವ ಈ ಕೆಳಗಿನ ನಡತೆಗಳು ಗಮನಾರ್ಹವಾಗಿವೆ. ತಾ. 3—2—1969ರಂದು ಮಾಧ್ವರ ಅಷ್ಟಮಠಗಳಲ್ಲಿ ಒಂದಾದ ಪಲಿಮಾರು ಮಠದ ಶ್ರೀ ರಘುವಲ್ಲಭತೀರ್ಥರು ''ಸನ್ಯಾಸವು ಒತ್ತಾಯದ ಮಾಘಸ್ನಾನವಲ್ಲ, ತಲೆ ಬಗ್ಗಿಸುವವರ ಅಪ್ರಾಮಾಣಿಕ ಗೌರವಕ್ಕೆ ಶಿರೋನಾಮೆಯಲ್ಲ''ಎಂಬಿತ್ಯಾದಿ ಕಾರಣಗಳನ್ನು ಕೊಟ್ಟು ಸನ್ಯಾಸವನ್ನೂ, ಮಠದ ಅಧಿಕಾರವನ್ನೂ ಕೂಡ ಬಿಟ್ಟು ಗೃಹಸ್ಥರಾದದ್ದೂ ಅಷ್ಟಮಠಕ್ಕೆ ಸೇರದ ಭಂಡಾರಕೆರೆ ಮಠದ ಸ್ವಾಮಿಗಳೂ ತನ್ನ ಸ್ವಂತ ಧನವಂತಮಠವನ್ನು ಬಿಟ್ಟು ಅವರ ಪಲಿಮಾರು ಮಠದ ಪೀಠವನ್ನು ಏರಿದ್ದೂ, ಇದರಲ್ಲಿ ಪಲಿಮಾರಿನ ದ್ವಂದ್ವ ಮಠವಾದ ಅದಮಾರು ಮಠದ ಯತಿಗಳು ಇದಕ್ಕೆ 'ಅಸ್ತು' ಎಂದು ಒಪ್ಪಿದ್ದೂ, ಇದಕ್ಕೆ

ವಿರೋಧವಾಗಿ ಇತರ ಐದು ಮಠಾಧಿಪತಿಗಳು ಮಠಗಳ ಬಾಲಸನ್ಯಾಸದ ವಿಚಾರ ಎತ್ತಿಹಿಡಿದು ಕೋರ್ಟಿನಲ್ಲಿ ದಾವೆ ಹೂಡಿದ್ದೂ, ಇವರಿಬ್ಬರ ಮಧ್ಯದಲ್ಲಿ ಪೇಜಾವರ ಮಠಾಧೀಶರು ಪೌರೋಹಿತ್ಯವಹಿಸಿ ಈ ರೀತಿಯ ಮಠಾಂತರ ಕಾರ್ಯವನ್ನು ಅನುಮೋದಿಸಿ ಸ್ವಸ್ತಿ ವಾಚನ ಹೇಳಿ ಜನರ ಕಣ್ಣಿಗೆ ಮಂಕುಬೂದಿ ಹಚ್ಚುವಂತೆ ಪ್ರಕಟಿಸಿದ್ದೂ, ನೋಡುವಾಗ ಇವೆಲ್ಲಾ ಸ್ವಾರ್ಥಕ್ಕೋ ವಾ ನಿಸ್ವಾರ್ಥಕ್ಕೋ ಎಂಬುದನ್ನು ವಾಚಕರೇ ಊಹಿಸಬಹುದು.

ಈ ಪುಸ್ತಕದಲ್ಲಿ ವಾಕ್ಯದೋಷಗಳು, ಶಬ್ದದೋಷಗಳು ಇತ್ಯಾದಿಗಳು ಇದ್ದಪಕ್ಷದಲ್ಲಿ ಓದುಗರು ಅದನ್ನು ಕ್ಷಮಿಸಿ ಲೇಖಕನ ಸತ್ಯಶೋಧನೆಗೆ ಮನ್ನಣೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇಂತಿ,

ಡಾ|| ಮ. ಸು. ಅಚ್ಯುತ ಶರ್ಮ.



ಇದು ಉಡುಪಿಯ ಮಾಧ್ವರು ಆರಾಧಿಸುವ ಕಡಗೋಲು ಕೃಷ್ಣನೆಂದು ಹೇಳಲ್ಪಡುವ ವಿಗ್ರಹದ ಮೂಲ ಚಿತ್ರ. ಈ ವಿಗ್ರಹದ ಕೈಯಲ್ಲಿ ಒನಕೆಯಂತೆ ತೋರುವ ದಂಡವನ್ನು ಕಡಗೋಲು ಎಂದು ಹೇಳಲು ಸಾಧ್ಯವಿದೆಯೋ ? ಇದರ ಶರೀರ, ಮುಖ, ತಲೆಯ ಸುತ್ತಲೂ ಕುತ್ತಿಗೆ ವರೇಗೆ ಇರುವ ವಲಯಾಕಾರದ ಕಿರೀಟ, ಚಿಕ್ಕುಳಿಯಲ್ಲಿ ಹೊಡೆದು ಕಚ್ಚುಕಚ್ಚಿನಂತೆ ಮಾಡಲ್ಪಟ್ಟ ಮೈ, ಇತ್ಯಾದಿಗಳನ್ನು ನೋಡಿದರೆ ಇದನ್ನು ಬಾಲಕೃಷ್ಣನ ವಿಗ್ರಹವೆಂದು ಹೇಳಲು ಬರುವುದೆ? ಅಥವಾ ಒಂದು ಸ್ತ್ರೀ ವಿಗ್ರಹದಂತೆ ಕಾಣುತ್ತದೆಯೆ ? ಎಂಬುದನ್ನು ವಾಚಕರೇ ಊಹಿಸಿರಿ

॥ ಶ್ರೀ ಗಣೇಶಾಯ ನಮಃ ॥

॥ ಶ್ರೀ ಮದನಂತೇಶ್ವರ ಚಂದ್ರಮೌಳೀಶ್ವರಾಭ್ಯಾಂ ನಮಃ ॥

॥ ಶ್ರೀ ವೇಣುಗೋಪಾಲಕೃಷ್ಣಾಯ ನಮಃ ॥

ಉಡುಪಿ ಕ್ಷೇತ್ರದ ನೈಜ ಚಿತ್ರ, ಅದರ ಚಾರಿತ್ರಿಕ ಹಿನ್ನೆಲೆ ಮತ್ತು ಮಾಧ್ವಮಠಗಳು

★

ಉಡುಪಿ ಕ್ಷೇತ್ರವು ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಸುಬ್ರಹ್ಮಣ್ಯ, ಧರ್ಮಸ್ಥಳ, ಕೊಲ್ಲೂರು, ಇತ್ಯಾದಿ ಕ್ಷೇತ್ರಗಳಂತೆ ಒಂದು ಪ್ರಧಾನ ಪುರಾತನ ಶೈವಕ್ಷೇತ್ರವಾಗಿದೆ. ಈ ಕ್ಷೇತ್ರವು ಉಡುಪಿ ತಾಲೂಕು ಶಿವಳ್ಳಿ ಎಂಬ ಗ್ರಾಮದಲ್ಲಿದೆ. ಈ ಕ್ಷೇತ್ರದಲ್ಲಿ ಶ್ರೀಮದನಂತೇಶ್ವರ ಮತ್ತು ಶ್ರೀ ಚಂದ್ರಮೌಳೀಶ್ವರ ದೇವಾಲಯಗಳು ಇಲ್ಲಿಯ ಪ್ರಧಾನ ಪುರಾತನ ದೇವಾಲಯಗಳು. ಈ ಶಿವಾಲಯಗಳ ಇರುವಿಕೆಯಿಂದಲೇ ಈ ಗ್ರಾಮಕ್ಕೆ ಶಿವಳ್ಳಿ ಎಂಬ ಹೆಸರು ಬಂತು. ಈ ಶಿವಾಲಯಗಳ ಎಂಟು ದಿಕ್ಕಿನಲ್ಲಿ ಸಾಧಾರಣ ಮೂರು ನಾಲ್ಕು ಮೈಲು ದೂರದ ಅಂತರದಲ್ಲಿ ಎಂಟು ದುರ್ಗಾಲಯಗಳೂ ನಾಲ್ಕು ಸುಬ್ರಹ್ಮಣ್ಯ ವ ನಾಗದೇವಸ್ಥಾನಗಳೂ, ಅಲ್ಲದೆ ಗಣಪತಿ ದೇವಾಲಯಗಳೂ ಇವೆ. ಈ ಉಡುಪಿ ಪಟ್ಟಣವು ಶಿವಳ್ಳಿ, ಬಡಗುಬೆಟ್ಟು, ಕಡೆಕಾರು, ಮೂಡು ನಿಡುಂಬೂರು ಮತ್ತು ಪುತ್ತೂರುಗಳೆಂಬ ಐದು ಗ್ರಾಮಗಳ ಅಂಶಗಳನ್ನು ಒಳಗೊಂಡಿದೆ. ಉಡುಪಿಗೆ ಮೂರು ಮೈಲು ದೂರದಲ್ಲಿ ಇರುವ ಇಂದ್ರಾಳಿ ಎಂಬಲ್ಲಿ ಒಂದು ತೀರ್ಥಸ್ಥಳವಿದೆ. ಇಲ್ಲಿಂದ ಆರಂಭಿಸುವ ಒಂದು ಹೊಳೆಯು ಉಡುಪಿಯ ಮೂಡು ನಿಡುಂಬೂರು ಗ್ರಾಮದಿಂದ ಹರಿದು ಕಲ್ಮಾಡಿ ದಾಟಿ ಮಲ್ಪೆ ಹತ್ತಿರ ಸಮುದ್ರಕ್ಕೆ ಸೇರುತ್ತದೆ. ಪರ್ಕಳ ಎಂಬಲ್ಲಿಗೆ ಹತ್ತಿರ ಒಂದು ಜೋಗು (ಮಳೆಗಾಲದಲ್ಲಿ ಮಾತ್ರ) ಇದೆ. ಈ ಕ್ಷೇತ್ರವು ದಕ್ಷಿಣಕನ್ನಡ ಜಿಲ್ಲೆಯ ಮಧ್ಯಭಾಗದ ಕರಾವಳಿಯಲ್ಲಿದೆ. ಇದಕ್ಕೆ ಉತ್ತರದಲ್ಲಿ ಕುಂದಾಪುರ ತಾಲೂಕು, ಪೂರ್ವದಲ್ಲಿ ಕಾರ್ಕಳ

ತಾಲೂಕು, ದಕ್ಷಿಣದಲ್ಲಿ ಮಂಗಳೂರು ತಾಲೂಕು, ಪಶ್ಚಿಮದಲ್ಲಿ ಅರಬೀ ಸಮುದ್ರ ಇದರ ಮೇರೆಗಳಾಗಿವೆ.

ಈ ಕ್ಷೇತ್ರಕ್ಕೆ ಎಂಟು ದಿಕ್ಕಿನಲ್ಲಿರುವ ದುರ್ಗಾಲಯುಗಳ ವಿವರ:-

1. ಕಡಿಯಾಳಿಯುಲ್ಲಿ ಮಹಿಷಮರ್ದಿನಿ.
2. ಇಂದ್ರಾಳಿಯಲ್ಲಿ ಪಂಚದುರ್ಗ (ಲಿಂಗರೂಪ).
3. ಬೈಲೂರು ಮಹಿಷಮರ್ದಿನಿ ದೇವಾಲಯ.
4. ಅಲೆವೂರು ದುರ್ಗಾಪರಮೇಶ್ವರಿ ದೇವಾಲಯ.
5. ಉದಿಯಾವರದಲ್ಲಿ ಸಪ್ತಮಾತೃಕಾ ದೇವಾಲಯ, ಒಂದು ಗಣಪತಿ ದೇವಸ್ಥಾನ, ಒಂದು ಪೂಜೆಯಿಲ್ಲದೆ ಹರಕಲು ಗುಡಿಯಲ್ಲಿ ಭಿನ್ನವಾಗಿರುವ ಮಹಾದೇವನೆಂದು ಹೆಸರುಳ್ಳ ಶಿವಲಿಂಗವೂ, ಹತ್ತಿರವೇ ಗುಡ್ಡೆಯ ಮೇಲೆ ಶಂಭುಗಲ್ಲು ಎಂಬಲ್ಲಿ ಒಂದು ಶಿವಾಲಯವೂ ಹೀಗೆ ಶೈವ ಸಂಬಂಧವಾದ ದೇವಾಲಯ ಗಳಿವೆ.
6. ಕನ್ನರ್ಪಾಡಿ ಎಂಬಲ್ಲಿ ಜಯದುರ್ಗಾ ದೇವಾಲಯ.
7. ಪುತ್ತೂರು ಎಂಬಲ್ಲಿ ದುರ್ಗಾಪರಮೇಶ್ವರಿ ದೇವಾಲಯ (ಇಲ್ಲಿ ಅಮ್ಮನವರ ವಿಗ್ರಹವಿಲ್ಲ. ಬರೇ ಪೀಠಕ್ಕೆ ಪೂಜೆ ನಡೆಯುವುದಾಗಿದೆ.)
8. ಅಂಬಲಪಾಡಿಯಲ್ಲಿ ಮಹಾಕಾಳಿ ದೇವಾಲಯ. (ಈಗ ಇದಕ್ಕೆ ಪ್ರಶಸ್ತಿ ಕಡಿಮೆಯಾಗಿದೆ.) ಅಲ್ಲಿಯ ಜನಾರ್ಧನ ದೇವಾಲಯಕ್ಕೆ ಪ್ರಶಸ್ತಿ ಹೆಚ್ಚಿದೆ.

ಈ ಮೇಲಿನ ಎಂಟು ದೇವಾಲಯಗಳಲ್ಲದೆ, ಇಲ್ಲಿಂದ ಸಾಧಾರಣ ಆರೇಳು ಮೈಲು ದೂರದಲ್ಲಿ ಕುಂಜಾರುಗಿರಿ ಎಂಬಲ್ಲಿ ಮಹಿಷಮರ್ದಿನಿ ದೇವಾಲಯವೂ ಇದೆ. (ಟಿಪ್ಪಣಿ:- ಈ ಕುಂಜಾರು ದೇವಸ್ಥಾನದ ಅಮ್ಮನವರಿಗೆ ಸಲ್ಲುವ ಅಮೃತಪಡಿ ಅಕ್ಕಿಗೆ ಸಂಬಂಧಪಟ್ಟ ಆಸ್ತಿಗಳನ್ನು ಆ ದೇವಳಕ್ಕೆ ಸಂಮ್ಮಂಧಪಟ್ಟ ದೇವಕಾರ್ಯಸ್ಥರಾದ ಸ್ಥಾನೀಕಬ್ರಾಹ್ಮಣರು ಗೈಯುತ್ತಿರುವಾಗ ಇದರ ಪಟ್ಟಿಯು ಆ ಕುಂಜಾರು ದೇವಳಕ್ಕೆ ಸಮ್ಮಂದ ಪಡದೆ

ಅದವರಾರು ಮಠದ ಮಾಧ್ವಸ್ವಾಮಿಗಳ ಕಾಳಿಂಗಮರ್ಧನ ದೇವರ ಹೆಸರಲ್ಲಿ ರುವುದು ವಿಚಿತ್ರವೂ ಶೋಧನೀಯವೂ ಆಗಿದೆ.)

ಈ ದೇವಾಲಯಗಳಲ್ಲದೆ ಉಡುಪಿಗೆ ಹತ್ತಿರ ಸುತ್ತಲೂ ಸ್ವಲ್ಪ ದೂರದಲ್ಲಿ ಮಾಗೋಡು, ತಾಂಗೋಡು, ಮುಚ್ಚಿಲಗೋಡು ಮತ್ತು ಆರಿ ಕೋಡು ಎಂಬಲ್ಲಿ ನಾಲ್ಕು ಸುಬ್ರಹ್ಮಣ್ಯ ವ ನಾಗದೇವಾಲಯಗಳಿವೆ.

ಮೇಲೆ ವಿವರಿಸಿದ ಎಲ್ಲಾ ಶಿವಸಮ್ಬಂಧವಾದ ದೇವಾಲಯಗಳು ಉಡುಪಿಗೆ ಸಮ್ಬಂಧಪಟ್ಟವುಗಳಾಗಿವೆ. ಇವೆಲ್ಲಾ ಮಾಧ್ವರು ಇಲ್ಲಿಗೆ ಪ್ರವೇ ಶಿಸುವ ಮುಂಚೆ ಪಂಚದ್ರಾವಿಡರಲ್ಲಿ ಸೇರಿದ ಸ್ಥಾನೀಕ ಶಿವಬ್ರಾಹ್ಮಣರ ಆಡಳಿತೆ ಮತ್ತು ಪೂಜೆಯಲ್ಲಿತ್ತು. ಇವರ ಗುರುಗಳಾದ ಶ್ರೀ ಶೃಂಗೇರಿ ಜಗದ್ಗುರುಗಳ ಆರಾಧ್ಯದೇವರಾದ ಶ್ರೀ ಚಂದ್ರಮೌಳೀಶ್ವರ ಲಿಂಗವು ಶ್ರೀ ಮದನಂತೇಶ್ವರ ದೇವರೆದುರಿನಲ್ಲಿ ಶ್ರೀ ಶೃಂಗೇರಿ ಗುರುಗಳಿಂದಲೇ ಪ್ರತಿಷ್ಠಿಸಲ್ಪಟ್ಟ ನಂತರವೇ ಇಲ್ಲಿಗೆ ಉಡುಪಿ ಎಂಬ ಹೆಸರು ಬಂದದ್ದಾಗಿದೆ. (ಉಡು=ನಕ್ಷತ್ರಗಳು, ಪತಿ=ಯಜಮಾನ= ಚಂದ್ರ-ಇವನನ್ನು ಶಿರಸ್ಸಿ ನಲ್ಲಿ ಧರಿಸಿದವನು ಚಂದ್ರಮೌಳೀಶ್ವರvide (III Std. Geography Part II by Laxman Rao, 1913).

ಈ ಉಡುಪಿಗೆ ಮಾಧ್ವರ ಪ್ರವೇಶದ ನಂತರ ಮಲ್ಪೆಯ ಹತ್ತಿರ ಇರುವ ವಡಭಾಂಢೇಶ್ವರ ದೇವಾಲಯದಲ್ಲಿ ಮುಂಚಿನ ಮಲ್ಲಿಕಾರ್ಜುನ ವಿಗ್ರಹವನ್ನು ಕಿತ್ತು ಬಲರಾಮನನ್ನು ಪ್ರತಿಷ್ಠಿಸಿದ್ದೂ, ನಿಟ್ಟೂರಿನಲ್ಲಿದ್ದ ಸೋಮನಾಥ ಲಿಂಗ ವನ್ನು ತಪ್ಪಿಸಿ ಆ ಸ್ಥಳದಲ್ಲಿ ವೆಂಕಟ್ರಮಣನನ್ನು ಇರಿಸಿದ್ದೂ ಇವರ ಮತಾ ಸಕ್ತಿಯನ್ನು ಸೂಚಿಸುವುದಾಗಿದೆ.

ಈ ಪುರಾತನ ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಾಲಯ ಗಳ ಸುತ್ತಲೂ ಈಗ ರಥ ಬೀದಿಗಳೆಂದು ಹೇಳಲ್ಪಡುವ ನಾಲ್ಕು ದೊಡ್ಡ ಹೊರ ಅಂಗಣಗಳಿವೆ. ಈ ನಾಲ್ಕು ಅಂಗಣಗಳಿಂದ ನಾಲ್ಕು ದಿಕ್ಕಿಗೂ ನಾಲ್ಕು ರಸ್ತೆಗಳು ಹೋಗಿವೆ. ತೆಂಕು ದಿಕ್ಕಿನ ರಸ್ತೆಗೆ ತೆಂಕು ಪೇಟೆಯೆಂ ತಲೂ, ಬಡಗು ದಿಕ್ಕಿನ ರಸ್ತೆಗೆ ಬಡಗು ಪೇಟೆಯೆಂತಲೂ, ಪಡುದಿಕ್ಕಿನ ರಸ್ತೆಗೆ ಪಡುಪೇಟೆಯೆಂತಲೂ ಹೆಸರುಗಳಿವೆ. ಮೂಡುದಿಕ್ಕಿನ ರಸ್ತೆ ಬದಿಯಲ್ಲಿ ವ್ಯಾಪಾರದ ಅಂಗಡಿಗಳು ಇಲ್ಲದೆ ಇರುವುದರಿಂದ ಅದಕ್ಕೆ

ಮೂಡುಪೇಟೆ ಎಂಬ ಹೆಸರು ಬರಲಿಲ್ಲ. ಬಡಗು ರಸ್ತೆಯಿಂದ ಹೋದರೆ ಕಾರ್ಕಳ ಕಲ್ಯಾಣಪುರ ರಸ್ತೆಗಳು ಸೇರುವ ಕಲ್ಸಂಕವೆಂಬಲ್ಲಿಗೂ ತೆಂಕು ರಸ್ತೆಯಿಂದ ಹೋದರೆ ಒಳಕಾಡು ದಾರಿಯಾಗಿ ಅಲೆವೂರಿಗೆ ಹೋಗುವ ರಸ್ತೆಗೂ, ಪಡುರಸ್ತೆಯಲ್ಲಿ ಹೋದರೆ ಸರ್ವಿಸ್ ಬಸ್‌ಸ್ಟೇಂಡ್ ವಗೈರೆ ಸ್ಥಳಗಳಿಗೂ ಹೋಗಬಹುದು.

ಈ ಎರಡು ಶಿವಾಲಯಗಳ ಹೊರ ಬಡಗು ಅಂಗಣದ ಈಶಾನ್ಯ ಮೂಲೆಯಲ್ಲಿ ಅಂಗಣದ ಸ್ವಲ್ಪ ಅಂಶವನ್ನು ಆಕ್ರಮಿಸಿ ಶ್ರೀಕೃಷ್ಣ ಮಠವೆಂದು ಹೇಳಲ್ಪಡುವ ಶ್ರೀ ಕೃಷ್ಣ ಮಂದಿರವೂ ಇದೆ. ಈ ಕೃಷ್ಣ ಮಂದಿರದ ಕನಕನ ಕಿಂಡಿ ಎಂದು ಹೇಳಲ್ಪಡುವ ಕಿಟಕಿಗೆ ಮುಖಮಾಡಿ ಪಡುದಿಕ್ಕಿನಲ್ಲಿ ಇತ್ತೀಚೆಗೆ ಸರಕಾರದವರ ಖರ್ಚಿನಿಂದ ಕಟ್ಟಿಸಿ ಪ್ರತಿಷ್ಠಿಸಿದ ಕನಕದಾಸನ ವಿಗ್ರಹದಿಂದ ಕೂಡಿದ ಮಂಟಪಾಕಾರದ ಗುಡಿಯೊಂದಿದೆ.

ಈ ಮೇಲೆ ಹೇಳಿದ ಕೃಷ್ಣ ಮಂದಿರದಲ್ಲಿ ಎರಡು ವರ್ಷಕ್ಕೊಮ್ಮೆ ಪರ್ಯಾಯ ರೂಪದಲ್ಲಿ ಅರ್ಚಕತನವನ್ನು ಮಾಡುವ ಎಂಟು ಮಾಧ್ವ ಯತಿಗಳ ವಸತಿ ಮಠಗಳು ಇಲ್ಲಿಯ ಪ್ರಧಾನ ಶ್ರೀಮದನಂತೇಶ್ವರ ಮತ್ತು ಚಂದ್ರ ಮೌಳೀಶ್ವರ ದೇವಾಲಯಗಳ ಹೊರ ಅಂಗಣದ ಸುತ್ತಲೂ ಬೇಲಿ ಹಾಕಿದಂತೆ ಆವರಿಸಿವೆ. ಮೂಡುದಿಕ್ಕಿನ ಬಡಗು ಪಾರ್ಶ್ವದಲ್ಲಿ ಕಾಣಿಯೂರು ಮಠವೂ, ತೆಂಕು ದಿಕ್ಕಿನ ಅತಿ ಮೂಡುಭಾಗದಲ್ಲಿ ಮೂಡು ರಸ್ತೆಯು ಸೇರುವಲ್ಲಿ ಸೋದೆ ಮಠವೂ ಅದಕ್ಕೆ ತಾಗಿ ತೆಂಕು ದಿಕ್ಕಿನ ಪಡುಭಾಗದಲ್ಲಿ ಪುತ್ತಿಗೆ ಮಠವೂ, ತೆಂಕು ದಿಕ್ಕಿನ ಪಡುಭಾಗದಲ್ಲಿ ಅಂದರೆ, ನೈಋತ್ಯ ಭಾಗದಲ್ಲಿ ಅದಮಾರು ಮಠವೂ, ಅದಕ್ಕೆ ತಾಗಿ ಪಡುಕ್ಕಿನ ತೆಂಕು ಭಾಗದಲ್ಲಿ ಪೇಜಾವರ ಮಠವೂ, ಪಡುದಿಕ್ಕಿನಲ್ಲಿ ಪಡುಪೇಟೆಗೆ ಹೋಗುವ ರಸ್ತೆಗೆ ತಾಗಿ ಫಲಿಮಾರು ಮಠವೂ, ಬಡಗುದಿಕ್ಕಿನ ಪಡುಭಾಗದಲ್ಲಿ ಕೃಷ್ಣಾಪುರ ಮಠವೂ, ಬಡಗು ದಿಕ್ಕಿನ ಬಡಗು ರಸ್ತೆಗೆ ತಾಗಿ ಬಡಗು ಅಂಗಣದ ಬದಿಯಲ್ಲಿ ಶ್ರೀ ಕೃಷ್ಣ ಮಂದಿರದ ಹತ್ತಿರ ಶೀರೂರು ಮಠವೂ ಈ ರೀತಿ ಎಂಟು ಮಠಗಳು ಮಾಳಿಗೆ ಕಟ್ಟೋಣಗಳಿಂದ ಕಟ್ಟಲ್ಪಟ್ಟು ನೋಟಕರಿಗೆ ಅನಂತೇಶ್ವರ ಚಂದ್ರಮೌಳೀಶ್ವರ ದೇವಾಲಯಗಳಿಗೆ ಇತರರು ಪ್ರವೇಶಿಸದಂತೆ ಕಾವಲುಗಾರರಾಗಿ ನಿಂತು ದಿಗ್ಬಂಧನ ಮಾಡಿದಂತೆ ತೋರುತ್ತದೆ. ಈ ಎಂಟು ಮಠಗಳಲ್ಲದೆ ಪಡುದಿಕ್ಕಿನ ಬಡಗು ಬದಿಯಲ್ಲಿ ಮಾಧ್ವಮತದವರೇ ಆದ

ಶ್ರೀ ರಾಘವೇಂದ್ರ ಸ್ವಾಮಿಗಳ ವಸತಿ ಮಠವೂ ಕೂಡಾ ಇದೆ. ಈ ಮೇಲೆ ಹೇಳಿದ ಎಂಟು ಮಠದ ಯತಿಗಳು ಪರವೂರಿನವರು–ಉಡುಪಿಯವರಲ್ಲ.

ಇಲ್ಲಿಯ ಅನಂತೇಶ್ವರ ಚಂದ್ರಮೌಳೀಶ್ವರ ದೇವಸ್ಥಾನಗಳ ಸುತ್ತಲೂ ಅವುಗಳ ಗೋಡೆಗಳಿಗೆ ತಾಗಿ ಅಂಗಡಿ ಸಾಲುಗಳೂ ಹೋಟೇಲುಗಳೂ ತುಂಬಿರುವುದರಿಂದ ಹೊರಗಿನಿಂದ ಬಂದ ಭಕ್ತಾದಿಗಳಿಗೆ ಆ ಶಿವಾಲಯುಗಳೆರಡೂ ಇವೆ ಎಂದು ತಿಳಿಯಲು ಸಾಧ್ಯವಿಲ್ಲವಾಗಿದೆ. ಹೊರ ಅಂಗಣಗಳ ಎರಡು ಪಾರ್ಶ್ವಗಳಲ್ಲೂ ಅಲ್ಲದೆ ಆ ಎರಡು ಶಿವಾಲಯುಗಳ ಮಧ್ಯದಲ್ಲಿರುವ ಇಕ್ಕಟ್ಟಾದ ಸ್ಥಳದ ಎರಡು ಬದಿಗಳಲ್ಲೂ ಅಂಗಡಿಗಳ ಸಾಲುಗಳೇ ತುಂಬಿರುವುದರಿಂದ ಈ ನಾಲ್ಕೂ ಅಂಗಣಗಳು ನಾಲ್ಕು ಬೀದಿಗಳಂತೆ ತೋರುತ್ತವೆ. ಈ ಅಂಗಡಿ ಸಾಲುಗಳಿಂದ ಈ ಶಿವಾಲಯುಗಳು ಮುಚ್ಚಲ್ಪಟ್ಟು ಇವುಗಳ ಅಸ್ತಿತ್ವವೇ ತಿಳಿಯ ಬರುವುದಿಲ್ಲ. ಉಡುಪಿಗೆ ಬಂದ ಭಕ್ತಾದಿಗಳಿಗೆ ಅಲ್ಲಿರುವ ಮಾಧ್ವರು ತಮ್ಮ ಕೃಷ್ಣ ಮಂದಿರವನ್ನು ಮಾತ್ರ ತೋರಿಸುವರಲ್ಲದೆ. ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಾಲಯುಗಳು ಇವೆ ಎಂದು ಸಹ ತಿಳಿಸುವುದಿಲ್ಲ. ಒಂದು ವೇಳೆ ಆ ಭಕ್ತಾದಿಗಳು ಆ ಶಿವಾಲಯುಗಳ ವಿಷಯದಲ್ಲಿ ಪ್ರಶ್ನಿಸಿದರೆ, ಅದಕ್ಕೆ ಅಲ್ಲಿಯ ಮಾಧ್ವರು ಇಲ್ಲಿಯ ಶ್ರೀ ಕೃಷ್ಣನ ಸಂದರ್ಶನ ಮಾಡಿದ ನಂತರ ಇತರ ಯಾವ ದೇವಸ್ಥಾನಗಳನ್ನು ಸಂದರ್ಶಿಸುವ ಅಗತ್ಯವಿಲ್ಲವೆಂದೂ ಹೇಳಿ ಆ ಶಿವಾಲಯುಗಳ ಹತ್ತಿರ ಹೋಗದಂತೆ ಮಾಡಿ ಕಳುಹಿಸಿಕೊಡುತ್ತಾರೆ. ಆ ಶಿವಾಲಯುಗಳಿವೆಯೆಂದು ತಿಳಿಯಬೇಕಾದರೆ ಅವುಗಳ ಮಹಾ ದ್ವಾರಗಳ ಹತ್ತಿರ ಹೋದರೆ ಮಾತ್ರ ತಿಳಿಯಬಹುದು. ಈಶಾನ್ಯ ಭಾಗದಲ್ಲಿರುವ ಮಾಧ್ವ ಶ್ರೀ ಕೃಷ್ಣ ಮಂದಿರವು ಎಲ್ಲರಿಗೂ ಉತ್ಸವ ಬೀದಿಗೆ ಇಳಿದು ಬಡಗು ದಿಕ್ಕಿಗೆ ತಿರುಗಿದೊಡನೆ ಕಾಣಸಿಗುತ್ತದೆ.

ಶ್ರೀ ಮದನಂತೇಶ್ವರ ದೇವಸ್ಥಾನ

ಇದು ಉಡುಪಿಯಲ್ಲಿ ಪ್ರಧಾನ ಅತಿ ಪುರಾತನ ದೇವಸ್ಥಾನ. ಇದು ಚಂದ್ರಮೌಳೀಶ್ವರ ದೇವಾಲಯುದ ಪಡುಬದಿಯಲ್ಲಿ ಸ್ವಲ್ಪ ಎತ್ತರದ ಸ್ಥಳದಲ್ಲಿದೆ. ಈ ದೇವಸ್ಥಾನಕ್ಕೆ ಒಳಗಡೆ ವಿಶಾಲವಾದ ಒಳ ಅಂಗಣವಿದೆ. ಇದರ ಅರ್ಧ ಚಂದ್ರಾಕಾರದ ದೊಡ್ಡದಾದ ಗರ್ಭಗೃಹದಲ್ಲಿ ದೊಡ್ಡ ಪ್ರಮಾಣದ

ಅನಂತೇಶ್ವರ ಲಿಂಗವಿದೆ. ಇದರ ಗರ್ಭಗೃಹವು ಶಿಲಾ ಸ್ಥಂಭಗಳಿಂದ ಕಟ್ಟಲ್ಪಟ್ಟು ಕೆಳಗಿನ ಮಾಡಿಗೆ ಸಾಧಾರಣ 9 ಇಂಚು ದಪ್ಪದ ಶಿಲಾ ಹಲಗೆಗಳಿಂದ ಮುಚ್ಚಲ್ಪಟ್ಟದ್ದಾಗಿ, ಮೇಲ್ಭಾಗದ ಮಾಡನ್ನು ದಪ್ಪದ ತಾಂಮ್ರದ ತಗಡಿನಿಂದ ಮುಚ್ಚಿ ಶಿಖರವನ್ನು ಇಟ್ಟದ್ದಾಗಿರುತ್ತದೆ. ಇದರ ಶಿಲ್ಪವನ್ನು ನೋಡಿದಾಗಲೇ ಇದು ಅತೀ ಪುರಾತನ ಶಿವಾಲಯವೆಂದು ಸ್ಪಷ್ಟವಾಗುತ್ತದೆ. ಇಲ್ಲಿಗೆ ಮಾಧ್ವರು ಪ್ರವೇಶಿಸುವ ಮುಂಚೆ ಈ ದೇವಳದ ಆಡಳಿತೆ ಪೂಜೆ ಮೊದಲಾದುವುಗಳು ಶೃಂಗೇರಿ ಮಠದ ಶಿಷ್ಯರಾದ ಸ್ಥಾನಿಕ ಶಿವಬ್ರಾಹ್ಮಣರ ವಶದಲ್ಲಿತ್ತು. ಮಾಧ್ವರ ಪ್ರವೇಶದ ನಂತರ ಇಲ್ಲಿಯ ಅನಂತೇಶ್ವರನನ್ನು ಅನಂತಾಸನನೆಂದು ಕರೆಯುವ ವಾಡಿಕೆಯನ್ನು ತರಲು ಪ್ರಯತ್ನಿಸಿದರು. ಈ ದೇವರಿಗೆ ಚಂದ್ರಮೌಳೀಶ್ವರನೊಂದಿಗೆ ವರ್ಷಕ್ಕೊಂದು ಸಲ ಮಹೋತ್ಸವವು ನಡೆಯುವುದು ಇದೆ. ಶ್ರೀ ಕೃಷ್ಣನಿಗೆ ಯಾವ ಒಂದು ದೊಡ್ಡ ಉತ್ಸವವು ನಡೆಯುವುದಿದ್ದರೂ ಅದಕ್ಕೆ ಮುಂಚೆ ಅನಂತೇಶ್ವರ ಚಂದ್ರಮೌಳೀಶ್ವರರು ರಥಾರೋಹಣ ಮಾಡಿ ಬೀದಿಯಲ್ಲಿ ಬಂದು ನಿಂತ ನಂತರವೇ ಶ್ರೀ ಕೃಷ್ಣನು ಉತ್ಸವ ಹೊರಟು ರಥಾರೋಹಣವನ್ನು ಮಾಡಿ ಹೊರಡುವುದು ಇಲ್ಲಿಯ ವಾಡಿಕೆ. ಅದು ಈಗಲೂ ನಡೆಯುತ್ತದೆ. ಈ ಶಿವಾಲಯಗಳ ಅರ್ಚಕರು ಈಗ ಮಾಧ್ವ ವೈಷ್ಣವರು. ಇವರಿಗೆ ಶಿವಾಲಯಗಳ ಸಮ್ಮಂಧಪಟ್ಟ ಶೈವಾಗಮದ ವಿಚಾರ ಸ್ವಲ್ಪವೂ ಗೊತ್ತಿಲ್ಲದಿದ್ದರೂ ಲಿಂಗದ ಹತ್ತಿರ ಇವರ ಸಾಲಿಗ್ರಾಮ ಇಟ್ಟು ಅದರ ಪೂಜೆಮಾಡಿ ಅನಂತೇಶ್ವರನ ಪೂಜೆ ಮಾಡುತ್ತೇವೆಂದು ಜನತೆಗೆ ತೋರಿಸಿ ಜನರನ್ನು ಆಕರ್ಷಿಸುತ್ತಾರೆ. ಇಲ್ಲಿ ಈಶ್ವರನಿಗೆ ಪ್ರಿಯವಾದ ಬಿಲ್ವಪತ್ರೆ ಮತ್ತು ವಿಭೂತಿಯ ಉಪಯೋಗವು ಇರುವುದಿಲ್ಲ. ಇದರ ಬದಲಿಗೆ ತುಲಸೀ ಗಂಧ ಕೊಡುವುದಾಗಿದೆ. ಈ ಅನಂತೇಶ್ವರ ದೇವಸ್ಥಾನದ ನಂದಿಯನ್ನು ಉಡುಪಿಯಿಂದ ಸಾಧಾರಣ 5 ಮೈಲು ದೂರ ಇರುವ ಪರೀಕ ಈಶ್ವರ ದೇವಸ್ಥಾನದಲ್ಲಿ ಇರಿಸಿದ್ದಾರಾಗಿ ತಿಳಿದು ಬರುತ್ತದೆ. ಈ ಮೊದಲು ಇಲ್ಲಿ ಉತ್ಸವ ಕಾಲದಲ್ಲಿ ನಂದಿಯನ್ನು ಧ್ವಜಕ್ಕೆ ಏರಿಸುವ ಪದ್ಧತಿ ಇತ್ತು. ಅದಮಾರು ಮಠದ ಸ್ವಾಮಿಗಳಲ್ಲೊಬ್ಬರು ಅವರ ಮುಕ್ತೇಸರಿಕೆ ಕಾಲದಲ್ಲಿ ಆ ಪದ್ಧತಿಯನ್ನು ನಿಲ್ಲಿಸಿ ಧ್ವಜಕ್ಕೆ ಗರುಡನನ್ನು ಏರಿಸುವ ಪದ್ಧತಿಯನ್ನು ತಂದದ್ದಾಗಿ ಬರುತ್ತದೆ.

ಈ ಅನಂತೇಶ್ವರ ಲಿಂಗಕ್ಕೆ ಭಿನ್ನ ಬಂದಿರುವುದಾಗಿ ತಿಳಿದು ಬರುತ್ತದೆ.


ಅದು ಕಾಣದಂತೆಯೂ, ಲಿಂಗ ಕೆಳಗೆ ಬೀಳದಂತೆ ಮಾಡಲು ಅದಕ್ಕೆ ತಾಮ್ರದ ತಗಡು ಒಂದನ್ನು ಸುತ್ತು ವರಿಸಿ ಮುಚ್ಚಿದ್ದಾಗಿಯೂ ತಿಳಿದು ಬರುತ್ತದೆ. ಇಲ್ಲಿಯಾಗಲೀ ಶ್ರೀ ಕೃಷ್ಣ ಮಂದಿರದಲ್ಲಾಗಲೀ ಸಮಾರಾಧನೆ ಆಗುವ ಕಾಲದಲ್ಲಿ ಇದರ ಮೂಲಪುರುಷರಾದ ಸ್ಥಾನಿಕ ಶಿವ ಬ್ರಾಹ್ಮಣ ಸಮಾಜದವರಿಗೆ ಈ ದೇವಳದ ಒಳ ಅಂಗಣದ ಗೋಪುರದಲ್ಲಿ ಭೋಜನ ಹಾಕುವ ಪದ್ಧತಿ ವಾಡಿಕೆಯಲ್ಲಿದೆ.

ಈ ದೇವಳದ ಗರ್ಭಗೃಹದ ಹೊರಮಂಟಪದ ಬಲಭಾಗದಲ್ಲಿ ಇರುವ ಸ್ವಲ್ಪ ಸ್ಥಳವನ್ನು ಮಧ್ವಾಚಾರ್ಯರು ತಮ್ಮ ಶಿಷ್ಯರಿಗೆ ಪಾಠ ಹೇಳಲು ಕುಳಿತುಕೊಂಡ ಸ್ಥಳವೆಂದು ಹೇಳಿಕೊಂಡು ಅಲ್ಲಿಗೆ ಪರ್ಯಾಯ ಸ್ವಾಮಿಗಳು ಅವರ ಪರ್ಯಾಯ ಕಾಲದಲ್ಲಿ ಹೋಗಿ ಅಲ್ಲಿ ಮಧ್ವಾಚಾರ್ಯರನ್ನು ಪೂಜಿಸುವ ಕ್ರಮವಿದೆಯೆಂದು ಅಲ್ಲಿಯ ಮಾಧ್ವರು ಹೇಳುತ್ತಾರೆ. ಈ ವಿಷಯದಲ್ಲಿ ಈಗ ಕೆಲವು ಸಮಯಗಳಿಂದ ಮಠದ ಸ್ವಾಮಿಗಳಿಗೂ ಈ ದೇವಳದ ಟ್ರಸ್ಟಿಗಳಿಗೂ ಸ್ವಲ್ಪ ವಿವಾದ ನಡೆಯುತ್ತಿತ್ತೆಂದು ತಿಳಿದುಬರುತ್ತದೆ.

ಈ ಅನಂತೇಶ್ವರ ದೇವಸ್ಥಾನವು ಬಹಳ ಪುರಾತನವೆಂಬುದು ನಿರ್ವಿವಾದವಾಗಿದೆ. ಏಕೆಂದರೆ ಬಾರ್ಕೂರು ರಾಜ್ಯವು ಪ್ರಬಲವಾಗಿದ್ದಾಗ ಆ ರಾಜ್ಯದ ಮತ್ತು ಅವರ ಮನೆತನದ ಪ್ರಧಾನ ದೇವಸ್ಥಾನವು ಇದೇ ಅನಂತೇಶ್ವರ ದೇವಸ್ಥಾನವೆಂದೂ, ನಮ್ಮ ಜಿಲ್ಲೆಯಲ್ಲಿ ಅಳಿಯಸಂತಾನ ಕಟ್ಟನ್ನು ಪ್ರಥಮ ಬಳಕೆಗೆ ತಂದವನಾದ ಬಾರಕೂರಿನ ಭೂತಾಳಪಾಂಡ್ಯನು ತಾನು ತಯಾರು ಮಾಡಿದ ಅಳಿಯಕಟ್ಟಿನ ಪ್ರಥಮ ಲೇಖನವನ್ನು ಅನಂತೇಶ್ವರ ದೇವರ ಮಧ್ಯಮಂಟಪದಲ್ಲಿ ಸ್ಥಾಪನೆ ಮಾಡಿದ್ದನೆಂದು ಹಳೇ ಗ್ರಂಥಗಳಿಂದ ತಿಳಿದು ಬರುತ್ತದೆ. (ಟಿಪ್ಪಣಿ- ಭೂತಾಳಪಾಂಡ್ಯನ ಅಳಿಯ ಸಂತಾನದ ಕಟ್ಟುಕಟ್ಟಳೆ-ಮಂಗಳೂರು ಜರ್ಮನ್ ಮಿಶನ್ ಪ್ರೆಸ್‌ನಲ್ಲಿ 1857ರಲ್ಲಿ ಪ್ರಕಟಿಸಲ್ಪಟ್ಟ ಪುಸ್ತಕದಲ್ಲಿ ಹೀಗಿದೆ—

"ಆಮೇಲೆ ಆರುವರ್ಷ ಪರಿಯಂತ ಆ ಅರಸನು ರಾಜ್ಯಭಾರ ಮಾಡಿಕೊಂಡಿರುವ ಮಧ್ಯದಲ್ಲಿ ಆ ಪೇಳ್ಯ ಮಕ್ಕಳಸಂತಾನ ತೆಗೆದು ಅಳಿಯ ಸಂತಾನದ ಕಾರಣವೆಂತೆಂದಡಾ—ಆರನೇ ವರ್ಷ ಚಿತ್ರಭಾನು ಸಂವತ್ಸರದಲ್ಲಿ ಆ ದೇವಪಾಂಡ್ಯನ ಹಡಗುಗಳು ಗಂಗತ್ತಲೆ ಹಿಮ ಮುಸುಕಿದ ದ್ವೀಪಾಂತರಕ್ಕೆ ಹೋಗಿ ಅಲ್ಲಿ ಒಂದುಕಡೆ ಕೆಸರಲ್ಲಿ ಹೂಳಿ, ಆಗ ಹಡಗು

ಗಳಲ್ಲಿ ತುಂಬಿಸಿದ ಜೇನಸು ನೀರು ಸಹ ಖರ್ಚು ಆದ ವೇಳೆಯಲ್ಲಿ ಈ ದೇವಪಾಂಡ್ಯನ ಕಡೆ ಆ ಹಡಗುಗಳ ನೊಕಸ್ತಾನಾರಾಯಣ ಪಾಂಡ್ಯ ಎಂಬಾತನು ಆ ಹಡಗುಗಳ ಜನರುಗಳು ದುಃಖಪಡುತ್ತಿರುವ ಸಮಯ ಈ ಕುಂಡೋದರನು ಪ್ರಸನ್ನನಾಗಿ-ಎಲೇ ನಾರಾಯಣ ಪಾಂಡ್ಯನೇ ಕೇಳು ನೀನು ಭಯಪಡಬೇಡ-ಇದರಿಂದ ಪಶ್ಚಿಮದಿಕ್ಕಿನಲ್ಲಿ ಒಂದು ಪರ್ವತ ಉಂಟು. ಅಲ್ಲಿ ಹಿಂದೆ ಸಿದ್ಧರು ಮಾಡಿದ ಸಿದ್ಧರಸಗಳುಂಟು, ಹಸುರು ಶಿಲೆಗಳುಂಟು, ಆ ಸಿದ್ಧರಸಗಳ ಕೊಪ್ಪರಿಗೆ ಮೊದಲಾದ ಪಾತ್ರಗಳಲ್ಲಿ ತುಂಬಿಸಿಕೊ, ಆ ಹಸುರು ಶಿಲೆಗಳನ್ನು ತುಂಬಿಸಿಕೊ, ಆಗ್ಗೆ ನನ್ನ ಪ್ರಾರ್ಥನೆಯಂ ಮಾಡು, ಆಗ ಈ ಮೂರು ಹಡಗುಗಳೂ ಏಳುತ್ತಾವೆಂದು ನುಡಿದು ಹಿರಿಯುತಿದ್ದಂ. ಆಗ ಬಿಡದೋಣಿಗಳ ಬಿಟ್ಟು ಹಸುರುಶಿಲೆ ಸಿದ್ಧರಸಗಳ ತುಂಬಿಸಿ ಕುಂಡೋದರನಿಗೆ ಪ್ರಾರ್ಥನೆಯಂ ಮಾಡಲು ಆ ವೇಳ್ಯದಲ್ಲಿ ಮಹಾ ಸುಳಿಗಾಳಿ ಗಳೆದ್ದು ಆ ಹಡಗುಗಳು ಹಂಗಾರಕಟ್ಟೆಯೆಂಬ ಅಳಿವೆ ಬಾಗಿಲಿನಿಂದ ಒಳಗಾಗಿ ಕಲ್ಯಾಣಪುರದಲ್ಲಿ ನೆಲೆಗೊಂಡವು. ಆಗ ಅಲ್ಲಿಯ ಸಾಹುಕಾರರುಗಳು ಬಂದು ಶೃತದೃಷ್ಟ ಮಾಡುವಾಗ್ಗೆ ಅದರಲ್ಲಿ ಹಸುರುಶಿಲೆ ಸಿದ್ಧರಸಗಳು ಸಹ ಇರುವುದರಿಂದ ಭೂತಾಳಪಾಂಡ್ಯರಾಯನಿಗೆ ಅರಿಕೆ ಮಾಡಿದರು. ಆಗ ಆ ಭೂತಾಳಪಾಂಡ್ಯರಾಯನು ಬಂದು ಎರಡನೇ ಶೃತದೃಷ್ಟ ಮಾಡುವ ವೇಳ್ಯದಲ್ಲಿ ತನ್ನ ಮಾವನಾದ ದೇವಪಾಂಡ್ಯನ ಹಡಗುಗಳಾದ ಕಾರಣ ಆ ವೇಳ್ಯದಲ್ಲಿ ಪಾಂಡ್ಯದೇಶಕ್ಕೆ ಕಳುಹಿಸಿಕೊಟ್ಟು ತನ್ನ ಮಾವ ದೇವಪಾಂಡ್ಯ ನನ್ನೂ ಕರಿಸಿ ನಿನ್ನ ಹಡಗಿನಲ್ಲಿ ಬಂದ ಒಡವೆವಸ್ತುಗಳನ್ನು ತೆಗೆದುಕೊಂಡು ಹೋಗು ಎಂತ ಈ ಭೂತಾಳಪಾಂಡ್ಯರಾಯನು ಹೇಳುತ್ತಿರುವ ಸಮಯದಲ್ಲಿ ಆಗ ಕುಂಡೋದರನು ಈತನ ಮಕ್ಕಳೊಳಗೆ ಯಾರನ್ನಾದರೂ ಬಲಿ ಕೊಡವೆ ಹಡಗವನ್ನು ಬಿಡೆಯೆಂದೆನು. ಆಗ ತನ್ನ ಹೆಂಡತಿ ಮಕ್ಕಳನ್ನು ಕರಿಸಿ ಈ ಒಡವೆ ವಸ್ತುಗಳ ತೋರಿಸಿ ಇದರೊಳಗೆ ಯಾರನ್ನಾದರೂ ಬಲಿ ಕೊಡುವಯುಂತ ಹೇಳಿ ಆಲೋಚಿಸುವ ಸಮಯದಲ್ಲಿ, ಈ ಹತ್ತುಸಾವಿರ ಮಹಾಜಗತ್ತಿನ ಮುಂದೆ ಈ ಒಡವೆ ವಸ್ತುಗಳಿಗೆ ಕಾರಣವಿಲ್ಲವೆಂದು ಪ್ರಜೆ ಇಳಿದು ಹೋದಳು. ಆಗ್ಗೆ ಈ ಹತ್ತುಸಾವಿರ ಮಹಾಜಗತ್ತಿನವರು ಅರಸು ಪರಿವಾರ ಮೊದಲಾಗಿ ಈ ಭೂತಾಳ ಪಾಂಡ್ಯನ ಆದಿ ವೃತ್ತಾಂತಂ ಗಳಂ ತಿಳಿದು ಈ ಭೂತಾಳ ಪಾಂಡ್ಯರಾಯನೇ ಬಾಧ್ಯಸ್ಥನೆಂದು ಈ



ಉಡುಪಿಯ ಶ್ರೀಮದನಂತೇಶ್ವರ ದೇವಾಲಯ



ಉಡುಪಿಯ ಶ್ರೀ ಅನಂತೇಶ್ವರ ದೇವಾಲಯದ ಪ್ರಧಾನ ಬಲಿಪೀಠ

ಜನರು ನಿವೃತ್ತಿ ಪ್ರಕಾರಕ್ಕೆ ಆ ಸಿದ್ಧರಸಗಳನ್ನು ಸಿದ್ಧಶಿಲೆಗಳನ್ನು ತಾನೇ ಬಾಧ್ಯಸ್ಥನಾಗಿ ತೆಗೆದುಕೊಂಡು ಆ ಸಿದ್ಧರಸವನ್ನು ಸೋಮೇಶ್ವರ ಸನ್ನಿಧಿಯಲ್ಲಿ ರಸಬಾವಿ ಮಾಡಿ ಇರಿಸಿ ಆ ಸೋಮೇಶ್ವರನಿಗೆ ಸಿದ್ಧೇಶ್ವರನೆಂಬ ಹೆಸರಿಟ್ಟು ಆಗ ಈ ಕುಂಡೋದರಗೆ ಸ್ಥಾವಮಾನ ಕಟ್ಟಿ ಆ ತಕ್ಕಬಿಂಬವನ್ನು ಪ್ರತಿಷ್ಠೆಮಾಡಿ ಮಹೀಪಾಲಕನಾದ ಮಹಿಷಾಸುರನೆಂಬ ಹೆಸರಿಟ್ಟು ಆತನಿಗೆ ಬಲಿಕೊಡುವುದಕ್ಕೆ ಸಹಸ್ರಪಡಿ ಅಕ್ಕಿ, ಸಹಸ್ರಪಡಿ ಅರಳು, ಅವಲಕ್ಕಿ, ಸಹಸ್ರಕಾಯಿ, ಶೀಯಾಳ, ಬಾಳೆಹಣ್ಣು, ಸಹಸ್ರಪಟ್ಟೆ ವೀಳ್ಯದೆಲೆ, ಹಿಂಗಾರ ಧೂಪದೀಪಾದಿಗಳಿಂದಅಜಕುಕ್ಕುಟ ಸಹಸ್ರವಾಗಿ ಬಲಿಯಂ ಕೊಟ್ಟುಸಮಸ್ತ ಪ್ರಜೆಪರಿವಾರಗಳು ಪ್ರಾರ್ಥನೆಯಂ ಮಾಡುವ ಸಮಯದಲ್ಲಿ ಈ ಕುಂಡೋದರನು ಒಬ್ಬ ಮನುಷ್ಯನ ಪ್ಮೆಮೇಲೆ ಬಂದು ಅರಸುಗಳಿಗೂ ಪ್ರಜೆಗಳಿಗೂ ಒಂದೇ ಕಟ್ಟಿನಲ್ಲಿ ನಡೆಯಬೇಕೆಂಬ ನಂಬಿಗೆಯಂ ಕೊಟ್ಟು ಎಲ್ಲರೂ ಒಂದೇ ಬುದ್ಧಿಯಿಂದ ನಡಕೊಳ್ಳುತ್ತೇವೆ ಎಂಬ ಕಟ್ಟುಕೈಹಿಡಿದ ಮೇಲೆ ಅರಸುಗಳಿಗೂ ಪ್ರಜೆಗಳಿಗೂ ಅಳಿಯಸಂತಾನದಲ್ಲೇ ನಡೆಯಬೇಕೆಂಬ 14 ಕಟ್ಟಲೆ ಕಟ್ಟು 16 ಕಟ್ಟಳೆ ಸಹಾ ಜಗತ್ತಿನ ನರಸಿಂಹದೇವರ ಮಧ್ಯಮಂಡಪದಲ್ಲಿ ಬರಸಿ ಜಗತ್ತಿನ ಅನಂತೇಶ್ವರ ದೇವರ ಮಧ್ಯ ಮಂಟಪದಲ್ಲಿ ಸ್ಥಾಪನೆಯಂ ಮಾಡಿ ಈ ಕಟ್ಟು ಕಟ್ಟಳೆ ಮೀರಿ ನಡೆದವನ ಸಂತಾನ ನಿಸ್ಸಂತಾನವಾಗಿ ಹೋಗಲಿ ಎಂತ ಕಟ್ಟು ಕೈ ಹಿಡಿದು ಬಳಿ ಸಾವಿರ ಬ್ರಹ್ಮನಂ ಈ ಮಹಿಷಾಸುರನಂ ಈ ಕಟ್ಟಿಗೆ ಅಧಿ ದೇವತೆಗಳೆಂದೂ ಈ ನರಸಿಂಹ, ಅನಂತೇಶ್ವರ ಕುಲದೇವತೆಗಳೆಂದೂ ದಿಕ್ಕು ದಿಕ್ಕಿನಲ್ಲಿ ಈ ಪ್ರಜೆ ಪರಿವಾರಗಳಿಗೆ ಬ್ರಹ್ಮನಂ ಅನಂತೇಶ್ವರ ದೇವಸ್ಥಾನದ ಕ್ಷೇತ್ರಪಾಲನು ಈ ಜಗತ್ತಿನ ನರಸಿಂಹ ದೇವರ ಬಲಭಾಗದ ರಕ್ತೇಶ್ವರಿಯಂ ಈ ಕುಂಡೋದರ ಮಹಿಷಾಸುರನಂ 18 ಬಳಿಯ ಅಳಿಯ ಸಂತಾನಕ್ಕೆ ಸ್ಥಾನದೇವತೆಗಳೆನಿಸಿ ಈ ಭೂತಾಳ ಪಾಂಡ್ಯರಾಯನು 12 ವರ್ಷ ರಾಜ್ಯವನ್ನಾಳುತ್ತಿರುವ ಮಧ್ಯದಲ್ಲಿ ಈ ಭೂತಾಳ ಪಾಂಡ್ಯರಾಯಗೆ ಕಲ್ಯಾಣ ಆಗಲೋಸುಗ ಘಟ್ಟದ ಮೇಲೆ ಕಳುಹಿಸಿಕೊಟ್ಟು ಅಲ್ಲಿ ಜೈನರ ಜಾತಿ ಕೇಸವಣ್ಣ ಬಸವಣ್ಣ ಎಂಬವರ ಕರೆಸಿ ಅವರ ಮುಖದಲ್ಲಿ 12 ಕನ್ನಿಕೆಯರ ಕರೆಸಿ ಲಗ್ನವಂ ಮಾಡಿಕೊಂಡು ಆ ಜಯಂತಿಕಾ ನಗರಕ್ಕೆ 12 ಕನ್ನಿಕೆಯರ ವಿವಾಹವಾದ ಕಾರಣ ಬಾಲಕನ್ಯಾಪುರ ಎಂಬ ಹೆಸರಂ ಇಟ್ಟು ಆ ಹನ್ನೆರಡು ಶಿವಾಲಯ, ಹನ್ನೆರಡು ವಿಷ್ಣು ಆಲಯ, ಹನ್ನೆರಡು ದುರ್ಗಾಲಯ, ಹನ್ನೆರಡು ಗಣಪತಿ,

ಹನ್ನೆರಡು ನಾಗಬ್ರಹ್ಮ, ಕ್ಷೇತ್ರಪಾಲ, ರಕ್ತೇಶ್ವರಿ, ಮಹಿಷಂತಾಯ ಎಂಬ ಸ್ಥಾನಗಳಂ ರಚಿಸಿ, ಆಗ ಚತುರ್ಲಕ್ಷ ಗುಡಿ ಮನೆಗಳ ಉಂಟುಮಾಡಿ ಆ ಚತುರಸ್ರದಲ್ಲು ನಗರೇಶ್ವರನ ಪ್ರತಿಷ್ಠೆಯುಂ ಮಾಡಿ ತಾನು ತಾನೆಂಬ ಬಿರುದಾವಳಿಯುಂ ಎಂತೆಂದೊಡೆ.")

ಶ್ರೀ ಚಂದ್ರಮೌಳೀಶ್ವರ ದೇವರು

ಈ ಚಂದ್ರ ಮೌಳೀಶ್ವರ ದೇವಾಲಯವು ಶ್ರೀ ಮದನಂತೇಶ್ವರ-ದೇವಾಲಯದ ಮುಂದುಗಡೆ ಮೂಡು ಭಾಗದಲ್ಲಿದೆ. ಇದು ಅನಂತೇಶ್ವರ ದೇವಳದಿಂದ ಸ್ವಲ್ಪ ತಗ್ಗು ಸ್ಥಳದಲ್ಲಿದೆ. ಇದಕ್ಕೂ ವಿಶಾಲವಾದ ಒಳ ಅಂಗಣವಿದೆ. ಗರ್ಭಗೃಹದಲ್ಲಿ ಅನಂತೇಶ್ವರ ದೇವಳದಂತೆ ಒಂದು ಶಿವಲಿಂಗವಿದೆ. ಇದಕ್ಕೂ ವೈಷ್ಣವ ಮಾಧ್ವರೇ ಅರ್ಚಕರು. ಅಲ್ಲಿಯಂತೆ ಇಲ್ಲಿಯೂ ಶೈವಾಗಮೋಕ್ತ ಪೂಜೆಯಿಲ್ಲದೆ ಶಿವನಿಗೆ ಪ್ರೀತಿಯಾದ ಬಿಲ್ವ ವಿಭೂತಿಗಳನ್ನು ಉಪಯೋಗಿಸದೆ ವೈಷ್ಣವ ರೀತ್ಯಾ ಸಾಲಿಗ್ರಾಮ ಇಟ್ಟು ಪೂಜೆ ನಡೆಯುತ್ತದೆ. ಈ ದೇವಳದ ಮೂಡು ಭಾಗದಲ್ಲಿ ವಿನಹ ಇತರ ಮೂರು ದಿಕ್ಕುಗಳಲ್ಲೂ ಗೋಡೆಗಳಿಗೆ ತಾಗಿ ಅಂಗಡಿ ಹೊಟೇಲುಗಳಿವೆ. ದೇವಸ್ಥಾನವು ಸ್ವಲ್ಪ ತಗ್ಗು ಸ್ಥಳದಲ್ಲಿ ಇರುವುದರಿಂದ ಒಳ ಪ್ರವೇಶಿಸಬೇಕಾದರೆ ಧ್ವಜಸ್ಥಂಭದ ಹತ್ತಿರ ಸ್ವಲ್ಪ ಇಳಿದು ಹೋಗಬೇಕು. ಈ ಚಂದ್ರಮೌಳೀಶ್ವರ ದೇವಾಲಯದಿಂದಲೇ ಇಲ್ಲಿಗ ಉಡುಪಿ ಎಂಬ ಹೆಸರು ಬಂದುದಾಗಿದೆ. ಇದರ ವಿವರವನ್ನು ಇದಕ್ಕೆ ಮುಂಚೆ ಕೊಟ್ಟಿರುತ್ತದೆ. ಈ ಚಂದ್ರಮೌಳೀಶ್ವರ ದೇವಳವು ಇಲ್ಲಿ ಇರುವುದರಿಂದಲೇ ಇಲ್ಲಿಯ ಮೂಲ ಪುರುಷರಾದ ಸ್ಥಾನೀಕ ಶಿವ ಬ್ರಾಹ್ಮಣರು ಶೃಂಗೇರಿ ಮಠದ ಶಿಷ್ಯರೆಂದು ಸ್ಪಷ್ಟವಾಗುತ್ತದೆ. ಅಲ್ಲದೆ ಒಂದು ಕಾಲದಲ್ಲಿ ಈ ಶೈವ ಕ್ಷೇತ್ರವಾದ ಉಡುಪಿಯು ಶ್ರೀ ಶೃಂಗೇರಿ ಮಠದವರ ಆಚಾರ ವಿಚಾರಾಧಿಕಾರದಲ್ಲಿ ಬಹಳ ಮೆರೆಯುತ್ತಿತ್ತೆಂದು ಇಲ್ಲಿ ಶ್ರೀ ಶಂಕರಾಚಾರ್ಯರ ಕರಾರ್ಚಿತವಾದ ಚಂದ್ರಮೌಳೀಶ್ವರನ ದೇವಾಲಯುವಿರುವುದೇ ಮೂಲಕಾರಣವಾಗಿದೆ. ಶ್ರೀ ಶೃಂಗೇರಿ ಜಗದ್ಗುರುಗಳು ಕನ್ನಡ ಜಿಲ್ಲೆಯಲ್ಲಿ ಸಂಚಾರ ಮಾಡಿದ ಸಮಯದಲ್ಲಿ ಇಲ್ಲಿಗೆ ಬಂದಾಗ ಅವರ ಅದ್ವೈತ ತತ್ವವನ್ನು ಇಲ್ಲಿಯ ಬ್ರಾಹ್ಮಣರು ಒಪ್ಪಿ ಅವರ ಶಿಷ್ಯರಾಗಿ ಅವರ ಜ್ಞಾಪಕಾರ್ಥವಾಗಿ ಅವರ ಕರಾರ್ಚಿತ ಚಂದ್ರಮೌಳೀಶ್ವರ

ಅಭಿದಾನದ ಲಿಂಗ ಒಂದನ್ನು ಅವರ ಮುಖಾಂತರವೇ ಸ್ಥಾಪಿಸಿದ್ದಾಗಿ ತಿಳಿದು ಬರುತ್ತದೆ. ಅದು ವಿನಹ ಶ್ರೀ ಸುಬ್ರಹ್ಮಣ್ಯಕ್ಷೇತ್ರದಲ್ಲಿ ಶ್ರೀ ಶೃಂಗೇರಿ ಶಾಖ ಮಠ ಒಂದು ಇದ್ದಂತೆ ಇಲ್ಲಿಯೂ ಈಗ ಅದಮಾರು ಮಠವಿದ್ದ ಸ್ಥಳದಲ್ಲಿ ಒಂದು ಶೃಂಗೇರಿ ಶಾಖಾ ಮಠವಿತ್ತೆಂದು ಪ್ರತೀತಿ ಇದೆ. ಅದಮಾರು ಮಠದ ಅಡಿಸ್ಥಳಕ್ಕೆ ಶೃಂಗೇರಿವನವೆಂಬ ಹೆಸರು ಇತ್ತೀಚೆಗಿನ ವರೇಗೆ ಇತ್ತೆಂದು ತಿಳಿದುಬರುತ್ತದೆ.

ಶ್ರೀ ಕೃಷ್ಣಮಠ ವ ಕೃಷ್ಣಮಂದಿರ

ಈ ಮಂದಿರವು ಶ್ರೀ ಮದನಂತೇಶ್ವರ ಚಂದ್ರಮೌಳೀಶ್ವರ ದೇವಾಲಯಗಳ ಬಡಗು ಅಂಗಣದ ಈಶಾನ್ಯ ಮೂಲೆಯಲ್ಲಿ ಅಂಗಣದ ಸ್ವಲ್ಪ ಭಾಗವನ್ನು ಆಕ್ರಮಿಸಿ ನಿಂತಿದೆ. ಇದರ ಆಡಿಸ್ಥಳದ ವಿಸ್ತೀರ್ಣ ಸಾಧಾರಣ 2-2½ ಎಕ್ರೆ ಇರಬಹುದು. ಇಷ್ಟರಲ್ಲಿ ಶ್ರೀ ಕೃಷ್ಣಮಂದಿರ, ಆಫೀಸು ವಿಭಾಗ ವಸಂತಮಹಲ್, ವೃಂದಾವನವೆಂಬ ಸ್ವಾಮಿಗಳ ಸಮಾಧಿ ಸ್ಥಳ, ಶ್ರೀ ಸುಬ್ರಹ್ಮಣ್ಯಗುಡಿ, ದನಗಳ ಹಟ್ಟಿ, ಕಟ್ಟಿಗೆ ರಥದ ಸ್ಥಳ, ಭೋಜನ ಶಾಲೆಗಳು ಮಧ್ವಸರೋವರವೆಂದು ಕರೆಯಲ್ಪಡುವ ಕೆರೆ ಇತ್ಯಾದಿಗಳು ಸೇರುತ್ತವೆ. ಈ ಕೃಷ್ಣಮಂದಿರದ ಸ್ಥಳವೂ ಶ್ರೀ ಮದನಂತೇಶ್ವರನಿಂದ ಗೇಣಿಗೆ ಪಡಕೊಂಡದ್ದಾಗಿ ತಿಳಿದುಬರುತ್ತದೆ. ಈಗ ಈ ಗೇಣಿ ಸಂದಾಯದ ಬಗ್ಗೆ ಶ್ರೀ ಅನಂತೇಶ್ವರ ದೇವರ ಮಹೋತ್ಸವ ಕಾಲದಲ್ಲಿ ಶ್ರೀ ಕೃಷ್ಣನು ತನ್ನ ರಥವನ್ನು ಕೊಟ್ಟು ಗೇಣಿ ಪಾವತಿ ಮಾಡುವ ಕ್ರಮವಿಟ್ಟುಕೊಂಡದ್ದಾಗಿ ತಿಳಿದುಬರುತ್ತದೆ. ಈ ಮಠಕ್ಕೆ ಸ್ವಂತವಾದ ಸ್ಥಳವಿಲ್ಲದೆ ಇರುವುದು ಇದಕ್ಕೆ ಕಾರಣ. ಈ ಮಂದಿರಕ್ಕೆ ಒಳಗೆ ಹೋಗುವ ದ್ವಾರವು ತೆಂಕು ದಿಕ್ಕಿನಿಂದ. ಈ ದ್ವಾರದಿಂದ ಒಳಗೆ ಹೋಗಿ ಅಗಲಕಿರಿದಾದ ದಾರಿಯಿಂದ ಮುಂದಕ್ಕೆಹೋದರೆ ಹರಿಕೀರ್ತನೆ ಭಾಷಣಾದಿಗಳು ಜರಗುವ ವಸಂತ ಮಂಟಪಕ್ಕೆ ಹೋಗಬಹುದು. ಮಧ್ಯದಲ್ಲಿ ಸ್ವಲ್ಪಹೋಗಿ ಬಲಕ್ಕೆತಿರುಗಿದರೆ ಈಗ ಮಧ್ವಸರೋವರವೆಂದು ಹೇಳಲ್ಪಡುವ ಕೆರೆಗೆಇಳಿಯಬಹುದು. ಎಡಕ್ಕೆ ತಿರುಗಿದರೆ ಶ್ರೀ ಕೃಷ್ಣ ಮಂದಿರದ ಇಕ್ಕಟ್ಟಾದ ಒಳಮೂಡು ಅಂಗಣಕ್ಕೆ ಇಳಿಯಬಹುದು. ಶ್ರೀ ಕೃಷ್ಣನ ದರ್ಶನಮಾಡಬೇಕಾದರೆ ಮೂಡು ಅಂಗಣದಿಂದ ಅದೇ ರೀತಿ ಇಕ್ಕಟ್ಟಾದ ತೆಂಕು ಅಂಗಣಕ್ಕೆ ಹೋಗಿ ಪಡುದಿಕ್ಕಿಗೆ

ತಿರುಗಿ ಅಲ್ಲಿ ಮಂದಿರದ ಪಡುಗೋಡೆಯಲ್ಲಿರುವ ಕನಕನ ಕಿಂಡಿ ಎಂದು ಹೇಳಲ್ಪಡುವ ಒಂದು ಗಾಳಿ ಕಿಟಿಕಿಯ ಮುಖಾಂತರ ಇಣಿಕಿ ದರ್ಶನಮಾಡಬೇಕು. ಕೆಲವು ಸಲ ದೇವರು ಕಾಣುವುದಿಲ್ಲ. ಪೂಜೆಗೆ ಕೂತ ಸ್ವಾಮಿಯವರ ಹಿಂಭಾಗವೇ ಕಾಣುತ್ತದೆ. ಈ ಮಂದಿರಕ್ಕೆ ಎದುರಾಗಿ ಮಹಾದ್ವಾರವಿಲ್ಲ. ಈ ಕೃಷ್ಣನ ಗರ್ಭಗೃಹಕ್ಕೆ ಪ್ರವೇಶಿಸಲು ಬಡಗು ದಿಕ್ಕಿನಲ್ಲಿ ಕಗ್ಗತ್ತಲೆ ಆವರಿಸಿದ ದ್ವಾರ ಒಂದಿದೆ. ಪರ್ಯಾಯ ಸ್ವಾಮಿಗಳೂ ಮಠಕ್ಕೆ ಸಮ್ಮಂಧಪಟ್ಟವರು ಮಾತ್ರ ಅಂಗಿಹಾಕದೆ ಈ ಬಾಗಿಲಿನಿಂದ ಪ್ರವೇಶಿಸುವುದಾಗಿದೆ. ಪ್ರವೇಶಿಸುವಾಗ ಬಲಬದಿಯಲ್ಲಿ ಮಧ್ವಪೀಠವೆಂಬ ಮಧ್ವಾಚಾರ್ಯರ ವಿಗ್ರಹವಿಟ್ಟು ಪೂಜಿಸುವ ಸ್ಥಳವಿದೆ. ದೇವರ ದರ್ಶನ ತೆಗೆದುಕೊಳ್ಳುವ ಕಿಟಿಕಿಯ ಎದುರಿಗೆ ಪಡುದಿಕ್ಕಿನ ಹೊರಗೋಡೆಯಲ್ಲಿ ನೀಟವಾದ ಶಿಲಾಕಲ್ಲಿನ ಗೂಟಗಳಿಂದ ರಚಿಸಲ್ಪಟ್ಟ ಕನಕನಕಿಂಡಿ ಎಂದು ಹೇಳಲ್ಪಡುವ ಇನ್ನೊಂದು ಕಿಟಕಿ ಇದೆ. ಈ ಎರಡು ಕಿಟಕಿಗಳ ಮುಖಾಂತರ ಕನಕದಾಸನಿಗೆ ಶ್ರೀ ಕೃಷ್ಣನ ದರ್ಶನವಾಯಿತೆಂದು ಹೇಳಿದರೆ ನಂಬಲು ಸಾಧ್ಯವಿಲ್ಲದಾಗಿದೆ. ಪಡುದಿಕ್ಕಿನ ಗೋಪುರದ ವಾಯುವ್ಯ ಮೂಲೆಯಲ್ಲಿ ತೆಂಕುದಿಕ್ಕಿಗೆ ಮುಖಮಾಡಿ ನಿಂತ ಮುಖ್ಯಪ್ರಾಣ ದೇವರ ಒಂದು ಕೋಣೆಯಂತಿರುವ ಗುಡಿ ಇದೆ. ಅಂತೂ ಶ್ರೀ ಕೃಷ್ಣನು ಇರುವ ಸ್ಥಳವು ಅತಿ ಇಕ್ಕಟ್ಟಾಗಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಇಷ್ಟು ಪ್ರಸಿದ್ಧಿ ಪಡೆದ ಶ್ರೀ ಕೃಷ್ಣನು ಇಷ್ಟು ಇಕ್ಕಟ್ಟಾದ ಗಾಳಿ ಸೋಕದ, ಮಹಾದ್ವಾರವಿಲ್ಲದ, ಸ್ವಂತ ಸ್ಥಳವಿಲ್ಲದ, ಗೇಣಿಕೊಡುವ ಸ್ಥಳದಲ್ಲಿ ಗೂಡಿನಂತಿರುವ ಒಂದು ಕೋಣೆಯಲ್ಲಿ ಬಂಧನದಲ್ಲಿದ್ದಂತೆ ಇರುವುದನ್ನು ಕಂಡರೆ, ಮನಸ್ಸಿಗೆ ಖೇದವೂ, ವಿಚಿತ್ರವೂ, ಆಶ್ಚರ್ಯವೂ ಆಗುತ್ತದೆ, ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಈ ಕೃಷ್ಣನನ್ನು ಪೂಜಿಸುವ ಭಕ್ತಾಗ್ರೇಸರೆಂದು ತೋರುವ ಅಷ್ಟಮಠದ ವೈಷ್ಣವ ಮಾಧ್ವಯತಿಗಳು ಅರಮನೆಯಂತಿರುವ ವಿಶಾಲವಾದ ಮಹಡಿ ಮನೆಗಳಲ್ಲಿ ಸುಖವಾಗಿ ವಾಸಿಸಿಕೊಂಡು ಇದ್ದು ತಮ್ಮ ದೇವರೆಂದು ಹೇಳಿಕೊಂಡ ಶ್ರೀ ಕೃಷ್ಣಪರಮಾತ್ಮನನ್ನು ವಿಶಾಲವಾದ ಮಹಾದ್ವಾರ ಹೊರ ಒಳ ಅಂಗಣಗಳಿಂದ ಕೂಡಿದ ದೇವಾಲಯದಲ್ಲಿ ಇಟ್ಟು ಭಕ್ತಾದಿಗಳಿಗೆ ಸರಿಯಾದ ದರ್ಶನ ತೆಗೆದುಕೊಳ್ಳಲು ಅನುಕೂಲವಾಗುವಂತೆ ಮಾಡದೆ ಗೋಪ್ಯವಾಗಿಟ್ಟು ಪೂಜಿಸುತ್ತಿರುವುದು ಇವರ ಮಾಧ್ವತತ್ವದ ಭೇದವಾದವನ್ನು ಜನತೆಗೆ ಬೋಧಿಸುವಂತೆ ಕಾಣುತ್ತದೆ.

ಈ ಕೃಷ್ಣಮಂದಿರಕ್ಕೆ ತಾಗಿ ಬಡಗು ಬದಿಯಲ್ಲಿ ಪಾಕಶಾಲೆ ಇದೆ. ಮತ್ತು ಇದಕ್ಕೆ ತಾಗಿ ಮೃಷ್ಟಾನ್ನ, ಚೌಕಿಭೋಜನ, ಭೂರಿಭೋಜನಗಳೆಂಬ ಮೂರು ವಿಧದ ಭೋಜನಗಳ ಪೈಕಿ 2 ವಿಧ ಭೋಜನಗಳಿಗೆ ಬೇಕಾದ ಸ್ಥಳಗಳಿವೆ. ಅಲ್ಲದೆ, ಇದಕ್ಕೆ ತಾಗಿ ಮಠದ ಸ್ಟೋರ್ ರೂಮು ಆಫೀಸ್ ಕೂಡಾ ಇದೆ. ಇವರ ಮೂಡುಭಾಗದಲ್ಲಿ ವಸಂತ್ ಮಹಲ್ ಇದೆ. ಅದರ ಬಡಗ ಪಾರ್ಶ್ವಕ್ಕೆ ತಾಗಿ ನಿಧನಹೊಂದಿದ ಸ್ವಾಮಿಗಳನ್ನು ಹುಗಿಯುವ ವೃಂದಾವನವಿದೆ. ವಸಂತ ಮಂಟಪಕ್ಕೆ ತಾಗಿ ಮೂಡುಭಾಗದಲ್ಲಿ ಗೋಶಾಲೆ, ಗೋಶಾಲೆಯಿಂದ ಹೊರಗೆ ಮೂಡು ಬದಿಯಲ್ಲಿ 2 ವರ್ಷಕ್ಕೊಂದು ಸಲ ಪರ್ಯಾಯ ಕಾಲದಲ್ಲಿ ಶೇಖರಿಸಿರುವ ರಥದಂತಿರುವ ಕಟ್ಟಿಗೆ ರಾಶಿ ಇದೆ— ಮಧ್ವಸರೋವರವೆಂದು ಹೇಳಲ್ಪಡುವ ಕೆರೆಗೆ ತಾಗಿ ಬಡಗುಬದಿಯಲ್ಲಿ ಭೂರಿ ಭೋಜನ ಮಾಡುವ ದೊಡ್ಡ ಭೋಜನ ಶಾಲೆ ಇದೆ.

ಈ ಶ್ರೀ ಕೃಷ್ಣ ಮಂದಿರದಲ್ಲಿ ಈಗ ಜನತೆಗೆ ತೋರಿಸುತ್ತಿರುವ ಕಡಗೋಲು ಕೃಷ್ಣನ ಮೂರ್ತಿಯೊಂದು ಮಾತ್ರವಲ್ಲದೆ ಇನ್ನೊಂದು ವೇಣುಗೋಪಾಲ ಮೂರ್ತಿಯು ಕಡಗೋಲು ಕೃಷ್ಣನ ಹಿಂಬದಿ ಮೂಡು ಮುಖ ಮಾಡಿ ಇದೆಯೆಂದೂ, ಇದಕ್ಕೆ ಸರಿಯಾದ ಪೂಜೆ ನಡೆಯುವುದಿಲ್ಲವೆಂದೂ ತಿಳಿದುಬರುತ್ತದೆ. ಈ ಕೃಷ್ಣ ಮಂದಿರಕ್ಕೆ ಪ್ರಥಮಪ್ರವೇಶಿಸುವಾಗ ಮಂದಿರದ ಮೂಡು ಗೋಡೆಯಲ್ಲಿ ಸರಳಿನ ಬಾಗಿಲಿನಿಂದ ಮುಚ್ಚಲ್ಪಟ್ಟ ಒಂದು ದ್ವಾರ ಕಾಣುತ್ತದೆ. ಆ ದ್ವಾರಕ್ಕೆ ತಾಗಿ ಇದರೊಳಗೆ ಚೆನ್ನಕೇಶವನೆಂದು ಹೇಳಲ್ಪಡುವ ವಿಗ್ರಹವೊಂದು ಮೂಡು ಮುಖ ಮಾಡಿಕೊಂಡು ಮೇಲೆ ಹೇಳಿದ ವೇಣುಗೋಪಾಲನ ವಿಗ್ರಹವು ಗೋಪ್ಯವಾಗಿ ಇದೆ ಇದು 'ಆನಂದಗಿರಿ ಶಂಕರ ವಿಜಯ' ಪ್ರಕಾರ ಆದಿ ಶಂಕರಾಚಾರ್ಯರ ಶಿಷ್ಯರಾದ ಹಸ್ತಾಮಲಕರಿಂದ ಪ್ರತಿಷ್ಠಿಸಲ್ಪಟ್ಟದ್ದೆಂದು ತಿಳಿಯುತ್ತದೆ. ಇದರ ಗುಟ್ಟನ್ನು ಅಲ್ಲಿಯ ಮಾಧ್ವರು ಹೊರ ಹಾಕುವುದಿಲ್ಲ. ಈ ಮಂದಿರಕ್ಕೆ ಈಗ ಬರುವ ತಸದೀಕು ಉಂಬಳಿ ವರಾಡಗಳು ಇತ್ಯಾದಿಗಳೆಲ್ಲ ಈಗ ಗೋಪ್ಯವಾಗಿ ಇರುವ ವೇಣುಗೋಪಾಲ ಕೃಷ್ಣನಿಗೆ ಸಲ್ಲತಕ್ಕದ್ದೆಂದು ತಿಳಿದು ಬರುತ್ತದೆ. ಈ ಕೃಷ್ಣನಿಗೆ ಗೃಹಸ್ಥಾಶ್ರಮಿಗಳ ಪೂಜೆ ನಡೆಯುತ್ತಿದ್ದು ಇದು ಸಾರ್ವಜನಿಕ ದೇವಸ್ಥಾನವಾಗಿತ್ತು.

ಶ್ರೀ ಮಧ್ವಾಚಾರ್ಯರು ಈ ಉಡುಪಿಯಲ್ಲಿ ಹೆಚ್ಚಿನ ಕಾರ್ಯಗಳನ್ನು

ಮಾಡಿದ್ದಕ್ಕೆ ಯಾವ ಆಧಾರಗಳು ಸಿಕ್ಕುವುದಿಲ್ಲ. ಸಾಧಾರಣ 16-17ನೇ ಶತಮಾನದಲ್ಲಿ ಮಧ್ವಾಚಾರ್ಯರ ಶಿಷ್ಯರ ಪೈಕಿ ಸೋದೆ ಮಠದ ವಾದಿರಾಜ ಯತಿಯೋರ್ವರು ಮಾಟ, ಮಂತ್ರವಾದ ಇತ್ಯಾದಿಗಳನ್ನು ತಾನು ಸಿದ್ಧಿಸಿಕೊಂಡು ದುರ್ದೇವತೆಗಳ ಸಹಾಯದಿಂದ ಊರಿನ ಜನರನ್ನು ವಶಪಡಿಸಿ ರಾಜಕಾರಣಿಗಳ ಸಹಾಯದಿಂದ ರಾಜಾಶ್ರಯವನ್ನು ಪಡೆದು ಊರಿನ ಸ್ಥಾನಿಕ ಶಿವಬ್ರಾಹ್ಮಣರ ಸ್ವಾಧೀನವಿದ್ದ ಶ್ರೀಮದನಂತೇಶ್ವರ ಚಂದ್ರಮೌಳೀಶ್ವರ ಮತ್ತು ಈಗ ಕೃಷ್ಣ ಮಠದ ಸ್ಥಳದಲ್ಲಿದ್ದ ಶ್ರೀ ವೇಣುಗೋಪಾಲ ಮತ್ತು ಸುಬ್ರಹ್ಮಣ್ಯ ದೇವರುಗಳ ಗುಡಿ ಮತ್ತು ಕೆರೆಗಳನ್ನು ಬಲಾತ್ಕಾರದಿಂದ ತಮ್ಮ ಸ್ವಾಧೀನ ಮಾಡಿಕೊಂಡರೆಂದು ತಿಳಿದುಬರುತ್ತದೆ. ಈ ಬಲಾತ್ಕಾರದ ಪ್ರವೇಶದ ವಿಷಯದಲ್ಲಿ ಊರಿನ ಮೊಗವೀರರೂ, ಬಂಟರು ಮತ್ತು ಜೈನರು ಅವರಿಗೆ ಸಹಕರಿಸಿದ್ದರೆಂದೂ, ಅವರ ವಿರುದ್ಧವಾಗಿ ಸ್ಥಾನೀಕ ಶಿವಬ್ರಾಹ್ಮಣರ ಸಹಾಯಕ್ಕೆ ಊರಿನ ಬಿಲ್ಲವರೂ ಹೊಲೆಯರೂ ಸಹಕರಿಸಿದ್ದು ಒಂದು ಮಾರಾಮಾರಿ ಹೊಡೆದಾಟವೇ ಇಲ್ಲಿ ನಡೆದಿತ್ತೆಂದು ಪ್ರತೀತಿ ಇದೆ. ಈ ಯತಿಗೆ ಜನಬಲ ಮತ್ತು ರಾಜಾಶ್ರಯ ಸಿಕ್ಕಿದುದರಿಂದ ಅವರ ಕೈಯೇ ಮೇಲಾಯಿತು. ಈ ಸ್ವಾಮಿಗಳು (ಯತಿ) ನಿಟ್ಟೂರು ಸೋಮಲಿಂಗ ದೇವರನ್ನು ತೆಗೆದು ವೆಂಕಟ್ರಮಣದೇವರನ್ನು ಆ ಸ್ಥಳದಲ್ಲಿ ಇಡಿಸಿದ ವಿಚಾರದಲ್ಲಿ ಹೆಚ್ಚಿನ ಹೊಡೆದಾಟಗಳು ಕೂಡಾ ಆಗಿವೆ. ಈ ವಿಷಯದಲ್ಲಿ ಅಲ್ಲಿಯ ಮಾಧ್ವರು ಈಶ್ವರ ಲಿಂಗಕ್ಕೆ ಅವಹೇಳನಮಾಡಿ ತುಳು ಭಾಷೆಯಲ್ಲಿ ಆಗ ಪರಿಹಾಸ್ಯ ಮಾಡುತ್ತಿದ್ದುದು ಹೇಗೆಂದರೆ "ನಿಟ್ಟೂರು ಸೋಮಲಿಂಗ ಬೋನ ತಂಕರ ತಂಞಣತಂಕರ" ಎಂದು. ಅದರ ಬದಲಿಗೆ ಊರಿನ ಹರಿಜನರು ಈ ರೀತಿ ಹೇಳುವುದು ವಾಡಿಕೆಯಲ್ಲಿತ್ತು "ಚಿಟ್ಟಿಪಾಡಿ ಬಲ್ಲಾಳೆರ್ ಬೇಂಟೆ ಕೊರ್ಯೆರಾ-ನಿಡಂಬೂರು ಬಲ್ಲಾಳೆರ್ ದಿಡುಂಬು ಗದ್ಯೆರೊ" ಎಂದು. ಈ ಮಾತಿನಿಂದ ಊರಿನ ಜೈನರಾದ ಆಗಿನ ನಿಡಂಬೂರು ಚಿಟ್ಟಿಪಾಡಿ ಬಲ್ಲಾಳರುಗಳು ವಾದಿರಾಜರಿಗೆ ಹೆಚ್ಚು ಸಹಾಯಕರಾಗಿದ್ದರೆಂದು ತಿಳಿಯಬಹುದು.

ಗೃಹಸ್ಥಾಶ್ರಮಿಗಳ ಪೂಜೆಯಲ್ಲಿದ್ದು ಸಾರ್ವಜನಿಕವಾಗಿದ್ದ ಶ್ರೀ ವೇಣುಗೋಪಾಲ ಕೃಷ್ಣನ ಗುಡಿಯನ್ನು ತನ್ನ ಸ್ವಂತದ್ದಾಗಿ ಪರಿವರ್ತಿಸಲು ಬೇರೆ

ಕೃಷ್ಣ ವಿಗ್ರಹವು ಸಿಕ್ಕದೆ ಇದ್ದಾಗ ಎಲ್ಲಿಂದಲೋ ಒಂದು ದುರ್ಗಾ ವಿಗ್ರಹವನ್ನು ತಂದು ಕಡೆಗೋಲು ಕೃಷ್ಣನಂತೆ ಮಾರ್ಪಡಿಸಿ ಶ್ರೀ ವೇಣುಗೋಪಾಲಕೃಷ್ಣ ವಿಗ್ರಹದ ಹಿಂಬದಿ ಪಡುಮುಖ ಮಾಡಿ ಇರಿಸಿದ್ದಾಗಿ ತಿಳಿದುಬರುತ್ತದೆ. ಈ ಕಡೆಗೋಲು ಕೃಷ್ಣನ ಮೂಲ ವಿಗ್ರಹವನ್ನು ಹತ್ತಿರ ಹೋಗಿ ನೋಡಿದರೆ ಆ ವಿಗ್ರಹವು ಸ್ತ್ರೀ ವಿಗ್ರಹದಂತೆ ಕಾಣುವುದು. ಕೈಯಲ್ಲಿರುವ ಕಡಗೋಲು ಒಂದು ದೊಣ್ಣೆ ಕೈಯಲ್ಲಿ ಕೊಟ್ಟಂತೆ ಕಾಣುತ್ತದೆ. ಈ ಕಡೆಗೋಲು ಕೃಷ್ಣನಿಗೆ ಮಂಗಳವಾರ, ಶುಕ್ರವಾರ ಮತ್ತು ನವರಾತ್ರಿ (ದಸರಾ) 9 ದಿವಸ ಅಮ್ಮನವರ ಅಲಂಕಾರಗಳನ್ನು ಮಾಡಿ ಈಗಲೂ ಪೂಜಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಶ್ರೀ ವೇಣುಗೋಪಾಲ ಕೃಷ್ಣನನ್ನು ಸ್ಥಾನಚ್ಯುತಿಗೊಳಿಸಲು ಪ್ರಯತ್ನಿಸಿದಾಗ ಸಹಿಸಲಾರದ ಉಪದ್ರಗಳು ಈ ಮಾಧ್ವಯತಿಗಳಿಗೆ ಉಂಟಾದುದರಿಂದ ಅದರ ಗೋಜಿಗೆ ಹೋಗದೆ, ಅದನ್ನು ಹಾಗೆಯೇ ಬಿಟ್ಟು ಗೋಪ್ಯವಾಗಿರಿಸಿದರೆಂದು ತಿಳಿದುಬರುತ್ತದೆ. ಅವರು ಪಡುಮುಖಮಾಡಿ ಇರಿಸಿದ ಕಡೆಗೋಲು ಕೃಷ್ಣನು ಜನತೆಯ ಕಣ್ಣಿಗೆ ಪ್ರಸಿದ್ಧಿಯನ್ನು ಪಡೆಯಲು ಅನುಕೂಲವಾಗುವಂತೆ ಈ ಶ್ರೀಕೃಷ್ಣನು ಮಧ್ವಾಚಾರ್ಯರಿಗೆ ಗೋಪಿಚಂದನದಲ್ಲಿ ಸಿಕ್ಕಿದನೆಂತಲೂ ಇದು ಅವರಿಂದ ಪ್ರತಿಷ್ಠಿಸಲ್ಪಟ್ಟದ್ದೆಂತಲೂ, ಕನಕದಾಸನ ಭಕ್ತಿಗೆ ಮೆಚ್ಚಿ ಈ ಕಡೆಗೋಲು ಕೃಷ್ಣನು ಪಡುಮುಖವಾದನೆಂತಲೂ, ಆದರಿಂದ ಪಡುದಿಕ್ಕಿನ ಗೋಡೆಗಳಲ್ಲಿ ಕಿಟಕಿಗಳು ಉಂಟಾಯಿತೆಂತಲೂ ಆ ಕಿಟಕಿಗಳಿಗೆ ಕನಕನ ಕಿಟಕಿ ಎಂತಲೂ ಹೆಸರಿಟ್ಟು ಜನರ ಮನೋರಂಜನೆಗೆ ಸರಿಯಾಗುವಂತೆ ಕಟ್ಟು ಕಥೆಯನ್ನು ರಚಿಸಿ, ವೇಣುಗೋಪಾಲ ಕೃಷ್ಣನಿಗೆ ಬರುತ್ತಿರುವ ಉಂಬಳಿ ಪರಾಡಗಳನ್ನು ತಮ್ಮ ಮಠಕ್ಕೆ ಬರುವಂತೆ ಮಾಡಿಕೊಂಡರು. ಶ್ರೀ ಮಧ್ವಾಚಾರ್ಯರಿಗೆ ನಾವಿಕನಿಂದ ಗೋಪಿಚಂದನದಲ್ಲಿ ಕಡಗೋಲು ಕೃಷ್ಣನ ವಿಗ್ರಹವು ಯಾವ ಕಾಲದಲ್ಲಿ ಸಿಕ್ಕಿತೆಂಬ ವಿಷಯದಲ್ಲಿಯೂ ಮತ್ತು ಅನಂತರ ಕನಕನ ಭಕ್ತಿಗೆ ಮೆಚ್ಚಿ ಕೃಷ್ಣನು ಪಡುಮುಖವಾದ ಕಾಲವು ಯಾವುದೆಂದು ಈ ವರೆಗೆ ಎಲ್ಲಿಯೂ ತಿಳಿದು ಬಂದದ್ದು ಕಾಣುವುದಿಲ್ಲ. ಉಡುಪಿಯಲ್ಲಿ ಆ ಕಾಲದಲ್ಲಿ ಸ್ಥಾನಿಕ ಬ್ರಾಹ್ಮಣರ ದೊಡ್ಡ 20 ಮನೆತನಗಳಿದ್ದವು. ಇವರಲ್ಲಿ ಕೆಲವರನ್ನು ಹೊಡೆದು ಕೆಲವರನ್ನು ಓಡಿಸಿ, ಅನಂತೇಶ್ವರನ ಸುತ್ತಮುತ್ತಲಿನ ವಠಾರವನ್ನು

ಸ್ವಾಧೀನಪಡಿಸಿಕೊಳ್ಳಲು ತಾನು ಕಟ್ಟಿಸಿದ ಕೃಷ್ಣ ಮಠವನ್ನು ಭದ್ರಪಡಿಸ
ಸಲು ತನಗೆ ಹೆಚ್ಚಿನ ಸಹಾಯ ಮಾಡಿದ ತನ್ನ ಮಠ ಸೇರಿ 8 ಊರಿನ ಮಾಧ್ವಾಚಾರ್ಯರ ಶಿಷ್ಯ ವರ್ಗದವರಿಗೆ ಸನ್ಯಾಸದೀಕ್ಷೆ ಕೊಟ್ಟು ಅವರವರ ಊರಿನಲ್ಲೂ ಒಂದೊಂದು ಮಠವನ್ನು ಸ್ಥಾಪಿಸಿ ಆ ಯತಿಗಳು ತಾನು ಕಟ್ಟಿಸಿದ ಕೃಷ್ಣ ಮಠಕ್ಕೆ 2 ವರ್ಷದ ಪರ್ಯಾಯ ಕ್ರಮದಿಂದ ಪೂಜಕನನ್ನಾಗಿ ನೇಮಿಸಿ ಅವರು ಉಡುಪಿಗೆ ಬಂದು ಪೂಜಿಸುವ ಸಮಯದಲ್ಲಿ ಅವರು ವಾಸ್ತವ್ಯಕ್ಕೆ ಅನುಕೂಲವಾಗುವಂತೆ ಶ್ರೀ ಮದನಂತೇಶ್ವರ ಚಂದ್ರಮೌಳೀಶ್ವರ ದೇವಳಗಳ ಸುತ್ತಲೂ ನಾಲ್ಕು ರಸ್ತೆಗಳ ಹತ್ತಿರದಲ್ಲೂ ವಸತಿ ಮಠಗಳನ್ನು ದಿಗ್ಬಂಧನೆ ಮಾಡಿಸಿದಂತೆ ಕಟ್ಟಿಸಿ ಮುಂದಕ್ಕೆ ಊರಿನ ಸ್ಥಾನಿಕ ಬ್ರಾಹ್ಮಣರು ಅವರ ಅನುಮತಿ ಇಲ್ಲದೆ ಒಳ ಪ್ರವೇಶಮಾಡದಂತೆ ತಡೆಗಟ್ಟಲು ಅನುಕೂಲವಾಗುವಂತೆ ಮಾಡಿಕೊಂಡರು. ಅಲ್ಲದೆ ಆ ಸ್ಥಾನಿಕ ಶಿವಬ್ರಾಹ್ಮಣ್ಯರ ಕೋಪವನ್ನು ಶ್ರೀ ಮದನಂತೇಶ್ವರ ಲಿಂಗದ ಮೇಲೂ ತೋರಿಸಿ ಆ ಲಿಂಗ ಭಿನ್ನಬರುವಂತೆ ಮಾಡಿರಬಹುದೆಂದು ಭಿನ್ನ ಬಂದಿರುವ ಈಗ ದೇವಳದಲ್ಲಿರುವ ಲಿಂಗದಿಂದಲೇ ಊಹಿಸಬೇಕಾಗುತ್ತದೆ. ಮಾಧ್ವಮತದವರ ಜನಸಂಖ್ಯೆಯು ಅಗ್ಯೆಸ್ವಲ್ಪವಾದುದರಿಂದಲೂ, ತನಗೆ ಊರಿನ ಮೊಗವೀರರೂ ಬಂಟರು ಜೈನರು ತನ್ನ ಸಾಹಸದ ಕಾರ್ಯಕ್ಕೆ ಸಹಾಯ ಮಾಡಿದಕ್ಕಾಗಿ ಹೆಚ್ಚಿನ ಅವರ ಮತದವರನ್ನು ತಮ್ಮ ಮುದ್ರಧಾರಣ ಕ್ರಮದಿಂದ ಶುದ್ಧಿಗೊಳಿಸಿ ತಮ್ಮ ಮತಕ್ಕೆ ಸೇರಿಸಿಕೊಂಡರು. ಉಡುಪಿಗೆ ಹತ್ತಿರವಿದ್ದ ಮಟ್ಟಿಗ್ರಾಮದ ಮೊಗವೀರರು ಅವರಿಗೆ ಹೆಚ್ಚಿನ ಸಹಕಾರ ನೀಡಿದಕ್ಕೆ ಅಲ್ಲಿಯ ಹೆಚ್ಚಿನವರನ್ನು ಮಾಧ್ವಮತಕ್ಕೆ ಸೇರಿಸಿಕೊಂಡದ್ದಾಗಿ ತಿಳಿದು ಬರುತ್ತದೆ. ಆದರೆ ಅವರು ಮೀನು ಹಿಡಿಯುವವರಾದುದರಿಂದ ಅವರಿಗೆ ಮೊತ್ತಮೊದಲು ತಮ್ಮ ಮಾಧ್ವರೊಂದಿಗೆ ಪಂಕ್ತಿಭೋಜನ ಕೊಡುತ್ತಿರಲಿಲ್ಲ. ಈಗ ಆ ಭೇದವು ನಿಂತುಹೋಗಿಯದೆ. ಆ ಮಟ್ಟಿ ಶಿವಳ್ಳಿಮಾಧ್ವರು ಮೀನು ಹಿಡಿಯುವ ಉದ್ಯೋಗವನ್ನು ಈಗ ಬಿಟ್ಟು ಆ ಕೆಲಸವನ್ನು ಇತರರಿಂದ ಮಾಡಿಸಿ ತಮ್ಮ ಜೀವನವನ್ನು ನಡೆಸುವುದು ಈಗಲೂ ಕೆಲವರಲ್ಲಿ ನೋಡಬಹುದು. ನಿಡುಂಬೂರು ಮತ್ತು ಚಿಟ್ಟುಪಾಡಿ ಬಲ್ಲಾಳರು ಬಹಳ ಧನಿಕರು. ಇಲ್ಲಿಯ ಸ್ಥಾನಿಕ ಬ್ರಾಹ್ಮಣರನ್ನು ಓಡಿಸಲು ಇವರು ತನುಮನಧನಗಳಿಂದ ಸಹಾಯಮಾಡಿದ್ದಾರೆ ಎಂದು ತಿಳಿದುಬರುತ್ತದೆ.



ಉಡುಪಿಯ ಶ್ರೀಮದನಂತೇಶ್ವರ ದೇವಾಲಯದ ಮುಂದಿರುವ ಶಿಲಾ ಸ್ತಂಭ

ಅದರಿಂದಾಗಿ ಜೈನರಾಗಿದ್ದ ಅವರನ್ನು ತಮ್ಮ ಮಾಧ್ವಮತಕ್ಕೆ ಸೇರಿಸಿ ಅವರಿಗೆ ಅವರ ಮಾಧ್ವರಲ್ಲಿ ಇತರರಿಗಿಂತ ಹೆಚ್ಚಿನ ಸ್ಥಾನ ಮಾನ ಮರ್ಯಾದೆಗಳನ್ನು ಕೊಟ್ಟರು ಎಂದು ತಿಳಿದು ಬರುತ್ತದೆ. ಈ ಕಾರಣದಿಂದ ಮಾಧ್ವರ ಸಂಖ್ಯೆ ಉಡುಪಿಯಲ್ಲಿ ತುಂಬಿ ಹೋಯಿತು. ಈ ರೀತಿ ಮತಾಂತರಿಸಿ ಬಂದವರಾದುದರಿಂದಲೇ ಈ ಮಾಧ್ವರ ಜಾತಿಯ ಹೆಸರುಗಳೊಂದಿಗೆ ಬಂಟರ, ಮೊಗವೀರರ ಮತ್ತು ಜೈನರ ಕುಲನಾಮಗಳಂತೆ ಬಳಿಗಳ ಹೆಸರುಗಳು ಬಂದಿರುತ್ತವೆ. ಸ್ಥಾನಿಕ ಶಿವಬ್ರಾಹ್ಮಣರನ್ನು ಸಿಕ್ಕಿದಲ್ಲಿ ಕೊಲ್ಲುವಂತೆ ಪ್ರೇರೇಪಿಸುವ ಪದ್ಯವನ್ನು ಕಟ್ಟಿ ಕೃಷ್ಣದರ್ಶನಕ್ಕೆ ಬರುವ ಅವರ ಮತದವರಿಗೆ ತಿಳಿಯುವಂತೆ ಮಾಡಲು ದೇವರ ಸ್ತೋತ್ರದಂತೆ ತಾಳತಟ್ಟಿ ಹಾಡುವುದನ್ನು ಕ್ರಮಗೊಳಿಸಿದರು. ಆ ಪದ್ಯವು ಹೀಗಿದೆ, "ಕೊಲ್ಲು ಕೊಲ್ಲು ಕಳ್ಳರನ್ನು ಮೆಲ್ಲ ಮಧ್ವ ವಲ್ಲಭನೆ ನೀನು ಕೊಲ್ಲದಿದ್ದರೆ ನಿನ್ನ ಪೂಜೆಗೆ ಕಲ್ಲನೆಸೆಯುವರು ,... .... ಕಲಿಯುಗದ ಕಳ್ಳರು ಲಕ್ಷ್ಮೀನಾರಾಯಣ ಜಯ ಲಕ್ಷ್ಮೀನಾರಾಯಣ "—ಇತ್ಯಾದಿ.

ಹೀಗಿದ್ದರೂ ಬ್ರಹ್ಮಹತ್ಯೆಗಳನ್ನು ಮಾಡಿದ ವಾದಿರಾಜ ಸ್ವಾಮಿಗಳನ್ನು ಅವರ ಪಾಪ ಬೆನ್ನು ಬಿಡಲಿಲ್ಲ. ಅದು ಬ್ರಹ್ಮರಾಕ್ಷಸನಾಗಿ ಬಂದು ಅವರನ್ನು ಹಿಂಸಿಸ ತೊಡಗಿತು. ಅದರಿಂದ ಅವರು ತುಂಬಾ ಕಷ್ಟಪಟ್ಟರು. ಆ ಬ್ರಹ್ಮರಾಕ್ಷಸನನ್ನು ತೃಪ್ತಿಪಡಿಸುವುದಕ್ಕೆ ನಿತ್ಯ ಒಂದು ತಟ್ಟೆ ನೈವೇದ್ಯವನ್ನು (ಹಯಗ್ರೀವಮಡ್ಡಿ) ತನ್ನ ತಲೆಯಲ್ಲಿಟ್ಟು ಅದಕ್ಕೆ ತೃಪ್ತಿ ಪಡಿಸುತ್ತಿದ್ದರು. ಈ ಗುಟ್ಟು ಇತರರಿಗೆ ತಿಳಿಯದಂತೆ ಹಯಗ್ರೀವನು ಇವರ ಭಕ್ತಿಗೆಮೆಚ್ಚಿ ನಿತ್ಯವೂ ಬಿಳಿ ಕುದುರೆ ರೂಪದಿಂದ ಇವರ ಬೆನ್ನಹಿಂದೆ ಹೆಗಲ ಮೇಲೆ ಮುಂಗಾಲು ಇಟ್ಟು ಮೆಲ್ಲುತ್ತಾನೆಂದೂ, ಬ್ರಹ್ಮರಾಕ್ಷಸನು ಭೂತರಾಜನಾಗಿ ತನ್ನ ಸೇವೆ ಮಾಡುವನೆಂದೂ, ಕಥೆಕಟ್ಟಿ, ಜನರನ್ನು ಆಶ್ಚರ್ಯಪಡುವಂತೆ ಮಾಡಿದ್ದರು. ಅಂತೂ ಕಡೆಗೆ ಊರಿನ ಜನರು ಇವರು ಮಾಡಿದ ಹಿಂಸಾಚಾರ ಅನ್ಯಾಯಗಳನ್ನು ಅರಿತುಕೊಂಡು ಹೆಚ್ಚಿನ ಎಲ್ಲಾ ಮತದವರು ಒಟ್ಟಿಗೆ ಕೂಡಿ ಇವರನ್ನು ಉಡುಪಿಯಿಂದಲೇ ಓಡಿಸಿದರು. ಇವರು ಇಲ್ಲಿ ನಿಲ್ಲಲಾರದೆ, ತನ್ನ ಊರಾದ ಸೋದೆ ಎಂಬಲ್ಲಿಗೆ ಹೋಗಿ ತನ್ನ ಅಂತ್ಯವನ್ನು ಬಹಳ ಕಷ್ಟದಿಂದ ಕಳೆದರೆಂದು ತಿಳಿದು ಬರುತ್ತದೆ.

ಈ ಉಡುಪಿ ಕೃಷ್ಣನನ್ನು ಹೆಚ್ಚಾಗಿ ಅವರ ಮಾಧ್ವಮತದವರೆ, ನಂಬಿ

ಭಜಿಸಿ ಬರುವುದಾಗಿದೆ. ಇಲ್ಲಿಯು ಗುಟ್ಟು ಅವರ ಜಾತಿಯುವರಿಂದಾಗಲೀ ಹೊರಗಿನವರಿಂದಾಗಲೀ ಹೊರಬೀಳದಂತೆ ಅವರ ಜಾತಿಯುವರಿಗೂ ಇತರ ಗಣ್ಯವಕ್ತಿಗಳಿಗೂ ನಿತ್ಯವೃಷ್ಠಾನ್ನ; ಚೌಕಿಭೋಜನ; ಮತ್ತು ಭೂರಿ ಭೋಜನಗಳೆಂಬ ಊಟಗಳನ್ನು ಏರ್ಪಡಿಸಿ ಆದರಿಂದ ಅಲ್ಲಿಗೆ ಬಂದವರು ತೃಪ್ತಿಪಡುವಂತೆ ಮಾಡಿ ಒಳಗಿನ ಇವರ ಗುಟ್ಟು ಬಂದವರಿಗೆ ಗೊತ್ತಾದರೂ ಹೊರಬೀಳದಂತೆ ಮಾಡಿ ಕಳುಹಿಸುವುದು ಬಹಳ ಚೋದ್ಯವಾಗಿದೆ. ಈಗ 200-300 ವರುಷಗಳು ದಾಟಿದುದರಿಂದಲೂ, ಈ ಮಧ್ಯೆ ಯಾರೂ ಈ ಗುಟ್ಟಿನ ವಿಚಾರ ಪ್ರಶ್ನಿಸದೆ ಇದ್ದುದರಿಂದಲೂ ಅವರು ಹೇಳಿದುದೇ ಧರ್ಮ ಶಾಸ್ತ್ರವಾಗಿ ನಿಂತು ಈಗ ಈ 8 (ಎಂಟು) ಮಠದವರು ಏನಕೇನ ಪ್ರಕಾರೇಣ ಬೇಕಾದಷ್ಟು ಹಣ, ಸೊತ್ತು, ಸಂಗ್ರಹಿಸಿ ಧನಿಕರಾಗಿ ಮೆರೆಯುತ್ತಾರೆ. ಇವರ ಮಠದಲ್ಲಿ ಅಣ್ಣ, ತಮ್ಮ, ಅಣ್ಣನ ಮಗ ವ ಹತ್ತಿರದ ಬಂಧುಗಳೇ ಸ್ವಾಮಿಗಳಾಗಿಯೂ, ಏಜಂಟು, ಮೇನೇಜರರುಗಳಾಗಿರುವುದರಿಂದ, ಇವರ ಮಠಗಳನ್ನು ಮಠವೆಂದು ಹೇಳುವ ಬದಲು ಒಂದು ಕುಟುಂಬದ ಮನೆಯೆಂದು ಹೇಳಿದರೂ ತಪ್ಪಾಗಲಾರದು. ಇವರು ಈಗಲೂ ತಮ್ಮ ಮೂಲ ಗುರುಗಳಾದ ವಾದಿರಾಜರ ಸಲಹೆ ಪ್ರಕಾರ ಕ್ರೈಸ್ತ ಮಿಷನರಿಗಳಂತೆ ಅಖಿಲ ಭಾರತ ಮಾಧ್ವಮಹಾಮಂಡಲವೆಂಬ ಹೆಸರಿನಿಂದ ಮಾಧ್ವಮತ ಪ್ರಚಾರ ಮಾಡಿಕೊಂಡು, ಮತಾಂತರಗೊಳಿಸುತ್ತಾ ಇರುವುದು ಪ್ರತಿಯೊಬ್ಬರಿಗೂ ತಿಳಿದ ವಿಷಯ. ತಮ್ಮ ಕುಲ ಹೇಗಿದ್ದರೂ ತಮ್ಮ ಮಾಧ್ವ ಸಮಾಜದವರು ಉತ್ತಮ ಕುಲದ ಬ್ರಾಹ್ಮಣರೆಂದು ಹೇಳಿಕೊಂಡು ಜನರಿಗೆ ತಪ್ಪು ತಿಳುವಳಿಕೆಕೊಟ್ಟು, ಧನಸಹಾಯ ಹೊಂದಿದವರಾದುದರಿಂದ ತಾವು ಮಾಡಿದ ಅಪಪ್ರಚಾರವನ್ನು ಪ್ರಶ್ನಿಸುವವರೇ ಇಲ್ಲವೆಂದಾಗಿದೆ.

ಇವರು ನ್ಯಾಯವಾದ ಶ್ರೀ ವೇಣುಗೋಪಾಲಕೃಷ್ಣನ ಮೂರ್ತಿಯನ್ನು ಅಡಗಿಸಿಟ್ಟು, ಕೃತ್ರಿಮ ಕೃಷ್ಣನ ಪೂಜೆಯನ್ನು ಮಾಡಿ, ತಮ್ಮ ಸ್ವಾರ್ಥವನ್ನು ಸಾಧಿಸುವುದು ನೋಡುವಾಗ ಇವರು ನ್ಯಾಯವಾದ ವೈಷ್ಣವರು ಅಥವಾ ಕೃಷ್ಣನ ಭಕ್ತರೆಂದು ಹೇಳಲು ಬರುವುದಿಲ್ಲ. ಇವರು ಬರೇ ಧನದ ಆಸೆಯಿಂದ ಈ ರೀತಿಯ ಪೂಜಾದಿಗಳನ್ನು ಮಾಡಿ, ಅದರಿಂದ ತಮ್ಮ ಮತದ ಶ್ರೇಷ್ಠತೆಯನ್ನು ಜನತೆಗೆ ಪ್ರಕಟಿಸುವುದು ಇವರಿಂದ ವ್ಯಕ್ತವಾಗುತ್ತದೆ. ಗೋಪಾಲಕನೆಂದೂ, ಗೋರಕ್ಷಕನೆಂದೂ, ಬಿರುದು ಪಡೆದ

ಇವರು ಶ್ರೀ ಕೃಷ್ಣನಿಗೆ ಸಂಬಂಧಪಟ್ಟ ಗೋಶಾಲೆ ಮತ್ತು ಗೋಶಾಲೆಯಲ್ಲಿ ಇರುವ ಬಡಕಲಾದ 50-60 ದನಕರುಗಳನ್ನು ನೋಡಿದರೆ, ಇವರು ಆ ಗೋವುಗಳನ್ನು ಎಷ್ಟು ಪ್ರೀತಿಯಿಂದ ಸಾಕುತ್ತಾರೆಂಬುದನ್ನು ತಿಳಿಯ ಬಹುದು. ಶಿರಾಲಿ ಸಾರಸ್ವತ ವಂಶದವರು ಕಟ್ಟಿಸಿದ ಉತ್ತಮ ಗೋಶಾಲೆ ಯನ್ನಾದರೂ ನೋಡಿ ಇವರು, ಇವರ ಗೋಶಾಲೆಯನ್ನು ಸರಿಪಡಿಸಿಕೊಳ್ಳ ಬಹುದು. ಶ್ರೀ ಕೃಷ್ಣನಿಗೆ ಅಭಿಷೇಕವಾದ ತೀರ್ಥವನ್ನು ಮಧ್ವಸರೋವರ ಎಂದು ಹೇಳಲ್ಪಡುವ ಕೆರೆಯ ಒಂದು ಮೂಲೆಯಲ್ಲಿ ಇಳಿಯುವಂತೆ ಮಾಡಿ ತಮ್ಮ ಮಧ್ವ ಸರೋವರಕ್ಕೆ ಆಗಾಗ ಗಂಗಾ ಭಾಗೀರಥೀಯು ಬರುತ್ತಾ ಳೆಂದು ಜನರನ್ನು ದಂಗುಬಡಿಸುತ್ತಾರೆ. ಅದನ್ನು ಮೂಢಭಕ್ತಿಯಿಂದ ಜನರು ನಂಬಿ, ಅಲ್ಲಿ ಸ್ನಾನ ಮಾಡುತ್ತಾ, ಇವರಿಗೆ ದಕ್ಷಿಣೆ ಕಾಣಿಕೆಗಳನ್ನು ಕೊಡುತ್ತಿರುವುದು ಇವರ ಇನ್ನೊಂದು ವಿಚಿತ್ರ ಕೆಲಸವಾಗಿರುತ್ತದೆ.

ಅಂತೂ ಇವರ ಕೃಷ್ಣಮಂದಿರವು ಅದರ ಸುತ್ತ ಮುತ್ತು ಇರುವ ಭೋಜನ ಮತ್ತು ಅಡಿಗೆ ಶಾಲೆಗಳಿಂದಲೂ, ಸ್ವಾಮಿಗಳ ಸ್ಮಶಾನದಿಂದಲೂ, ದನಗಳಹಟ್ಟಿ ಹತ್ತಿರವೇ ಇರುವುದರಿಂದಲೂ, ಸ್ನಾನದ ಕೆರೆಯು ಕೂಡಾ ಸಮೀಪವೇ ಇರುವುದರಿಂದಲೂ, ಭಾಷಣ, ಹರಿಕತೆ ಇತ್ಯಾದಿಗಳಿಗಾಗಿಯೂ ಶ್ರೀ ಕೃಷ್ಣದರ್ಶಣಕ್ಕೆ ಬರುವ ಜನರಿಂದಲೂ ನಿಬಿಡವಾಗಿ ತುಂಬಿ ಆ ಸ್ಥಳವು ಆರೋಗ್ಯಕ್ಕೆ ಹೆಚ್ಚಿನ ಹಿತವಲ್ಲದಂತೆ ಕಾಣುತ್ತದೆ. "ಗತಾನು ಗತಿ ಕೋ ಲೋಕಃ ನಲೋಕಃ ಪಾರಮಾರ್ಥಿಕಃ । ಸೇತೌ ಸೈಕತ ಲಿಂಗೇನ ನಷ್ಟಂ ಮೇ ತಾಮ್ರ ಭಾಜನಂ ॥" ಎಂಬ ಉಕ್ತಿಯಂತೆ ಸೇತು ಸ್ನಾನ ಮಾಡಲು ಹೋಗುವಾಗ ತನ್ನ ಚೆಂಬು ಕಳೆದು ಹೋಗದಂತೆ, ಹೊಯ್ಗೆ ರಾಶಿಯೊಳಗೆ ಬಚ್ಚಿಟ್ಟದ್ದನ್ನು ಇತರರು ಕಂಡು ಸ್ನಾನಕ್ಕೆ ಹೋಗುವ ಮುಂಚೆ ಲಿಂಗದಂತೆ ಹೊಯ್ಗೆ ರಾಶಿಮಾಡಿ ಹೋಗುವ ಪದ್ಧತಿಯು ಇಲ್ಲಿ ಇದೆ ಎಂದು ಅವರೂ ಹೊಯ್ಗೆ ರಾಶಿಗಳನ್ನು ಮಾಡಿ ಸ್ನಾನಕ್ಕೆ ಹೋದುದರಿಂದ ಹಿಂತಿರುಗಿ ಬರುವಾಗ ಹೊಯ್ಗೆ ರಾಶಿಗಳ ಬಾಹುಲ್ಯದಿಂದ ತನ್ನ ತಂಬಿಗೆ ಯಾವ ಹೊಯ್ಗೆ ರಾಶಿಯೊಳಗೆ ಇದೆ ಎಂಬುದನ್ನು ತಿಳಿಯದೆ ತನ್ನ ತಂಬಿಗೆಯನ್ನು ಕಳೆದು ಕೊಂಡವನಂತೆ, ಜನರು ವಿಚಾರಮಾಡದೆ, ಒಬ್ಬನು ಮಾಡಿದಂತೆ ಇನ್ನೊಬ್ಬನು ವರ್ತಿಸಿ ತಮ್ಮ ಮೂಢನಂಬಿಕೆ ವ್ಯಕ್ತಪಡಿಸುವ ಸ್ಥಳ ಇದೆಂದು ಹೇಳಿದರೆ ತಪ್ಪಾಗಲಾರದು.

ಈ ವಾದಿರಾಜಸ್ವಾಮಿಗಳಿಗೆ ಆ ಸಮಯದಲ್ಲಿ ಅಷ್ಟುಸಾಹಸದ ಕೆಲಸ ಮಾಡಲು ಹೇಗೆ ಸಂದರ್ಭ ಸಿಕ್ಕಿತು? ಎಂಬುದು ಪ್ರಶ್ನಾರ್ಹವಾಗಿದೆ.

ಕಾರಣ ಹೀಗುಂಟು:— ಇವರ ಪಂಗಡದವರು ಅಹಿಚ್ಛತ್ರದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಇವರ ಮಾಧ್ವಮತವು ಉಡುಪಿಯಲ್ಲಿ ಹೆಚ್ಚಿನ ಪ್ರಸಿದ್ಧಿಪಡೆದುದು 1614ರ ನಂತರ. ವಿಜಯನಗರ ಸಾಮ್ರಾಜ್ಯವು ಅಳಿದುಹೋದುದು 1644ರಲ್ಲಿ. ಆದರೆ ಅದರ ಬಲವು 1582ರ ನಂತರ ಕುಂದಿಹೋಗಲು, 1554ರ ನಂತರ ಈ ಜಿಲ್ಲೆಯ ಮತ್ತು ಇತರ ಜಿಲ್ಲೆಗಳ ಮಾಂಡಲೀಕರುಗಳಾಗಿ ವಿಜಯನಗರದವರು ನೇಮಿಸಿದ ಕೆಳದಿನಾಯಕರು 1582ರ ನಂತರ ಸ್ವತಂತ್ರವಾಗಿ ಆಳತೊಡಗಿದರು. ಅದೇ ಸಂದರ್ಭದಲ್ಲಿ ಪೋರ್ಚುಗೀಸರು ಗೋವೆಯಲ್ಲಿ ಬಲವಾಗಿ ನೆಲೆಗೊಂಡರು. ಕೆಳದಿಯ ನಾಯಕರಿಗೆ ಗೆರ್ಸಪ್ಪೆ, ಕಾರ್ಕಳ, ಉಳ್ಳಾಲ ಮೊದಲಾದ ಸ್ಥಳಗಳ ಅಧಿಕಾರಿಗಳು ಉಪದ್ರವಕೊಡಲು ಪ್ರಾರಂಭಿಸಿದರು. ಸಣ್ಣ ಸಣ್ಣ ಅಧಿಕಾರಿಗಳಾದ ಬಂಗರು, ಚೌಟರು ಮತ್ತು ಅಜಿಲರು ಮೊದಲಾದವರು ಸ್ವಾತಂತ್ರ್ಯತೆಯನ್ನು ಸ್ಥಾಪಿಸಿಕೊಂಡು ಅವರೊಳಗೆ ಜಗಳವಾಡಿಕೊಳ್ಳುತ್ತಿದ್ದರು. ಈ ಅನಾಯಕತ್ವದ ಕಾಲದಲ್ಲಿ ವಾದಿರಾಜರು ಉಡುಪಿಯಲ್ಲಿ ಅಲ್ಲಿಯ ಸ್ಥಾನಿಕ ಶಿವಬ್ರಾಹ್ಮಣರನ್ನು ಓಡಿಸಿ ಅನಂತೇಶ್ವರ ಚಂದ್ರೇಶ್ವರ ದೇವಳಗಳನ್ನು ಸ್ವಾಧೀನಪಡಿಸಿ ತನ್ನ ಮಠವನ್ನು ಕಟ್ಟಿಸಿ ತನ್ನ ಮತದ ಬಲವನ್ನು ಹೆಚ್ಚಿಸುವ ಕಾರ್ಯದಲ್ಲಿ ಜಯಶೀಲರಾದರು. ಈ ಅನಾಯಕತ್ವದ ಗಲಾಟೆಯನ್ನು ನಿಲ್ಲಿಸಲು ಇಕ್ಕೇರಿ ನಾಯಕರು ನಮ್ಮ ಜಿಲ್ಲೆಗೆ ದಂಡೆತ್ತಿಕೊಂಡು ಬರಬೇಕಾಯಿತು. ಹೀಗಾಗಿ ಕೆಲವು ವರ್ಷಗಳು ಸಂದುಹೋದವು. ಕಡೆಗೆ ಶಿವಪ್ಪನಾಯಕನ ಆಳ್ವಿಕೆಯ ಕಾಲದಲ್ಲಿ ಅವನು (1645-1660) ತುಳುರಾಜ್ಯವನ್ನು ನೀಲೇಶ್ವರದವರೇಗೆ ಸ್ವಾಧೀನಮಾಡಿಕೊಂಡನು. ತರುವಾಯ ಸೋಮಶೇಖರನ ಕಾಲದಲ್ಲಿ (1663-1671) ಶಿವಾಜಿಯು ಕುಂದಾಪುರದ ಮೇಲೆ ಬಿದ್ದುದರಿಂದ ಅವನ ಕಡೆಯವರು ಗೋಕರ್ಣದ ವರೇಗಿನ ಪಟ್ಟಣಗಳನ್ನು ಸುಲಿಗೆಮಾಡಿ ಹೋದನಂತರ 1763ರ ವರೆಗೆ ಹೆಚ್ಚಿನ ಬದಲಾವಣೆಗಳುಂಟಾಗಲಿಲ್ಲ. ಆ ಕಾಲದಲ್ಲಿ ಹೈದರಾಲಿಯು ಇಕ್ಕೇರಿ ನಾಯಕರ ರಾಜಧಾನಿಯಾದ ಬಿದನೂರನ್ನು

ಹಿಡಿದು ತುಳು ರಾಜ್ಯವನ್ನು ಆಕ್ರಮಿಸತೊಡಗಿ 1768ರಲ್ಲಿ ಮಂಗಳೂರಿಗೆ ಬಂದು, ಇಂಗ್ಲೀಷರನ್ನು ಓಡಿಸಿ ತುಳುರಾಜ್ಯದ ಯಜಮಾನನಾದನು. 1780ರಲ್ಲಿ ಹೈದರಾಲಿಯು ಸತ್ತ, ನಂತರ ಟಿಪ್ಪುವಿನ ಕಾಲದಲ್ಲಿ ಇಂಗ್ಲೀಷರ ಸಂಗಡ ಯುದ್ಧ ಆರಂಭವಾಗಿ ಕನ್ನಡ ಜಿಲ್ಲೆಯಲ್ಲಿ ಒಳ ಕಲಹಗಳುಂಟಾಗಿ 1799ರಲ್ಲಿ ಈ ಜಿಲ್ಲೆಯು ಪುನಃ ಇಂಗ್ಲೀಷರ ಸ್ವಾಧೀನವಾಯಿತು. (District Manual Suppliment 1938 ಪುಟ-178) ಈ ರೀತಿ ಜಿಲ್ಲೆಯ ಆಳ್ವಿಕೆಯು 1582 ರಿಂದ 1799ರವರೆಗೆ ಅಸ್ತವ್ಯಸ್ತವಾಗಿತ್ತು. ಅದರಲ್ಲಿಯೂ 1582 ರಿಂದ 1645ರ ವರೇಗೆ ಈ ಜಿಲ್ಲೆಯಲ್ಲಿ ಅನಾಯಕತ್ವದಿಂದ ಬಹಳ ಕೋಲಾಹಲಗಳು ಹಬ್ಬಿತ್ತೆಂದು ತಿಳಿಯಲಾಗುತ್ತದೆ. ಮೇಲೆ ಹೇಳಿದ ಅನಾಯಕತ್ವದ ಕಾಲದಲ್ಲಿ ವಿಜಯನಗರದವರಿಂದ ದೇವಸ್ಥಾನಗಳ ಸರ್ವಾಧಿಕಾರಿಗಳಾಗಿ ನೇಮಿಸಲ್ಪಟ್ಟ ಸ್ಥಾನಿಕರೆಂಬ ಬ್ರಾಹ್ಮಣ ಉದ್ಯೋಗಸ್ಥರಿಗೆ ಸರಕಾರದ ಬೆಂಬಲವಿಲ್ಲದೆ ಯಜಮಾನರಿಲ್ಲದ ಉದ್ಯೋಗಸ್ಥರಂತೆ ಇರಬೇಕಾಗಿತ್ತು. ಈ ಅನಾಯಕತ್ವದ ಕಾಲವೇ ವಾದಿರಾಜರಿಗೆ ತನ್ನ ಕಾರ್ಯವನ್ನು ಸಾಧಿಸಲು ಅನುಕೂಲವಾಗಿ ಪರಿಣಮಿಸಿತು. ಬ್ರಾಹ್ಮಣರಲ್ಲದವರನ್ನು ಮತಾಂತರಿಸಿ ತನ್ನ ಇಚ್ಛಾನುಸಾರ ವರ್ತಿಸಲು ಅನುಕೂಲವಾಯಿತು. 1801 ರಿಂದ 1812ರ ವರೆಗೆ ಮೈಸೂರಲ್ಲಿ ದಿವಾನನಾಗಿದ್ದು ಮೈಸರ್ ರಾಜನ ಆಡಳಿತೆಯನ್ನು ನಡೆಸುತ್ತಿದ್ದ ಕಡು ಮಾಧ್ವರಾದ ಪೂರ್ಣಯ್ಯನ ಉದಾರ ಕೊಡುಗೆಯಿಂದ ಈ ಮಾಧ್ವಮಠಗಳು ಮತ್ತಷ್ಟು ಮೇಲ್ಮೆಗೆ ಬಂದವು. ಆದರೂ ಕನ್ನಡ ಜಿಲ್ಲೆಯ ಹೆಚ್ಚಿನ ದೇವಾಲಯಗಳು 1845ರ ನಂತರವೇ ಈ ಮಾಧ್ವರ ಸ್ವಾಧೀನ ಬಂದದ್ದಾಗಿದೆ. ನಮ್ಮ ಜಿಲ್ಲೆಯಲ್ಲಿ 1835 ರಿಂದ 1840ರ ವರೆಗೆ ನಡೆದ ಕಲ್ಯಾಣಪ್ಪನ ಸ್ವಾತಂತ್ರ್ಯ ಸಮರದಲ್ಲಿ ಸ್ಥಾನಿಕ ಬ್ರಾಹ್ಮಣರಾದ ಕೊಡಗು ದಿವಾನ್ ಅಜ್ಜಾವರ ಲಕ್ಷ್ಮೀನಾರಾಯಣಯ್ಯನವರ ಬೆಂಬಲಕ್ಕೆ ಜಿಲ್ಲೆಯ ಸ್ಥಾನಿಕ ಬ್ರಾಹ್ಮಣರು ಸಮರದಲ್ಲಿ ಸೇರಿರುವರೆಂಬ ಆಪಾದನೆಯಿಂದ ಅವರಿಗೆ ಬ್ರಿಟೀಷ್ ರಾಜಾಶ್ರಯವು ಪೂರ್ಣ ತಪ್ಪಿ ಅವರ ಬಲವೂ ಪೂರ್ಣ ಕುಗ್ಗಿತು. ಇದರಿಂದಾಗಿ ಮಾಧ್ವರು ಬ್ರಿಟೀಷರ ಬೆಂಬಲದಿಂದ ಸ್ಥಾನಿಕರ ಸ್ವಾಧೀನವಿದ್ದ ಶ್ರೀ ಸುಬ್ರಹ್ಮಣ್ಯ ಮೊದಲಾದ ಅನೇಕ ಪ್ರಾಮುಖ್ಯ ದೇವಾಲಯಗಳನ್ನು ತಮ್ಮದನ್ನಾಗಿ ಮಾಡಿಕೊಂಡು

ಸ್ಥಾನಿಕರನ್ನು ಓಡಿಸಿದರು. ಆದರೂ ಕೆಲವು ದೇವಾಲಯಗಳು ಆಳಿದು ಉಳಿದು ಅವರ ಆಡಳಿತೆ ಮತ್ತು ಪೂಜೆಯಲ್ಲಿ ಈಗಲೂ ಉಳಿದಿವೆ.

ಶ್ರೀ ಕೃಷ್ಣಮಠದ ಗೋಶಾಲೆ ಮತ್ತು ಸಂತರ್ಪಣೆ

ಈ ಕೃಷ್ಣಮಠದಲ್ಲಿ ಇಲ್ಲಿಗೆ ಬಂದವರಿಗೂ ಊರಿನವರಿಗೂ ಇವರ ಬ್ರಾಹ್ಮಣ ಸಂತರ್ಪಣೆಯಲ್ಲಿ ಮೂರು ವಿಧದ ಭೋಜನಗಳ ವ್ಯವಸ್ಥೆ ಇದೆ ಈ ಭೋಜನಗಳಿಗೆ ಹೆಚ್ಚಾಗಿ ಇವರ ಮಾಧ್ವಮತದವರೇ ಬರುವವರು.

1. ಚೌಕಿಭೋಜನ:—ಇದರಲ್ಲಿ ಮಠಕ್ಕೆ ಹೆಚ್ಚು ಸಹಾಯಧನ, ಸೇವೆ ಸಲ್ಲಿಸಿದವರಿಗೆ ಸ್ವಾಮಿಗಳೊಂದಿಗೆ ಅವರ ಸಾಲಿನಲ್ಲೇ ಕುಳಿತು ಮಾಡುವ ಭೋಜನ. ಇದು ಪಂಚಭಕ್ಷ್ಯ ಪರಮಾನ್ನಗಳಿಂದ ಕೂಡಿದ ಉತ್ತಮ ಭೋಜನ. ಅದರಲ್ಲಿಯೂ ಸ್ವಾಮಿಗಳ ಹತ್ತಿರ ಕುಳಿತವರಿಗೆ ಹೆಚ್ಚಿನ ಮರ್ಯಾದೆ. ದೂರ ಕುಳಿತವರಿಗೆ ಕೆಲವು ಸಲ ಕೆಲವು ಖಾದ್ಯಗಳು ಬಾರದೆ ಇರುವುದೂ ಇದೆ. ಅಂತು ಈ ಭೋಜನವು ಅವರ ಖಾಸಾ ಭಕ್ತರಿಗೆ ಮಾತ್ರ.

2. ವೃಷ್ಟಾನ್ನ ಭೋಜನ:—ಇದು ಮಧ್ಯಮ ತರಗತಿದ್ದು, ಇದಕ್ಕೆ ಜಿಲ್ಲೆಯ ಹೊರಗಿನಿಂದ ಬಂದು ಹೆಚ್ಚಿನ ಸೇವೆ ಸಲ್ಲಿಸಿದವರು ಆಗಬೇಕು. ಊರಿನವರಿಗೂ ಸಾಧಾರಣ ಸೇವೆ ಸಲ್ಲಿಸಿ ಧನಸಹಾಯ ಮಾಡಿದವರಿಗೂ ಇದರಲ್ಲಿ ಪ್ರವೇಶವಿದೆ. ಇದರಲ್ಲಿ ಸಾಧಾರಣ ತರದ ಉತ್ತಮ ಖಾದ್ಯಗಳೂ ಸಿಕ್ಕುತ್ತವೆ.

3. ಭೂರಿಭೋಜನ:—ಇದು ಸರ್ವತ್ರ ಮಠದ ಅನುಯಾಯಿಗಳಿಗೆ. ಇದರಲ್ಲಿ ಸಾರು, ಅನ್ನ, ಮಜ್ಜಿಗೆ ನೀರು ಮುಖ್ಯ. ಬಾಕಿ ಖಾದ್ಯಗಳು ಅಲ್ಪ ಸ್ವಲ್ಪ ಉಳಿದಿದ್ದರೆ ಮಾತ್ರ.

ಈ ಮೂರು ಭೋಜನಗಳಲ್ಲೂ ಅವರ ಮುದ್ರೆ ಒತ್ತಿದವರಿಗೆ ಹೆಚ್ಚಿನ ಸನ್ಮಾನ, ಭಸ್ಮಧಾರಿಗಳಿಗೆ ಪ್ರಶಸ್ತಿ ಕಮ್ಮಿ.

ಈ ರೀತಿಯ ಭೋಜನಗಳನ್ನು ಈ ಮಠದಲ್ಲಿ ಏರ್ಪಡಿಸಿದ್ದು ಇವರ ಮಾಧ್ವಮತಕ್ಕೆ ಮತಾಂತರಿಸಿ ಬಂದವರು ತಿರುಗಿ ಇವರ ಮತದಿಂದ ಹೊರಹೋಗದಂತೆ ಮಾಡಿದ ವಶೀಕರಣವಿದ್ಯೆಯಾಗಿದೆ. ಈ ವಶೀಕರಣ ವಿದ್ಯೆಯಿಂದ ಇವರ ಊಟಕ್ಕೆ ಮರುಳಾಗಿ ಅನೇಕರು ಈಗಲೂ ಸುಡು

ಮುದ್ರೆ ಒತ್ತಿಕೊಂಡು ಸೇರುವವರು ಇದ್ದಾರೆ. ಇದು ಕೆಲವರ ಭ್ರಾಂತಿ ಆಗಿದೆ. ಈ ಭೋಜನಗಳನ್ನು ಏರ್ಪಡಿಸಿದ ಕಾಲದಲ್ಲಿ ಬ್ರಾಹ್ಮಣೇತರರೇ ಹೆಚ್ಚಾಗಿ ಇವರ ಮತದಲ್ಲಿ ಸೇರಿದವರಾದುದರಿಂದ ಊಟದಿಂದ ಎದ್ದೊಡನೆ ಎಚ್ಚಲಿಲೆ ತೆಗೆಯುವ ಪ್ರಶ್ನೆ ಬಂತು. ಮತಾಂತರ ಹೊಂದಿದವರು ಬೇರೆ ಬೇರೆ ಮತದವರಾದುದರಿಂದ ಅವರ ಮುಂಚಿನ ಮತದ ಭೇದಭಾವನೆಗಳು ಬಿಟ್ಟುಹೋಗದೆ ಎಚ್ಚಲೆಲೆ ತೆಗೆಯಲು ಒಬ್ಬನೂ ಒಪ್ಪಲಿಲ್ಲ. ಇದರಿಂದ ಕಷ್ಟಕ್ಕೆಬಿದ್ದ ಆಗಿನ ಯತಿಗಳು ಇದಕ್ಕೊಂದು ಉಪಾಯವನ್ನು ಕಂಡು ಹಿಡಿದು ಭೋಜನ ಶಾಲೆಯ ಹತ್ತಿರವೇ ತಾಗಿ 40-50 ದನಕರುಗಳನ್ನು ಸಾಕುವ ಹಟ್ಟಿಯೊಂದನ್ನು ಏರ್ಪಡಿಸಿ ಅದರಲ್ಲಿರುವ ಗೋವುಗಳು ಇವರ ಭೋಜನ ಮುಗಿದೊಡನೆ ಭೋಜನ ಶಾಲೆಗೆ ಬಂದು ಇವರ ಎಚ್ಚಲಿಲೆಯನ್ನು ತಿನ್ನುವಂತೆ ಮಾಡಿ ಭೋಜನ ಶಾಲೆಯ ಶುದ್ಧಿಗೆ ವ್ಯವಸ್ಥೆ ಮಾಡಿಸಿದರು. ಈಗಲೂ ಈ ಪದ್ಧತಿಯು ನಡೆದುಬರುತ್ತದೆ. ಈ ಗೋವುಗಳು ಇವರ ಮತದ ಭೋಜನಗಳು ಯಾವಾಗ ಮುಗಿಯುತ್ತದೆ? ಎಂದು ಕಾದು ಕೂತು ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕಾಗಿದೆ. ಅವುಗಳ ಪೋಷಣೆಗೆ ಹೆಚ್ಚಿನ ಆಹಾರವಿಲ್ಲದೆ ಅವುಗಳು ಬಡಕಲಾಗಿ ಇರುವ ದೃಶ್ಯವನ್ನು ನಾವು ಈಗಲೂ ಕಾಣಬಹುದು.

ಗೋರಕ್ಷಕ, ಗೋಪಾಲಕನೆಂದು ಬಿರುದು ಪಡೆದ ಶ್ರೀ ಕೃಷ್ಣನ ಪೂಜಕರು, ಭಕ್ತರೆಂದು ಹೇಳಿಕೊಳ್ಳುವ ಈ ಯತಿಗಳು ಗೋಪೂಜೆ ಮಾಡಿ ಗೋಗ್ರಾಸಕೊಟ್ಟು ಪೂಜಿಸಲ್ಪಡಬೇಕಾದಗೋವುಗಳಿಗೆ ಎಚ್ಚಲೆಲೆ ತಿನ್ನಿಸುವುದು ನೋಡಿದರೆ ಇವರಿಗೆ ಗೋವಿನ ಮೇಲೆ ಮತ್ತು ಶ್ರೀ ಕೃಷ್ಣನ ಮೇಲೆ ಎಷ್ಟು ಭಕ್ತಿ ಇದೆ ಎಂಬುದು ಇವರ ಈ ವರ್ತನೆಯಿಂದ ವ್ಯಕ್ತವಾಗುತ್ತದೆ. ಗೋವುಗಳ ಹಾಲು ತುಪ್ಪದಿಂದ ಪೋಷಿಸಲ್ಪಡುವ ಇವರು ಎಚ್ಚಲೆಲೆ ತಿನ್ನುವ ಜಾತಿಗೆ ಈ ಗೋವುಗಳನ್ನು ಸೇರಿಸಿದುದು ಹಿಂದೂ ಸನಾತನ ಧರ್ಮಕ್ಕೆ ಒಂದು ದೊಡ್ಡ ಕಲಂಕವಾಗಿದೆ. ಇದೇ ಇಲ್ಲಿಯ ಸಂತರ್ಪಣೆ ಮತ್ತು ಗೋಶಾಲೆಯ ಮಹತ್ವ.

ಕನಕನ ಗುಡಿ

ಇದು ಶ್ರೀ ಕೃಷ್ಣ ಮಂದಿರದ ಪಡುಭಾಗದಲ್ಲಿ "ಕನಕನ ಕಿಂಡಿ"

ಎಂದು ಹೇಳಲ್ಪಡುವ ಕಿಟಿಕಿಗೆ ಎದುರಾಗಿ ಮುಖಮಾಡಿ ಶ್ರೀ ಅನಂತೇಶ್ವರ ದೇವಸ್ಥಾನದ ಬಡಗು ಅಂಗಣದಲ್ಲಿದೆ. ಈ ಗುಡಿಯಲ್ಲಿ ಮೊದಲು ಕನಕದಾಸನ ವಿಗ್ರಹವಿರಲಿಲ್ಲ. ಕಳೆದ 1966ನೇ ಇಸವಿಯಲ್ಲಿ ಉಡುಪಿ ಮುನಿಸಿಪಲ್ ಚೇರ್‌ಮನ್ ಶ್ರೀ ಮಧ್ವರಾಜ ಎಂಬವರು ಕನಕದಾಸನ ವಿಗ್ರಹವೊಂದನ್ನು ಮಾಡಿಸಿ ಅವನ ಗುಡಿ ಎಂದು ಹೇಳಲ್ಪಟ್ಟ ಹಳೆಕಟ್ಟಡವನ್ನು ಹೊಸತಾಗಿ ಮಂಟಪಾಕಾರದಲ್ಲಿ ನಿರ್ಮಿಸಿ ಅದರಲ್ಲಿ ಪ್ರತಿಷ್ಠಿಸಿರುತ್ತಾರೆ. ಇದರಿಂದ ಕನಕದಾಸನು ಉಡುಪಿಗೆ ಬಂದುದು ಸತ್ಯವಲ್ಲದಿದ್ದರೂ ಜನತೆಯು ಕಣ್ಣಿಗೆ ಅವನು ಉಡುಪಿಗೆ ಬಂದುದು ನಿಜವೆಂದು ಈ ಮೊದಲಿನ ಸ್ವಾಮಿಗಳು ಮಾಡಿದ ಕಟ್ಟುಕತೆಗೆ ಬೆಂಬಲ ಕೊಟ್ಟಂತಾಯಿತು. ಕನಕದಾಸನು ಉಡುಪಿಗೆ ಬಂದ ವಿಚಾರ ಯಾವ ಆಧಾರಗಳಿಂದಲೂ ವ ಅವನು ರಚಿಸಿದ ಪದ್ಯಗಳಿಂದಲೂ ಎಲ್ಲಿಯೂ ತಿಳಿದುಬರುವುದಿಲ್ಲ. “ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ....” ಎಂಬ ಪದ್ಯದಲ್ಲೂ ಉಡುಪಿ ಕೃಷ್ಣನ ವಿಚಾರದಲ್ಲಿ ಹೇಳಿದ್ದು ಎಲ್ಲಿಯೂ ಕಾಣುವುದಿಲ್ಲ. ತನ್ನಿಂದ ಭಜಿಸಲ್ಪಟ್ಟ ಚೆನ್ನಕೇಶವನ ವಿಚಾರವೇ ಅದರಲ್ಲಿರುವುದು. ಈ ಪದ್ಯಗಳನ್ನು ಉಡುಪಿಯತಿಗಳು ತಮ್ಮ ಕೃಷ್ಣನಿಗೆ ಸಂಬಂಧಪಟ್ಟದೆಂದು ಮಾಡಿಕೊಂಡು ಕನಕನ ಕಥೆಯನ್ನು ತಮ್ಮ ಸ್ವಾರ್ಥಕ್ಕೆ ಕಟ್ಟಿಕೊಂಡಿದ್ದಾಗಿರಬೇಕು.

ತಾ. 11-1-1934ನೇ ಇಸವಿಯ ನವಯುಗ ಪತ್ರಿಕೆಯ ಪರ್ಯಾಯ ಸಂಚಿಕೆಯಲ್ಲಿ 4ನೇ ಪುಟದ ಮಧ್ಯದ ಕಲಂಮಿನಲ್ಲಿ ಎಸ್.ಯು. ಪಣಿಯಾಡಿ ಎಂಬವರು ಕನಕನ ಕಿಟಿಕಿ ವಿಚಾರದಲ್ಲಿ ಈ ಕೆಳಗಿನಂತೆ ಪ್ರಕಟಿಸಿದ್ದಾರೆ: “ಶ್ರೀ ವಾದಿರಾಜರ ಉದಾರತೆಗೂ ಸಮಭಾವನೆಗೂ ಮತ್ತೊಂದು ಉದಾಹರಣೆ ಏನೆಂದರೆ ಹೀನಕುಲದಲ್ಲಿ ಹುಟ್ಟಿದವನಾಗಿದ್ದರೂ ಶ್ರೀ ಕೃಷ್ಣಭಕ್ತನಾದ ಕನಕದಾಸನನ್ನು ಅತ್ಯಂತವಾಗಿ ಪ್ರೀತಿಸಿ ಅವನಿಗೆ ಬೇಕಾದ ಸೌಕರ್ಯವನ್ನು ಒದಗಿಸುತ್ತಿದ್ದುದು, ಅಷ್ಟು ಮಾತ್ರವಲ್ಲದೆ ಅವನ ಭಗವದ್ಭಕ್ತಿಗೆ ಮೆಚ್ಚಿ ದೇವರ ಮುಂದೆ ಎಲ್ಲರೂ ಒಂದೆಂಬ ಭಾವನೆಯನ್ನು ಸ್ಥಿರಪಡಿಸುವುದಕ್ಕಾಗಿಯೂ ಮೂಡುಗಡೆಗೆ ಮುಖ ಹಾಕಿಕೊಂಡಿದ್ದ ಕೃಷ್ಣ ವಿಗ್ರಹವನ್ನು ಪಡುಗಡೆಗೆ ತಿರುಗಿಸಿ, ಅದಕ್ಕೆ ಸರಿಯಾಗಿ ಕಿಟಿಕಿಯನ್ನು

ಇರಿಸಿ, ಈ ಕಿಟಿಕಿಗೆ "ಕನಕನ ಕಿಟಿಕಿ'' ಎಂದು ಹೆಸರು ಇಟ್ಟಿದ್ದೇ ನಿದರ್ಶನವಾಗಿದೆ.

ಇದನ್ನು ಪ್ರಕಟಿಸಿದ ಯಸ್. ಯು. ಪಣಿಯಾಡಿಯವರು ಮಾಧ್ವ ಮತದವರೇ. ಇವರ ಪ್ರಕಟಣೆಯಿಂದ, ಕನಕದಾಸನ ಭಕ್ತಿಗೆ ಮೆಚ್ಚಿದ್ದು ಶ್ರೀ ಕೃಷ್ಣನಲ್ಲ, ವಾದಿರಾಜರು ಎಂದೂ, ಅಲ್ಲದೆ ಶ್ರೀಕೃಷ್ಣನು ತಿರುಗಿಲ್ಲ, ತಿರುಗಿಸಿದ್ದು ಎಂದೂ ಮತ್ತು ಗೋಡೆಯಲ್ಲಿ ಕಿಟಿಕಿ ಇರಿಸಿದ್ದೆಂದೂ ಸ್ಪಷ್ಟ ವಾಗುತ್ತದೆ. ಎಲ್ಲರೂ ಒಂದೇ ಎಂಬ ಭಾವನೆ ಇದ್ದ ಶ್ರೀ ವಾದಿರಾಜ ಯತಿಗಳಿಗೆ ಕೃಷ್ಣನನ್ನು ಪಡುಮುಖಕ್ಕೆ ತಿರುಗ್ಗಿಸಿ ಕಿಟಿಕಿ ಇರಿಸುವ ಬದಲು ಬಾಗಿಲೇ ತೆಗೆಸಬಹುದಿತ್ತು. ಅಥವಾ ಒಳಗಿನಿಂದಾದರೂ ಬಾಗಿಲು ಒಂದನ್ನು ಇರಿಸಬಹುದಿತ್ತು. ಅಂತೂ ಈ ಎರಡು ಕಿಟಿಕಿಗಳಿಂದ ಕೃಷ್ಣನ ದರ್ಶನವು ಕನಕನಿಗೆ ಆಯಿತು ಎಂದರೆ ಆಶ್ಚರ್ಯವೇ ಸರಿ. ಇವರ ಲೇಖನ ದಲ್ಲಿ ವಾದಿರಾಜಸ್ವಾಮಿಗಳು ಶಿವಬ್ರಾಹ್ಮಣರನ್ನು ಅವರ ಹಕ್ಕಿನದ್ದಾದ ಅನಂತೇಶ್ವರ, ದೇವಸ್ಥಾನದಿಂದ ಓಡಿಸಿ ಇವರ ಹಕ್ಕಿನದ್ದಾದ ಎಲ್ಲಾ ಸ್ಥಳ ಗಳನ್ನು ಸ್ವಾಧೀನಪಡಿಸಿದನ್ನು ಸ್ಪಷ್ಟಪಡಿಸಿದ್ದಾರೆ.

ಅದು ಹೀಗಿದೆ:– "ಶ್ರೀ ವಾದಿರಾಜ ಸ್ವಾಮಿಯವರು ಆಗಿನ ಕಾಲದ ರಾಜಕೀಯ ಅಧಿಕಾರಿಗಳನ್ನು ತನ್ನ ವಶಕ್ಕೆ ಶೀಘ್ರವಾಗಿ ಸೆಳೆದುಕೊಂಡರು. ಈ ಜನರ ಹಾಗೂ ರಾಜಕೀಯ ಅಧಿಕಾರಿಗಳ ಸಹಾಯದಿಂದ ಶಿವಬ್ರಾಹ್ಮ ಣರ ಸೊಕ್ಕನ್ನು ಮುರಿದು ಅವರನ್ನು ಉಡುಪಿಯಿಂದಲೇ ಓಡಿಸಿ ಅವರ ಹಕ್ಕಿನದ್ದಾದ ಶ್ರೀ ಮದನಂತೇಶ್ವರ ದೇವಸ್ಥಾನವನ್ನು ಸ್ವಾಧೀನಪಡಿಸಿ ಕೊಂಡು ಆ ದೇವಸ್ಥಾನದ ಕೋಟೆಯನ್ನು ಒಡೆದು ಆ ಕೋಟೆಯ ಮೇಲೆ ಎಂಟು ಮಠಗಳನ್ನು ಸ್ಥಾಪಿಸಿ ಅನಂತೇಶ್ವರ ದೇವಸ್ಥಾನಕ್ಕೆ ದಿಗ್ಬಂಧನ ವನ್ನುಂಟುಮಾಡಿದರು". ಯಸ್. ಯು. ಪಣಿಯಾಡಿಯವರ ಲೇಖನವು ಸ್ಮಾರ್ತರಾದ ಸ್ಥಾನಿಕ ಶಿವಬ್ರಾಹ್ಮಣರ ಮೇಲೆ ಅವರಿಗೆ ಎಷ್ಟುಮಟ್ಟದ ತಾತ್ಸಾರಭಾವನೆ ಇತ್ತು ಎಂಬುದನ್ನು ಇದು ದೃಢಪಡಿಸುತ್ತದೆ ಇದನ್ನು ವಾಚಕರೇ ಊಹಿಸಬಹುದು.

ಈ ಉಡುಪಿಯಲ್ಲಿ ಸಾಧಾರಣ ವಾದಿರಾಜರ ಕಾಲದಲ್ಲಿ ಪಲ್ಪಟ ನಾಯಕನೆಂಬ ಒಬ್ಬ ಜಮೀನ್ದಾರನಿದ್ದನಂತೆ. ಇವನು ಭಗವದ್ಭಕ್ತನಾ ನಾಗಿಯೂ, ಪ್ರಾಣಿದಯಾಪರನಾಗಿಯೂ, ಇದ್ದನಂತೆ. ಇವನು ಅಜ್ಜರ

ಎಂದು ಹೇಳಲ್ಪಡುವ ಕಿಟಕಿಗೆ ಎದುರಾಗಿ ಮುಖಮಾಡಿ ಶ್ರೀ ಅನಂತೇಶ್ವರ ದೇವಸ್ಥಾನದ ಬಡಗು ಅಂಗಣದಲ್ಲಿದೆ. ಈ ಗುಡಿಯಲ್ಲಿ ಮೊದಲು ಕನಕದಾಸನ ವಿಗ್ರಹವಿರಲಿಲ್ಲ. ಕಳೆದ 1966ನೇ ಇಸವಿಯಲ್ಲಿ ಉಡುಪಿ ಮುನಿಸಿಪಲ್ ಚೇರ್‌ಮನ್ ಶ್ರೀ ಮಧ್ವರಾಜ ಎಂಬವರು ಕನಕದಾಸನ ವಿಗ್ರಹವೊಂದನ್ನು ಮಾಡಿಸಿ ಅವನ ಗುಡಿ ಎಂದು ಹೇಳಲ್ಪಟ್ಟ ಹಳೆಕಟ್ಟಡವನ್ನು ಹೊಸತಾಗಿ ಮಂಟಪಾಕಾರದಲ್ಲಿ ನಿರ್ಮಿಸಿ ಅದರಲ್ಲಿ ಪ್ರತಿಷ್ಠಿಸಿರುತ್ತಾರೆ. ಇದರಿಂದ ಕನಕದಾಸನು ಉಡುಪಿಗೆ ಬಂದುದು ಸತ್ಯವಲ್ಲದಿದ್ದರೂ ಜನತೆಯ ಕಣ್ಣಿಗೆ ಅವನು ಉಡುಪಿಗೆ ಬಂದುದು ನಿಜವೆಂದು ಈ ಮೊದಲಿನ ಸ್ವಾಮಿಗಳು ಮಾಡಿದ ಕಟ್ಟುಕತೆಗೆ ಬೆಂಬಲ ಕೊಟ್ಟಂತಾಯಿತು. ಕನಕದಾಸನು ಉಡುಪಿಗೆ ಬಂದ ವಿಚಾರ ಯಾವ ಆಧಾರಗಳಿಂದಲೂ ವ ಅವನು ರಚಿಸಿದ ಪದ್ಯಗಳಿಂದಲೂ ಎಲ್ಲಿಯೂ ತಿಳಿದುಬರುವುದಿಲ್ಲ. "ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ .... " ಎಂಬ ಪದ್ಯದಲ್ಲೂ ಉಡುಪಿ ಕೃಷ್ಣನ ವಿಚಾರದಲ್ಲಿ ಹೇಳಿದ್ದು ಎಲ್ಲಿಯೂ ಕಾಣುವುದಿಲ್ಲ. ತನ್ನಿಂದ ಭಜಿಸಲ್ಪಟ್ಟ ಚೆನ್ನಕೇಶವನ ವಿಚಾರವೇ ಅದರಲ್ಲಿರುವುದು. ಈ ಪದ್ಯಗಳನ್ನು ಉಡುಪಿಯತಿಗಳು ತಮ್ಮ ಕೃಷ್ಣನಿಗೆ ಸಂಬಂಧಪಟ್ಟದೆಂದು ಮಾಡಿಕೊಂಡು ಕನಕನ ಕಥೆಯನ್ನು ತಮ್ಮ ಸ್ವಾರ್ಥಕ್ಕೆ ಕಟ್ಟಿಕೊಂಡಿದ್ದಾಗಿರಬೇಕು.

ತಾ. 11-1-1934ನೇ ಇಸವಿಯ ನವಯುಗ ಪತ್ರಿಕೆಯ ಪರ್ಯಾಯ ಸಂಚಿಕೆಯಲ್ಲಿ 4ನೇ ಪುಟದ ಮಧ್ಯದ ಕಲಂಮಿನಲ್ಲಿ ಎಸ್.ಯು. ಪಣಿಯಾಡಿ ಎಂಬವರು ಕನಕನ ಕಿಟಕಿ ವಿಚಾರದಲ್ಲಿ ಈ ಕೆಳಗಿನಂತೆ ಪ್ರಕಟಿಸಿದ್ದಾರೆ: "ಶ್ರೀ ವಾದಿರಾಜರ ಉದಾರತೆಗೂ ಸಮಭಾವನೆಗೂ ಮತ್ತೊಂದು ಉದಾಹರಣೆ ಏನೆಂದರೆ ಹೀನಕುಲದಲ್ಲಿ ಹುಟ್ಟಿದವನಾಗಿದ್ದರೂ ಶ್ರೀ ಕೃಷ್ಣಭಕ್ತನಾದ ಕನಕದಾಸನನ್ನು ಅತ್ಯಂತವಾಗಿ ಪ್ರೀತಿಸಿ ಅವನಿಗೆ ಬೇಕಾದ ಸೌಕರ್ಯವನ್ನು ಒದಗಿಸುತ್ತಿದ್ದುದು, ಅಷ್ಟು ಮಾತ್ರವಲ್ಲದೆ ಅವನ ಭಗವದ್ಭಕ್ತಿಗೆ ಮೆಚ್ಚಿ ದೇವರ ಮುಂದೆ ಎಲ್ಲರೂ ಒಂದೆಂಬ ಭಾವನೆಯನ್ನು ಸ್ಥಿರಪಡಿಸುವುದಕ್ಕಾಗಿಯೂ ಮೂಡುಗಡೆಗೆ ಮುಖ ಹಾಕಿಕೊಂಡಿದ್ದ ಕೃಷ್ಣ ವಿಗ್ರಹವನ್ನು ಪಡುಗಡೆಗೆ ತಿರುಗಿಸಿ, ಅದಕ್ಕೆ ಸರಿಯಾಗಿ ಕಿಟಕಿಯನ್ನು

ಇರಿಸಿ, ಈ ಕಿಟಕಿಗೆ "ಕನಕನ ಕಿಟಕಿ" ಎಂದು ಹೆಸರು ಇಟ್ಟಿದ್ದೇ ನಿದರ್ಶನವಾಗಿದೆ.

ಇದನ್ನು ಪ್ರಕಟಿಸಿದ ಯಸ್. ಯು. ಪಣಿಯಾಡಿಯವರು ಮಾಧ್ವ ಮತದವರೇ. ಇವರ ಪ್ರಕಟಣೆಯಿಂದ, ಕನಕದಾಸನ ಭಕ್ತಿಗೆ ಮೆಚ್ಚಿದ್ದು ಶ್ರೀ ಕೃಷ್ಣನಲ್ಲ, ವಾದಿರಾಜರು ಎಂದೂ, ಅಲ್ಲದೆ ಶ್ರೀಕೃಷ್ಣನು ತಿರುಗಿಲ್ಲ, ತಿರುಗಿಸಿದ್ದು ಎಂದೂ ಮತ್ತು ಗೋಡೆಯಲ್ಲಿ ಕಿಟಕಿ ಇರಿಸಿದ್ದೆಂದೂ ಸ್ಪಷ್ಟ ವಾಗುತ್ತದೆ. ಎಲ್ಲರೂ ಒಂದೇ ಎಂಬ ಭಾವನೆ ಇದ್ದ ಶ್ರೀ ವಾದಿರಾಜ ಯತಿಗಳಿಗೆ ಕೃಷ್ಣನನ್ನು ಪಡುಮುಖಕ್ಕೆ ತಿರುಗಿಸಿ ಕಿಟಕಿ ಇರಿಸುವ ಬದಲು ಬಾಗಿಲೇ ತೆಗೆಸಬಹುದಿತ್ತು. ಅಥವಾ ಒಳಗಿನಿಂದಾದರೂ ಬಾಗಿಲು ಒಂದನ್ನು ಇರಿಸಬಹುದಿತ್ತು. ಅಂತೂ ಈ ಎರಡು ಕಿಟಿಕಿಗಳಿಂದ ಕೃಷ್ಣನ ದರ್ಶನವು ಕನಕನಿಗೆ ಆಯಿತು ಎಂದರೆ ಆಶ್ಚರ್ಯವೇ ಸರಿ. ಇವರ ಲೇಖನ ದಲ್ಲಿ ವಾದಿರಾಜಸ್ವಾಮಿಗಳು ಶಿವಬ್ರಾಹ್ಮಣರನ್ನು ಅವರ ಹಕ್ಕಿನದ್ದಾದ ಅನಂತೇಶ್ವರ, ದೇವಸ್ಥಾನದಿಂದ ಓಡಿಸಿ ಇವರ ಹಕ್ಕಿನದ್ದಾದ ಎಲ್ಲಾ ಸ್ಥಳ ಗಳನ್ನು ಸ್ವಾಧೀನಪಡಿಸಿದನ್ನು ಸ್ಪಷ್ಟಪಡಿಸಿದ್ದಾರೆ.

ಅದು ಹೀಗಿದೆ:– "ಶ್ರೀ ವಾದಿರಾಜ ಸ್ವಾಮಿಯವರು ಆಗಿನ ಕಾಲದ ರಾಜಕೀಯ ಅಧಿಕಾರಿಗಳನ್ನು ತನ್ನ ವಶಕ್ಕೆ ಶೀಘ್ರವಾಗಿ ಸೆಳೆದುಕೊಂಡರು. ಈ ಜನರ ಹಾಗೂ ರಾಜಕೀಯ ಅಧಿಕಾರಿಗಳ ಸಹಾಯದಿಂದ ಶಿವಬ್ರಾಹ್ಮ ಣರ ಸೊಕ್ಕನ್ನು ಮುರಿದು ಅವರನ್ನು ಉಡುಪಿಯಿಂದಲೇ ಓಡಿಸಿ ಅವರ ಹಕ್ಕಿನದ್ದಾದ ಶ್ರೀ ಮದನಂತೇಶ್ವರ ದೇವಸ್ಥಾನವನ್ನು ಸ್ವಾಧೀನಪಡಿಸಿ ಕೊಂಡು ಆ ದೇವಸ್ಥಾನದ ಕೋಟೆಯನ್ನು ಒಡೆದು ಆ ಕೋಟೆಯ ಮೇಲೆ ಎಂಟು ಮಠಗಳನ್ನು ಸ್ಥಾಪಿಸಿ ಅನಂತೇಶ್ವರ ದೇವಸ್ಥಾನಕ್ಕೆ ದಿಗ್ಬಂಧನ ವನ್ನುಂಟುಮಾಡಿದರು". ಯಸ್. ಯು. ಪಣಿಯಾಡಿಯವರ ಲೇಖನವು ಸ್ಮಾರ್ತರಾದ ಸ್ಥಾನಿಕ ಶಿವಬ್ರಾಹ್ಮಣರ ಮೇಲೆ ಅವರಿಗೆ ಎಷ್ಟುಮಟ್ಟದ ತಾತ್ಸಾರಭಾವನೆ ಇತ್ತು ಎಂಬುದನ್ನು ಇದು ದೃಢಪಡಿಸುತ್ತದೆ ಇದನ್ನು ವಾಚಕರೇ ಊಹಿಸಬಹುದು.

ಈ ಉಡುಪಿಯಲ್ಲಿ ಸಾಧಾರಣ ವಾದಿರಾಜರ ಕಾಲದಲ್ಲಿ ಪಲ್ಲಟ ನಾಯಕನೆಂಬ ಒಬ್ಬ ಜಮೀನ್ದಾರನಿದ್ದನಂತೆ. ಇವನು ಭಗವದ್ಭಕ್ತನಾ ನಾಗಿಯೂ, ಪ್ರಾಣಿದಯಾಪರನಾಗಿಯೂ, ಇದ್ದನಂತೆ. ಇವನು ಅಜ್ಜರ

ಕಾಡು, ಸಿರಿವೀಡು, ಅಜ್ಜಿಪಡ್ಪು, ಇತ್ಯಾದಿ ಸ್ಥಳಗಳಲ್ಲಿ ತನಗೆ ಸಂಬಂಧಪಟ್ಟ ಸ್ಥಳಗಳನ್ನು ಗೋಚರಾವಿಗೆ ಧರ್ಮಾರ್ಥ ಬಿಟ್ಟಿದ್ದನಂತೆ. ಇವನು ನಡೆದುಕೊಂಡೇ ತಿರುಪತಿ ಯಾತ್ರೆ ಮಾಡಿದವನೆಂತಲೂ, ಇವನ ಉದಾರತೆಯನ್ನು ಕಂಡು ಜನರು ಆವನಿಗೆ ಅಭಿಮಾನ ಕೊಡುತ್ತಿದ್ದರಂತೆ. ಇವನನ್ನು ಮಠದ ಸ್ವಾಮಿಗಳು ಒಲಿಸಿ ಅವನಿಂದ ಸಹಾಯವನ್ನು ಪಡೆಯುವುದಕ್ಕೋಸ್ಕರ ಆವನಿಗೆ ನಿತ್ಯ ದರ್ಶನ ಮಾಡಲು ಅನುಕೂಲವಾಗುವಂತೆ ಇವರ ಕೃಷ್ಣಮಠಕ್ಕೆ ಪಡುದಿಕ್ಕಿನಲ್ಲಿ ಕಿಟಿಕಿಯನ್ನು ಸ್ವಾಮಿಗಳು ತಮ್ಮ ಸ್ವಾರ್ಥಕ್ಕಾಗಿ ರಚಿಸಿದ್ದುದು ನಿಶ್ಚಯವೆಂದು ತಿಳಿಯಬಹುದು.

ಕನಕನಕಿಂಡಿ ವಿಚಾರದಲ್ಲಿ

"ದ್ವೈತಮತ ಖಂಡನೆ" ಬರೆದವರು ಮುದ್ದಣ್ಣ ಬಲ್ಲಾಳ್–ಪುಟ ಸಂಖ್ಯೆ 54–55.

"ಕನಕನ ದೆಸೆಯಿಂದ ಕೃಷ್ಣನು ತಿರುಗಿದನು ಎನ್ನುವ ಒಂದು ಸಂಗತಿಯನ್ನು ಮಹತ್ವಾಗಿ ಮಾಧ್ವರು ವರ್ಣಿಸುವರು. ಯಾರು ಒಪ್ಪುವರೋ ತಿಳಿಯನು. ಮಹಾರಾಜನ ಹೇರಳ ತಸದೀಕು ಇರುತ್ತಿದ್ದ ಆ ವೇಣುಗೋಪಾಲಕೃಷ್ಣನು ಕುಂಜಿತ್ತಾಯರಿಂದ ಏನಾದನೆಂಬುದು ಏನುಗತಿ ಹೊಂದಿದನೆಂಬುದೂ ವಿಚಾರವಿಲ್ಲದೆ ಸುಮ್ಮನೆ ಈ ಕಡಗೋಲು ಕೃಷ್ಣನ ತಮಾಷೆ ವಿಚಾರ ಹೇಳಿ ಮಧ್ವಾಚಾರ್ಯರ ಮಹತ್ವ ವರ್ಣಿಸಿದ್ದರಿಂದ ಹೆಡ್ಡುಜನರಿಗೆ ಕರ್ಣಾನಂದವಾಗಬಹುದು. ಆದರೆ ನಿಜತ್ವಕ್ಕೆ ಕುಂದಕವಾಗಿ ಕಾಣುವುದು ಇರಲಿ. ಪ್ರತಿಷ್ಠಿಸಿದ ಕೃಷ್ಣನ ಮುಖವು ಈಗಲೂ ಗುಡಿಯೊಳಗಿರುವ ಆ ವೇಣುಗೋಪಾಲಕೃಷ್ಣನ ಮೂರ್ತಿಯು ಯಾವ ಕಡೆ ಇತ್ತು? **ಕನಕನು ವಾದಿರಾಜ ಸ್ವಾಮಿಗಳ ಕಾಲದವನೆಂದು ತಿಳಿಯಬಹುದು.** ಇಷ್ಟೊಂದು ಸಮಯ ಆ ಕಡಗೋಲು ಕೃಷ್ಣನ ಮುಖವು ಪೂರ್ವಕ್ಕೆ ಇರುತ್ತಿರಲು ಮಧ್ವಾಚಾರ್ಯರು ಪ್ರತಿಷ್ಠಿಸಿದ ಕೃಷ್ಣನ ಯಾವ ಪಕ್ಕದಲ್ಲಿ ಧ್ವಜವೂ, ತುಲಸಿ ವೃಂದಾವನವೂ ಇರುತ್ತಿತ್ತು ಎನ್ನುವುದನ್ನು ತಿಳಿದು ಸಮಾಧಾನ ಪಡೆಯಿರಿ. ಈ ಧ್ವಜ ಮತ್ತು ತುಲಸಿ ವೃಂದಾವನಗಳ ಸ್ಥಿತಿಗತಿಗಳಿಂದ ಮಧ್ವಾಚಾರ್ಯರೇ ತನ್ನ ಕೃಷ್ಣನನ್ನು ಪಶ್ಚಿಮ ಮುಖವಾಗಿ ಪ್ರತಿಷ್ಠಿಸಿದ್ದು ಎಂದರೆ ತಪ್ಪಾಗುವುದೇ? ಪೂರ್ವ

ದಿಕ್ಕಿನಲ್ಲಿ ನಿತ್ಯಸಂಸಾರಿಗಳು ಕುಂಜಿತ್ತಾಯರು ಪೂಜೆ ಮಾಡುತ್ತಿರವು ದನ್ನು ಕಾಣಬಾರದಂತೆ ಪೂರ್ವ ದಿಕ್ಕಿನ ಬಾಗಿಲನ್ನು ಮುಚ್ಚಿದ್ದು, ಎಂದರೆ ಅನ್ಯಾಯವಾಗುವುದೇ ! ಅಲ್ಲದೆ ಪೂರ್ವಾಭಿಮುಖವಾಗಿ ಕೃಷ್ಣ ನಿಂತಿರಲು ಹಿಂಬದಿ ಧ್ವಜವೇರಿಸುವುದಾಗಲೀ ತುಲಸಿ ವೃಂದಾವನ ಇಡುವುದಾಗಲೀ ಸುಯೆ? ಕುಟಿಲ ಸಂಗತಿ ಸರ್ವತ್ರ ವಂಚನೆ ಏತಕ್ಕೆ? ಮೈಸೂರು ಸರ ಕಾರದವರು ಯಾ ಅರಸರು ಬರಲು ಮಿಕ್ಕವರನ್ನು ವಂಚಿಸಿದ ಹಾಗೆಯೇ ಆವರನ್ನು ವಂಚಿಸಿ ಕಳುಹಿಸಿ ಬಿಡುವುದಲ್ಲವೇ. ಆ ಮೈಸೂರು ಮಹಾ ರಾಜನು ತನ್ನ ಹೇರಳ ತಸದೀಕಿನ ಆದಿ ಉಡುಪಿಯಲ್ಲಿರುತ್ತಿದ್ದ ಆ ಕೃಷ್ಣ ದೇವರ ವಿಷಯ ಕೂಲಂಕಷ ವಿಚಾರ ಮಾಡಿದರೆ ಕುಂಜಿತ್ತಾಯರ ಆಟವೂ ಮಧ್ವಾಚಾರ್ಯರ ತಮಾಷೆಗಳೂ ಹೊರಬೀಳುವುದಲ್ಲದೆ ಮತದ ವಿಷಯ ಕೂಡ ಗತಿ ಕಾಣುವುದು. ದುರುಪಯೋಗದ ತಕ್ಷೀರಿಗೆ ಗುರಿಯಾಗು ವರೋ? ತಿಳಿಯದು. ಕೃಷ್ಣನ ಮೊಗವು ತಿರುಗಿದ್ದಲ್ಲ ನಿಮ್ಮ ಮುಖವೂ ತಿರುಗುವುದು ಎಚ್ಚರ?.

ಮಧ್ವಾಚಾರ್ಯರ ಮತಸಿದ್ಧಾಂತಗಳು ಆಗಿ ಈಗ 800 ವರ್ಷಗಳಾ ದವು. ಮುಕ್ತಿ ಸೇರಿದವರು ಎಷ್ಟು ಮಂದಿ ಇರುವರು ? ವಿವರಿಸಬಹುದೆ? ವಾದಿರಾಜಸ್ವಾಮಿ ಎಂಬವರು ಸೋದೆಮಠದಲ್ಲಿದ್ದವರು. ಮಧ್ವಾಚಾ ರ್ಯರ ಶಿಷ್ಯರು ಕನಕನ ಉಪದೇಶ ಪ್ರಕಾರ ಔಪಾಸನಮಾಡಿ ಆ ವಾದಿರಾಜ ಸ್ವಾಮಿಯವರು ಹಯಗ್ರೀವನ ಸ್ಪರ್ಶವಾದರೂ ಹೊಂದಿ ಮುಕ್ತರಾದದ್ದೊ? ವ ಮಧ್ವಾಚಾರ್ಯರ ಉಪದೇಶ ಪ್ರಕಾರವೊ? ಚೆನ್ನಾಗಿ ತಿಳಿದುಕೊಳ್ಳಿರಿ ಕನಕನ ಉಪದೇಶದ ಮಹತ್ವವನ್ನು ಹೊರಪಡಿಸಲು ಬೇಸರವಾಗಿ ಕಡಗೋಲು ಕೃಷ್ಣನ ಮುಖ ತಿರುಗಿಸಿದನೆಂದು ಸಟೆಯಾಡದಿರಿ."

ಈ ಮೇಲಿನ ಬಲ್ಲಾಳರ ಮಾತುಗಳಿಂದ ಕನಕನ ಭಕ್ತಿಗೆ ಮೆಚ್ಚಿ ಕಡಗೋಲು ಕೃಷ್ಣನ ಮುಖ ತಿರುಗಿದ್ದಲ್ಲ. ವಾದಿರಾಜ ಸ್ವಾಮಿಯು ತಿರುಗಿ ಸಿದ್ದೆಂದೂ ಅರ್ಥವಾಗುತ್ತದೆ. ಈ ಬಲ್ಲಾಳರೂ ಇವರ ಮಾಧ್ವಮತ ದವರೇ.

ಕೆಲವು ಘಟನೆಗಳು ಮತ್ತು ದಾಕ್ಲೆಗಳು

1) ಇದು ಅಷ್ಟಮಠಗಳ ಪೈಕಿ ಪುತ್ತಿಗೆ ಮಠದ ಪ್ರಸಿದ್ಧ ಅಕ್ಕಯ್ಯ ವ್ಯಾಜ್ಯದ ಹೈಕೋರ್ಟು ತೀರ್ಪು A.S. No. 66 of 1881 in O.S.

3 of 1879 Dt Court S.K. ಸುಧೀಂದ್ರ ತೀರ್ಥಸ್ವಾಮಿ ವಾದಿ, ಅಪೀಲೆಂಟು. ವಿಜಯೀಂದ್ರ ತೀರ್ಥಸ್ವಾಮಿ ಯಾನೆ ಗೋಪಾಲಕೃಷ್ಣ ಮಾಯಿನರ್ ವಗೈರರು. 2, 3, 4ನೇ ಪ್ರತಿವಾದಿರು ಎದ್ರಿರು ತೀರ್ಪು ತಾ. 26—10—1883.

ವಿವರ:—1850 ರಲ್ಲಿ ರಾಮಚಂದ್ರಭಟ್ಟ ಎಂಬವನ ಹೆಂಡತಿ ಅಕ್ಕಯ್ಯ [ಮಹಾಲಕ್ಷ್ಮಿ] ಎಂಬವಳು ಗಂಡನನ್ನು ಬಿಟ್ಟು ಆಗಿನ ಪುತ್ತಿಗೆ ಮಠದ ಸುಮತೀಂದ್ರತೀರ್ಥ ಸ್ವಾಮಿಯೊಂದಿಗೆ ಅನೇಕ ವರುಷಗಳ ಕಾಲ ಇದ್ದು ಆ ಸ್ವಾಮಿಗೆ ಅಕ್ಕಯ್ಯನಲ್ಲಿ ಗೋಪಾಲಕೃಷ್ಣನೆಂಬ ಒಬ್ಬ ಹುಡುಗನು ಜನಿಸಿದನು. ಆ ಸ್ವಾಮಿಯು ಅಕ್ಕಯ್ಯನಲ್ಲಿ ಮಾತು ಕೊಟ್ಟ ಪ್ರಕಾರ ಅವಳ ಮಗನಿಗೆ ಚಿಕ್ಕಸ್ವಾಮಿ ಪಟ್ಟಕೊಟ್ಟು ವಿಜಯೀಂದ್ರ ತೀರ್ಥಸ್ವಾಮಿ ಎಂಬ ಹೆಸರಿಟ್ಟು ತನ್ನ ಮಠಕ್ಕೆ ಮುಂದಿನ ವಾರೀಸುದಾರನಾಗಿ ಮಾಡಿ ಕೊಂಡನು. ಆದರೆ ಇತರ 7 ಮಠದವರು ಮತ್ತು ಅವರ ಮತದವರು ಇದನ್ನು ಒಪ್ಪದೆ ಒಂದು ಸಭೆ ಸೇರಿಸಿ ವಿಚಾರಣೆ ನಡೆಸಿ, ಆ ವಿಚಾರಣೆಯಲ್ಲಿ ರಾಮಚಂದ್ರಭಟ್ಟನು ತನ್ನ ಹೆಂಡತಿಯನ್ನು ಬಿಟ್ಟೊಡನೆ ಘಟ ಕ್ರಿಯೆ ಎಂಬ ಕರ್ಮವನ್ನು [ಜಾತಿ ಕೆಟ್ಟರೆ ಅವಳಿಗೆ ಜೀವಂತ ಇರುವಾಗಲೇ ಸತ್ತಂತೆ ಮಾಡುವ ಉತ್ತರಕ್ರಿಯೆ]. ಮಾಡಿದ ನಂತರ ಈ ಗೋಪಾಲ ಕೃಷ್ಣನೆಂಬವನು ಹುಟ್ಟಿದವನಾದುದರಿಂದ ಅವನ ತಂದೆ ಸುಮತೀಂದ್ರ ತೀರ್ಥ ಸ್ವಾಮಿಗೂ ಜಾತಿ ಇಲ್ಲವೆಂದು ಮಾಡಿ ಮತ್ತೊಬ್ಬ ಹುಡುಗನಿಗೆ ಸನ್ಯಾಸಕೊಟ್ಟು ಸುಧೀಂದ್ರಸ್ವಾಮಿ ಎಂಬ ಹೆಸರಿಟ್ಟು ಅವನಿಂದ ಪುತ್ತಿಗೆ ಸ್ವಾಮಿಯವರ ಮೇಲೆ ವ್ಯಾಜ್ಯ ಮಾಡಿಸಿದರು.

ತೀರ್ಪು:—ಆ ವ್ಯಾಜ್ಯದಲ್ಲಿ ಕೆಳಗಿನ ಕೋರ್ಟಿನಲ್ಲಿ ವಾದಿ ಸುಧೀಂದ್ರ ಸ್ವಾಮಿಗೆ ಅಪಗುಣವಾದುದರಿಂದ ವಾದಿಯು ಮದರಾಸು ಹೈಕೋರ್ಟಿನಲ್ಲಿ ಅಪೀಲು ಮಾಡಿದನು. ಅಪೀಲ್‌ನಲ್ಲಿ ವಿಜಯೀಂದ್ರ ತೀರ್ಥಸ್ವಾಮಿ ಯಾನೆ ಗೋಪಾಲಕೃಷ್ಣನು ವ್ಯಭಿಚಾರದಿಂದ ಹುಟ್ಟಿದವನೆಂದೂ; 7 ಮಠದ ಸ್ವಾಮಿಯರು ಅವರ ಜಾತಿಯವರು ಕೂಡಿ ಆಗಿನ ಪುತ್ತಿಗೆ ಸ್ವಾಮಿಗೂ ಅವನಿಂದ ಹುಟ್ಟಿದ ಮತ್ತು ಅವನ ಪಟ್ಟಕ್ಕೆ ಚಿಕ್ಕಸ್ವಾಮಿಯಾಗಿ ನೇಮಿಸಲ್ಪಟ್ಟ ಗೋಪಾಲಕೃಷ್ಣನಿಗೂ ಜಾತಿಯಿಂದ ಹೊರಗೆಹಾಕಿ ಮಾಡಿದ ತೀರ್ಮಾನವು ಸರಿಯೆಂದೂ, ಪುತ್ತಿಗೆ ಮಠದ ಎಲ್ಲಾ ಸೊತ್ತು ಶ್ರೀ ಕೃಷ್ಣ

ಮಠದ ಪೂಜೆ ಕೂಡ ವಾದಿಗೆ ಸೇರತಕ್ಕದೆಂದೂ, ವಾದಿಯೇ ಪುತ್ತಿಗೆ ಮಠದ ಹುಕ್ಕುದಾರನೆಂದೂ; ಅಲ್ಲದೆ 3ನೇ ಪ್ರತಿವಾದಿ ಅಪ್ಪಯ್ಯಾಚಾರಿ ವ್ಯಾಜ್ಯದ ಎಲ್ಲಾ ಖರ್ಚು, ಅಪೀಲು ಖರ್ಚು ಕೂಡಾ ಕೊಡಬೇಕೆಂದು ತೀರ್ಮಾನವಾಯಿತು.

ಈ ಅಪೀಲಿನಲ್ಲಿ ಜಡ್ಜರು—1. Honourable Mr. Justice Keruan. 2. Honourable Mr. Justice Kindersly ಎಂಬ ಆಂಗ್ಲೇಯರು. ಈ ತೀರ್ಪು ನಡೆದದ್ದು ಮದ್ರಾಸು ಹೈಕೋರ್ಟಿನಲ್ಲಿ. ಅಪೀಲು ಮಾಡಿದ ಸಮಯದಲ್ಲಿ ಒಂದನೆ ಪ್ರತಿವಾದಿ ಪುತ್ತಿಗೆ ಸ್ವಾಮಿಯು ಕಾಲವಾದುದರಿಂದ, 2ನೇ ಪ್ರತಿವಾದಿ ಚಿಕ್ಕಸ್ವಾಮಿ ವಿಜಯೇಂದ್ರ ತೀರ್ಥರಿಯಾನೆ ಗೋಪಾಲಕೃಷ್ಣನಿಗೆ 4ನೇ ಪ್ರತಿವಾದಿ ಅಪ್ಪಯ್ಯಾಚಾರಿ ಎಂಬವನು ಗಾರ್ಡಿಯನ್ ಆಗಿ ನೇಮಕಪಟ್ಟಿದ್ದಾನೆ.

ಜಜ್‌ಮೆಂಟಿನ ಕೆಲವು ಅಂಶಗಳು

I am unable to agree in the conclusions arrived at by the Dt. Judge in this case. The whole case turns upon whether the second defendent proved to be illegitimate and born adulterous inter course...

JUDGEMENT

PAGE 33. 1st that the 2nd defendent is the ellegitemate son of the 3rd defendent and that on that ground the late 1st defendent was not competent to appoint the 2nd defendent as his successor and that the 2nd defendent is therefore not competant to hold the oblige of Swami.

2nd that the late 1st defendent was put out of caste on account of his adulterous conduct with the 3rd defendent charged against the 1st defendent and found to be true by the sabha and on

account of his having formerly appointed the 2nd defendent(an ellegitimate son)as his successor and the 2nd defendent was also put out of caste.

The decree I think should be that plaintiff is entitled as Guru of Puttege Mutt to perform the worship of idol Krishna Devaru Mutt at Udipi.

The 3rd defendent and the 4th defendent to pay the plaintiff the cost of this suit through out and the cost of this appeal when taxed.

ಈ ಮೇಲಿನ ಜಜ್‌ಮೆಂಟಿನಿಂದ ತಾವು ಉತ್ತಮ ಬ್ರಾಹ್ಮಣರೆಂದು ಹೇಳಿಕೊಳ್ಳುವ ಈ ಮಾಧ್ವಗುರುಗಳ ವರ್ತನೆಯು ಎಷ್ಟು ಹೇಯವಾದುದೆಂದು ಸ್ಪಷ್ಟವಾಗುತ್ತದೆ.

2) 1932ನೇ ಇಸವಿಯಲ್ಲಿ ವಿಶಾಖಪಟ್ಟಣದ ಆಂಧ್ರ ಬ್ರಾಹ್ಮಣ ಅಂಕುರಾಜ ಸುಬ್ರಾಯಶರ್ಮನೆಂಬ ಒಬ್ಬ ಹಿಂದೂ ಮಿಶನರಿಯು ಕೆಲವು ಸಮಯ ಉಡುಪಿಯಲ್ಲಿ ಇದ್ದು ಮಠಗಳ ವಠಾರದಲ್ಲಿ ಬಹಿರಂಗವಾಗಿ ಎಲ್ಲರೂ ತಿಳಿಯುವಂತೆ ಡಿಸ್ಟ್ರಿಕ್ಟ್ ಮೇನ್ಯೆಲ್ ಆಧಾರದಿಂದ ಶಿವಳ್ಳಿ ಬ್ರಾಹ್ಮಣರು ಆದಿಯಲ್ಲಿ ಮೊಗವೀರರಾಗಿದ್ದರೆಂದೂ, ತನ್ನ ಪ್ರಚಾರ ಭಾಷಣಗಳಲ್ಲಿ ಹೇಳುತ್ತಿದ್ದನು. ಸಾವಿರಾರು ಜನರ ತಿಳುವಳಿಕೆಗೆ ಆ ಹೇಳಿಕೆಯನ್ನು ಆಧಾರಪೂರ್ವವಾಗಿ ಖಂಡಿಸಿ ಅವನ ಎದುರು ಪ್ರಸಂಗ ಮಾಡುತ್ತಿದ್ದರೆ ಮಾನ್ಯ ಗೃಹಸ್ಥನಾದ ಆತನು ಸ್ವಾಭಾವಿಕವಾಗಿಯೇ ತನ್ನ ತಪ್ಪನ್ನು ತಿದ್ದಿಕೊಳ್ಳುತ್ತಿದ್ದನು. ಅವನ ಹೇಳಿಕೆಯನ್ನು ಆಧಾರಪೂರ್ವಕ ಖಂಡಿಸುವ ಬದಲು ಮಂಗಳೂರಿಂದ ಪುಂಡರನ್ನು ತರಿಸಿ ಅವನು ಪ್ರಚಾರ ಮಾಡುವ ಸಮಯದಲ್ಲಿ ಪೋಲೀಸಿನವರ ಎದುರಿನಲ್ಲಿ ಅವನ ನಿಶಾನಿ ಮತ್ತು ಕರಪತ್ರಗಳನ್ನು ಮತ್ತು ಪುಸ್ತಕಗಳನ್ನು ಸೆಳೆದು ಆತನನ್ನು ಬಹಳವಾಗಿ ಹಿಂಸಿಸಿದುದು ಮಾತ್ರವಲ್ಲವೆ ಅವನನ್ನು ಇಹಲೋಕದಿಂದಲೆ ಹೊರಡಿಸಲಿಕ್ಕೆ ಪ್ರಯತ್ನಿಸಿದರು.

ಅದು ಆಗದೆ ಇದ್ದುದರಿಂದ ಉಡುಪಿಯಿಂದಾದರೂ ಹೊರಡುವಂತೆ ಮಾಡಲು ಸಾವಿರಾರು ರೂಪಾಯಿ ಖರ್ಚು ಮಾಡಿದರು. ಕಡೆಗೆ ಸೋದೆ ಮಠದ ಏಜಂಟರು ಆ ಮಿಶನರಿಯು ಉಡುಪಿಯೊಳಗೆ ಪ್ರಚಾರ ಮಾಡ

ದಂತೆ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಲ್ಲಿ 2/32/13—5—1932ನೇ ನಂಬರಿಗೆ ದಾಕ್ಲಾದ ಫಿರ್ಯಾದು ಮಾಡಿ ಉಡುಪಿಯಲ್ಲಿ ಪ್ರಚಾರ ಮಾಡದಂತೆ ಹುಕುಂ ಹೊರಡಿಸಿದರು. ನಂತರ ಸದ್ರಿ ಹಿಂದೂ ಮಿಶನರಿಯು ಕುಂದಾಪುರ ಡಿವಿಜನ್ ಜ್ಯೊಂಟ್ ಮೆಜಿಸ್ಟ್ರೇಟರಲ್ಲಿ Mis. Case 20/32/ 20—5—1932ನೇ ನಂಬರಿಗೆ ದಾಕ್ಲಾದ ಅಪೀಲು ಮಾಡಿ ಸದ್ರಿ ಹುಕುಂನ್ನು ರದ್ದು ಮಾಡಿಸಿದನು. ಈ ಸಂದರ್ಭದಲ್ಲಿ ಸ್ಥಳೀಯ ವಕೀಲರು ಮಠಕ್ಕೆ ಕಟ್ಟು ಬಿದ್ದಿದ್ದರು. ಆ ಜಜ್‌ಮೆಂಟಿನ ವಿಚಾರ—ಅಪೀಲ್ ಮಾಡಿದವನ ವಾದವು ಸರಿಯೆಂದೂ, ಈ ಮಾಧ್ವರಿಗೆ ಸಂಧ್ಯಾವಂದನೆ ಇಲ್ಲವೆಂದೂ, ಅಲ್ಲದೆ ಸಂಧ್ಯಾವಂದನೆ ಅಂದರೆ ಏನೆಂಬುದು ಮಠದ ಸ್ವಾಮಿಗಳಿಗೂ ಗೊತ್ತಿಲ್ಲವೆಂದೂ, ಸಂಧ್ಯಾವಂದನೆ ಮಾಡದೆ ಇರುವವರು ಬ್ರಾಹ್ಮಣರಾಗಲೂ ಸಾಧ್ಯವಿಲ್ಲವೆಂದೂ ತೀರ್ಪನಿತ್ತು ಕೆಳಗಿನ ಕೋರ್ಟಿನ ಹುಕುಂನ್ನು ರದ್ದುಮಾಡಿ ಇವನಿಗೆ ಆತಂಕವಿಲ್ಲದೆ ಪ್ರಚಾರ ಮಾಡುವಂತೆ ಅವಕಾಶ ಮಾಡಿಕೊಟ್ಟರು. ತಾವು ಉತ್ತಮ ಬ್ರಾಹ್ಮಣರೆಂದು ವಿಶದಪಡಿಸುವ ಆಧಾರಗಳು ಏನೂ ಮಾಧ್ವರಲ್ಲಿ ಇಲ್ಲದೆ ಇದ್ದುದರಿಂದ ಆ ಮಿಶನರಿಯು ಹೇಳಿದ ವಿಚಾರಗಳಲ್ಲಿ ಸತ್ಯಾಂಶವಿದೆ ಎಂಬುದನ್ನು ಮಠದವರೇ ಒಪ್ಪಿಕೊಂಡತಾಯಿತು. ತೀರ್ಪಿನ ಕೆಲವು ಅಂಶಗಳನ್ನು ಇದಕ್ಕೆ ಲಗ್ತಿಕರಿಸಿದೆ.

The Brief History of
SHARMA - MUTT - CASE

Ankuraja Subraya Sharma — Appellant
Agent Sode Mutt Udupi — Respondent

Proceedings of the joint Magistrate Kundapur Division dated 20th May 1932. N. S. Arunachalam Esq. M. A., I. C. S.

Mis. Case No 20/32 in Udupi Mis. Case 2/32 13—5—1932.

Messrs B. Ramachandra Rao for the Petitioner, A. Laxminarayan Rao for the Respondent.

4. The objectionable aspects of the Petitioners speach are stated to be those in which he is said tohavecondemned the Swamiyar as proffigate and in competent in relegious matters, the Shivally Brahmins having originally been fishermen. Madhwacharya has no,reality and the founder of one of the Mutts, Vadiraja is being deficient in the grace of God.

5. The piscatorial origin of Shivallies is referred to as a tradition in staruck Manual of S. Kanara and the sanctity of Madhwa and Vadiraja cannot be excluded from the spare of bona-fide relegious disputation

6. As to the aspersions on the Swamiyars and the Head of the Mutts, petitioner in his statement denied having insulted any individual. The Witnesses admit that nobody was mentioned by name. Their statements moreover deserve to be scrutinized as being interested. The Sub Inspector, P. W. 5 who was present at one of the meetings reports the lecture as follows "I put two questions to the Mutts, But as they did not reply, he could only say that they did not know what Sandhyavandana is. In that case can they be called as Brahmins.? It is in evidence that he even attempted to interview one of the Swamiyars, but failed. The activities of the mutts and those of the Swamiyars as heads of those

mutts are vitally important to every one interested in Hindu religion,and honest bonafide criticism of them are simply concomitants of a healthy religious life.

8. I am therefore, satisfied that the petitioner was a bona-fide religious enthusiast may be with more of zeal than discretion. religious contraversy is by no means a placid activity and the neighbourhood of the Mutts not perhaps conductive to unparturbed argumentations. And every religious reformer makes more enemies than friends. I consider however that the petitioner was well intentioned and his acts perfectly legitimate. The only question therefore, is whether the maintenance of public tranquality peremptorily demanded the secrifice of the petetioner's right to lecture. It appears that he had been lecturing for over two months without the occurence of any disturbance. In the course of his lecture on 24—4—1932 when he uttered the words referred in para 6. "Can such persons who do not know Sandhyavandana be considered Brahmin? One of the crowd, a man named Vadiraja of Mangalore immediately got excited rushed at the petitioner; and began to interpt him by all possible means. The petitioner himself states that he was assaulted by him (the Police Officers are all alleged to have been

present) and his flags and books stolen. These were later found on the road near one of the mutts. The petitioner would, if he were familiar with that religious book, rather compare himself to christian in Vanity Fair.

10. Under the circumstances the order of the Stationary Sub-Megistrate is cancelled.

(Sd) **N. S. Arunachalam.**
Joint Magistrate Coondapur.

[Printed and published at the expence of the Udupi Public]

3) ಇನ್ನೊಂದು ವಿಷಯ:— 1938-1939ರಲ್ಲಿ ಉಡುಪಿಯಲ್ಲಿ ಮುದ್ರಿತವಾದ "ಧ್ವೈತಮತ ಖಂಡನೆ" ಮತ್ತು "ನಿಶ್ಚಯ ಜ್ಞಾನ"ಗಳೆಂಬ ಎರಡು ಪುಸ್ತಕಗಳನ್ನು ಇವರ ಮಾಧ್ವಮತದವರೇ ಆದ ಮುದ್ದಣ್ಣ ಬಲ್ಲಾಳ, ಪಕ್ಷನಾಥ ಪೂರ್ಬಾಲಯ ಉಡುಪಿ, ಎಂಬವರು ಪ್ರಕಟಿಸಿದ್ದಾಗಿದೆ. ದೇವರು, ಧರ್ಮಶಾಸ್ತ್ರ ಇವುಗಳ ಹೆಸರಿನಲ್ಲಿ ಮಾಧ್ವರು ನಡೆಸುವ ಅತ್ಯಾಚಾರಗಳನ್ನು ಖಂಡಿಸಿ ಮತ್ತು ದ್ವೈತಮತವನ್ನು ಆಧಾರಪೂರ್ವಕವಾಗಿ ಖಂಡಿಸಿ ಮೇಲಿನ ಪುಸ್ತಕಗಳೆರಡು ಬರೆದುದಾಗಿರುತ್ತದೆ.

ಉಡುಪಿ ಕೃಷ್ಣನ ಗುಡಿಯ ಒಳಗೆ ಎರಡು ಕೃಷ್ಣ ಪ್ರತಿಮೆಗಳು ಇರುವವು ಎಂದೂ, ವೇಣುಗೋಪಾಲಕೃಷ್ಣನನ್ನು ಅಡಗಿಸಿ ಕಡೆಗೊಲು ಕೃಷ್ಣನನ್ನು ಇರಿಸಿದ ವಿಚಾರ ವಿಮರ್ಶೆಮಾಡಿ ಬರೆಯಲ್ಪಟ್ಟಿದೆ. ಈ ವಿಚಾರಗಳನ್ನು ಮುದ್ದಣ್ಣನವರು ತಮ್ಮೆರಡು ಪುಸ್ತಕಗಳಲ್ಲಿ ಮೊದಲನೆಯದಾದ "ದ್ವೈತಮತ ಖಂಡನೆ" ಎಂಬ ಪುಸ್ತಕದ 27ನೇ ಪುಟದಲ್ಲಿ 'ಶ್ರೀ ವೇಣುಗೋಪಾಲ ಕೃಷ್ಣನು ಎಲ್ಲಿರುವನು?' ಎಂಬುದನ್ನು ಹೀಗೆ ವಿವರಿಸಿದ್ದಾರೆ.

"ಈಗ ಕಡೆಗೋಲು ಕೃಷ್ಣನ ಹಿಂಬದಿಯಲ್ಲಿ ದೀಪದ ಸಾಲಿನಲ್ಲಿ ಎಡೆಯಲ್ಲಿ ಅಂತಹ ರಾಜಮಾನ್ಯ ದೇವನು ಭಕ್ತಜನರಿಗೆ ಕಾಣಿಸಿಕೊಳ್ಳ

ದಂತೆ ಇರಲು ಕಾರಣವೇನು? ಎನ್ನುವುದನ್ನು ಆಲೋಚಿಸಿರಿ, ವೇಣುಗೋಪಾಲ ಕೃಷ್ಣಮೂರ್ತಿಯ ದೇವಾಲಯವು ಮಧ್ವಾಚಾರ್ಯರ ಕಾಲಕ್ಕೂ ಪೂರ್ವದ್ದು. ಸನ್ಯಾಸಿಗಳ ಪೂಜೆಗೆ ಅರ್ಹವಾದುದಲ್ಲ. ನಿತ್ಯ ಸಂಸಾರಿಗಳಾದ ಕುಂಜಿತ್ತಾಯರು ಪೂಜೆ ಕೈಕೊಳ್ಳುತ್ತಿದ್ದರು. ಧ್ವೈತಸನ್ಯಾಸಿಗಳ ಕೈಸೇರಿದ ಬಗೆ ಏನೆಂದು ನಿರ್ಧರಿಸುವಿರಿ? ಶೈವಾಲಯದ ಸ್ಮಾರ್ತರಲ್ಲಿ ಗುರು ಇದ್ದು ತನಗೆ ವಿಮೋಚನ ಮಾಡಿಕೊಳ್ಳಲಿಕ್ಕೆ ಆಗದಿದ್ದಲ್ಲಿ ಮಧ್ವಾಚಾರ್ಯರಿಗೆ ಉತ್ತೇಜನ ಕೊಟ್ಟು ಸನ್ಯಾಸ ಮಾಡಿಸಿ ಅದ್ವೈತಿಗಳಾದ ಅನಂತೇಶ್ವರ ಚಂದ್ರಮೌಳೀಶ್ವರ ದೇವರ ದೇವಾಲಯಗಳ ಅರ್ಚಕರನ್ನು ಇವರ ಗುರು ಶಂಕರಾಚಾರ್ಯರನ್ನು ವಾದಮಾಡಿ ಕೆಡಿಸಬೇಕೆಂಬ ಧೃಡ ಸಂಕಲ್ಪದಿಂದ ಕುಂಜಿತ್ತಾಯರೂ, ಮಧ್ವಾಚಾರ್ಯರೂ ಒಂದಾಗಿ ಸೇರಿ ಮಾಡಿದ ವ್ಯಾಪಾರವೆಂದರೆ ತಪ್ಪಾಗುವುದೇ ? ಯೋಚಿಸಿರಿ!"

ಇವರ ಈ ಮಾತಿನಿಂದ ಸಾರ್ವಜನಿಕರಿಗೆ ಸಂಬಂಧಪಟ್ಟ ಶ್ರೀ ವೇಣುಗೋಪಾಲನ ವಿಗ್ರಹವು ಕಡೆಗೋಲು ಕೃಷ್ಣನ ಹಿಂದೆ ಅಡಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅನಂತೇಶ್ವರ ದೇವಾಲಯಗಳು ಅದ್ವೈತಿಗಳಾದ ಶ್ರೀ ಶಂಕರಾಚಾರ್ಯರ ಶಿಷ್ಯರದೆಂದು ವ್ಯಕ್ತವಾಗುತ್ತದೆ. ಮೇಲೆ ಹೇಳಿದ ಎರಡು ಶಿವಾಲಯಗಳು ಸ್ಥಾನಿಕ ಶಿವಬ್ರಾಹ್ಮಣರದ್ದೆಂದು ಡಾಕ್ಟರ್ ಬಿ.ಎ. ಸಾಲೆತ್ತೂರು [Director of Archives]ರವರು ಬರೆದ [The Journal of the Bombay University Volume VII Part I, page 1-65] ಇದರಿಂದಲೂ, ಮತ್ತು ಶ್ರೀ ಯಸ್. ಯು. ಪಣಿಯಾಡಿಯವರ ತಾ. 11—1—1934ರಲ್ಲು "ನವಯುಗ" ಪರ್ಯಾಯ ಸಂಚಿಕೆಯ 2-4ನೇ ಪುಟದಲ್ಲಿ ಪ್ರಕಟಿಸಿದ ಲೇಖನದಲ್ಲೂ ಸ್ಪಷ್ಟವಾಗುತ್ತದೆ.

ಈ ಬಲ್ಲಾಳರು ತಾನು ಮಾಧ್ವಮತದವನಾದರೂ ಮಾಧ್ವಮತದ ತಪ್ಪನ್ನು ಕಂಡುಹಿಡಿದುದು ಮಾತ್ರವಲ್ಲದೆ ಮಾಧ್ವಸ್ವಾಮಿಗಳ ಕೃತಕ ಸನ್ಯಾಸದ ವಿಚಾರವನ್ನೂ ತಿಳಿಸಿದ್ದಾರೆ. ಆದಮಾರು ಮಠದ ಯತಿಗಳೊಬ್ಬರು ತಿರುಪತಿಗೆ ಹತ್ತಿರ ಇರುವ ಮಂಗಪುರವೆಂಬ ಛತ್ರದಲ್ಲಿ ಕಾಲವಾದ ಸಮಯದಲ್ಲಿ ಶ್ರೀ ಸ್ವಾಮಿಯ ಶವದ ಹತ್ತಿರ ಚಿಕ್ಕ ಉಪನಯನವಾಗದ ಒಬ್ಬ ಬಾಲಕನಿಗೆ ಕಾವಿಬಟ್ಟೆಯಿಂದ ಅಲಂಕರಿಸಿ ಕುಳ್ಳಿರಿಸಿ, ಸ್ವಾಮಿಯ ಪಕ್ಕದಲ್ಲಿ ಶಿಷ್ಯಸ್ವಾಮಿಯು ಇರುವನೆಂತ ಕಾಣಿಸುವ ಕೃತಕ ಫೋಟೋ

ತಯಾರಿಸಿ ಮೃತ ಸ್ವಾಮಿಯ ಶಿಷ್ಯನಂತೆ ಸೃಷ್ಟಿಸಿ, ತೀರ ಅಬದ್ಧವಾದ ಕೃತಕ ಸಂನ್ಯಾಸ ಏರ್ಪಡಿಸಿದರು ಎಂಬ ವಿಚಾರವನ್ನು ಪ್ರಕಟಿಸಿದ್ದು ಅಲ್ಲದೆ ಅದರ ಫೋಟೋವನ್ನು ಕೂಡಾ ಬಲ್ಲಾಳರು ಪ್ರಕಟಿಸಿದ "ನಿಶ್ಚಯ ಜ್ಞಾನ" ವೆಂಬ ಎರಡನೇ ಪುಸ್ತಕದಲ್ಲಿ ಮುದ್ರಿಸಲ್ಪಟ್ಟಿರುತ್ತದೆ. ಅವರ 'ನಿಶ್ಚಯಜ್ಞಾನ' ಎಂಬ ಪುಸ್ತಕಕ್ಕೆ ಅಧ್ವೈತವೇ ಪಾರಮಾರ್ಥಿಕ ಜ್ಞಾನವೆಂದು ಶ್ರುತ ಪಡಿಸಲು ಆ ಹೆಸರನ್ನು ಇರಿಸಿದ್ದಾಗಿದೆ. ಅವರು ಪ್ರಕಟಿಸಿದ ಎರಡು ಪುಸ್ತಕಗಳು ಉಡುಪಿ ಮಾಧ್ವ ಮಠದವರ ಅಸತ್ಯತೆಯನ್ನು ಹೊರಹಾಕಿ ಅವರು ಉಡುಪಿಯಲ್ಲಿ ನಡೆಸಿದ ಅನ್ಯಾಯವನ್ನು ಶೃತಪಡಿಸಿಕೊಟ್ಟಿವೆ. ಈ ಎರಡು ಪುಸ್ತಕಗಳನ್ನು ಈ ಮಠಗಳ ಸ್ವಾಮಿಗಳ ಮಧ್ಯದಲ್ಲಿ ಧೈರ್ಯದಿಂದ ಇವರು ಪ್ರಕಟಿಸಿದ್ದು ಬಹಳ ಶ್ಲಾಘನೀಯವಾಗಿದೆ.

ಈ ಬಲ್ಲಾಳರ ಕುಲವು ಪಕ್ಷನಾಥರೆಂದು ಹೇಳಲ್ಪಡುವ ಎರಡು ಬೀಡಿನವರ ಪೈಕಿ ಪೂರ್ವಾಲಯವೆಂಬ ಚಿಟ್ಟುಪಾಡಿ ಬಲ್ಲಾಳರ ಬುಡದ ವರೆಂದು ತಿಳಿದು ಬರುತ್ತದೆ. ಪಕ್ಷನಾಥರೆಂಬ ಹೆಸರಿನಿಂದ ಮೊದಲು ಇವರ ಪೂರ್ವಿಕರು ಜೈನರಾಗಿದ್ದಿರಬೇಕೆಂಬುದು ತಿಳಿಯಬಹುದಾಗಿದೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಕ್ಷೇತ್ರವಾದ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ದೇವಸ್ಥಾನದ ಒಳಪೌಳಿಯ ಆಗ್ನೇಯ ಮೂಲೆಯನ್ನು ಮತ್ತು ಹೊರ ಅಂಗಣದ ಮೂಡು ಆಗ್ನೇಯ ಮೂಲೆಯನ್ನು ಅಲ್ಲಿಯ ಮಾಧ್ವಮಠದ ಯತಿಗಳು ಮಧ್ವಾಚಾರ್ಯರ ತಮ್ಮ ವಿಷ್ಣುತೀರ್ಥರ ಶಿಷ್ಯರೆಂದು ಹೇಳಿಕೊಂಡು ದೇವಳವು ಅವರ ಆಡಳ್ತೆಯಲ್ಲಿ ರುವ ಕಾಲದಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರನ ಬಲಪಾರ್ಶ್ವದಲ್ಲಿದ್ದ ಗುಡಿಯಿಂದ ಶ್ರೀ ಸಿದ್ಧಿವಿನಾಯಕ ವಿಗ್ರಹವನ್ನು ತಪ್ಪಿಸಿ ಅದನ್ನು ಇತರರಿಗೆ ತಿಳಿಯದಂತೆ ಅವರ ಮಾಧ್ವಮತದವರೇ ಆದ ದೇವಳದ ಅರ್ಚಕರನ್ನು ಒಳಕ್ಕೆ ಮಾಡಿ ಕೊಂಡು ಶ್ರೀ ಸುಬ್ರಹ್ಮಣ್ಯ ದೇವರ ಗರ್ಭಗೃಹದ ಮ ಮೂಲಸ್ಥಾನದ ಎಡ ಬದಿಯಲ್ಲಿ ಇರಿಸಿ ಶ್ರೀ ಸಿದ್ಧಿ ವಿನಾಯಕನಿದ್ದ ಗುಡಿಯಲ್ಲಿ ಅವರ ಮಠದ ಲ್ಲಿದ್ದ ಸಂಪುಟ ನರಸಿಂಹ ದೇವರನ್ನು ಇರಿಸಿ ಆಗಿನ ಅಲ್ಲಿಯ ಮೂಲ ಹಕ್ಕುದಾರರಾದ ಸ್ಥಾನಿಕ ಶಿವಬ್ರಾಹ್ಮಣರಾದ ಹೆಬ್ಬಾರರನ್ನು ಅಲ್ಲಿಂದ ಓಡಿಸಿ ದೇವಳದ ಆಗ್ನೇಯ ಮೂಲೆಯನ್ನೇ ತಮ್ಮದನ್ನಾಗಿ ಮಾಡಿಕೊಂಡು ಶ್ರೀ ಸುಬ್ರಹ್ಮಣ್ಯೇಶ್ವರನಿಗೂ ದೇವಳದ ಆಡಳ್ತೆದಾರರಿಗೂ ಹಿಂಸಿಸುತ್ತಿರುವ

ಸಾಮರಸ್ಯನೇ ಉಡುಪಿಯಲ್ಲೂ ಅಲ್ಲಿಯ ಮಾಧ್ವಸ್ವಾಮಿಗಳು 8 ಮಠಗಳನ್ನು ಕಟ್ಟಿಕೊಂಡು ಅನಂತೇಶ್ವರ ದೇವಸ್ಥಾನದ ಗರ್ಭಗೃಹದ ಆಗ್ನೇಯ ಮೂಲೆಯನ್ನು ಮಧ್ವಾಚಾರ್ಯರು ಪಾಠ ಹೇಳಿ ತಪಸ್ಸು ಮಾಡಿಕೊಂಡಿದ್ದ ಸ್ಥಳವೆಂದು ಆಕ್ರಮಿಸಿದ್ದು ಅಲ್ಲದೆ ಈ ಈಶಾನ್ಯಮೂಲೆಯ ಗುಡಿಯಲ್ಲಿದ್ದ ಸಾರ್ವಜನಿಕರ ಶ್ರೀ ವೇಣುಗೋಪಾಲ ಕೃಷ್ಣನ ವಿಗ್ರಹವನ್ನು ಅಡಗಿಸಿ ತಮ್ಮದೇ ಆದ ಕಡೆಗೋಲುಕೃಷ್ಣ ಎಂಬ ವಿಗ್ರಹವನ್ನು ಪಡುಮುಖವಾಗಿರಿಸಿ ಅದರ ಹತ್ತಿರವೆ ಇದ್ದ ಇನ್ನೊಂದು ಗುಡಿಯಿಂದ ಸುಬ್ರಹ್ಮಣ್ಯ ದೇವರನ್ನು ತಪ್ಪಿಸಿ ಒಂದು ಬದಿಯಲ್ಲಿರಿಸಿ ಅನಂತೇಶ್ವರ ಚಂದ್ರಮೌಳೀಶ್ವರ ದೇವರ ಕೆರೆಯನ್ನು ತಮ್ಮ ಕೃಷ್ಣನಿಗೆ ಸಂಬಂಧಪಟ್ಟ "ಮಧ್ವಸರೋವರ"ವೆಂದು ಅಡ್ಡಗೋಡೆ ಹಾಕಿಸಿಕೊಂಡು ಜನರನ್ನು ಬೆರಗುಗೊಳಿಸುವ ಕ್ರಮವನ್ನು ನೋಡುವಾಗ್ಯೆ ಈ ಎರಡು ಕ್ಷೇತ್ರಗಳ ಸಾಮರಸ್ಯವು ಒಂದೇ ರೀತಿಯಾಗಿ ತೋರುತ್ತದೆ.

ಆದರೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಅಲ್ಲಿಯ ಮಾಧ್ವಯತಿಗಳು ಮಾಡಿದ ಅನ್ಯಾಯವು ಈಗ ಬಹಿರಂಗವಾಗಿ ಅವರು ಅಡಗಿಸಿಟ್ಟು ವಿನಾಯಕ ದೇವರ ವಿಗ್ರಹದ ಅಸ್ತಿತ್ವವು ಈಗ ಜನತೆಗೆ ಗೊತ್ತಾಗಿದೆ. ಈ ವಿಷಯದಲ್ಲಿ ದೇವಸ್ಥಾನಕ್ಕೂ ಮಠಕ್ಕೂ ಈಗ ಕೆಲವು ವರುಷಗಳಿಂದ O. S. No. 5/1961 ವ್ಯಾಜ್ಯ ಉಂಟಾಗಿ, ಈಗ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲಿನಲ್ಲಿ ಇದೆ. ಈ ಅಡಗಿಸಿರುವ ಸಿದ್ಧಿವಿನಾಯಕನಿಗೆ ಸಂಬಂಧಪಟ್ಟ ಈಗ ಸಾಧಾರಣ 40-50 ಸಾವಿರ ರೂಪಾಯಿ ಕ್ರಯ ಬಾಳುವ ಚಿನ್ನದ ಕವಚ, ಬೆಳ್ಳಿಯ ಪಾಣಿಪೀಠ, ಚಿನ್ನದ ಕೊಂಡಿ ಸರಗಳು ಈಗಲೂ ದೇವಸ್ಥಾನದ ಟ್ರೆಜರಿಯಲ್ಲಿ ಉಪಯೋಗವಿಲ್ಲದೆ ಇರಿಸಿದ್ದನ್ನು ಕಾಣಬಹುದು. ಇದೇ ರೀತಿ ಉಡುಪಿಯ ಜನತೆಯು ಶ್ರೀ ವೇಣುಗೋಪಾಲ ಕೃಷ್ಣನ ಮೂರ್ತಿಯ ಅಸ್ತಿತ್ವವನ್ನು ಕಂಡುಹಿಡಿದು ಉಡುಪಿಯಲ್ಲಿ ಮಾಧ್ವಯತಿಗಳು ಮಾಡಿದ ಹಾವಳಿಯ ವಿಚಾರವನ್ನು ಬಯಲಿಗೆ ಎಳೆದು ವೇಣುಗೋಪಾಲಕೃಷ್ಣನು ಸರ್ವರಿಗೂ ದರ್ಶನ ನೀಡುವಂತೆಯೂ ಆ ಮೂರ್ತಿಗೆ ಸರಿಯಾದ ಪೂಜೆ ನಡೆಯುವಂತೆಯೂ, ಶ್ರೀ ಅನಂತೇಶ್ವರ ಮತ್ತು ಚಂದ್ರಮೌಳೀಶ್ವರರಿಗೆ ಶೈವಾಗಮೋಕ್ತಪೂಜೆಯು ಆಗುವಂತೆಯೂ ಪ್ರಯತ್ನಿಸಿದರೆ ಸತ್ಯವನ್ನು ಎತ್ತಿ ಹಿಡಿದು ಅಸತ್ಯವನ್ನು ಹೊರಹಾಕಿ ಲೋಕಕಲ್ಯಾಣ ಮಾಡಿದಂತಾಗುವುದು;

4) ಉಡುಪಿ ಶ್ರೀಕೃಷ್ಣಮಠದ ವಿಚಾರದಲ್ಲಿ ದೇವಸ್ಥಾನಗಳಿಗೆ ಹರಿಜನರ ಪ್ರವೇಶದ ಆಕ್ಟ್ ಪ್ರಕಾರ (Madras temple entry Act V of 1947) ಇಲ್ಲಿಯು ಮಾಧ್ವರ ಶ್ರೀ ಕೃಷ್ಣಮಠವು ಮಠವಲ್ಲ ಸಾರ್ವಜನಿಕ "ದೇವಸ್ಥಾನ" ಎಂದು ಸುಪ್ರೀಂ ಕೋರ್ಟಿನಲ್ಲಿ ಆದ ತೀರ್ಪನ್ನು ಕಳೆದ 1966 ದಶಂಬರದಲ್ಲಿ (A.I.R. 1966 Supreme Court 1882 (V53-381) from Madras A.I.R. 1956 Mad. 451)ನ All India Reporterನಲ್ಲಿ ಪ್ರಕಟಿಸಿರುತ್ತಾರೆ. ಅದರಲ್ಲಿ ಸೋದೆ ಮಠದ ವಿಶ್ವೋತ್ತಮತೀರ್ಥಸ್ವಾಮಿಯವರು ಸರಕಾರದ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ ಮಾಡಿದ ಅಪೀಲು, ಖರ್ಚು ಸಮೇತ ಕೊಡುವಂತೆ ಡಿಸ್ ಮಿಸ್ ಆಗಿದೆ.

ಜಜ್‌ಮೆಂಟಿನ 13ನೇ ಪಾರಾದಲ್ಲಿ ಹೀಗಿದೆ:—

This received corroberation in two ways. In the end of Madhwa Vijaya it is stated that while expounding Aithareya Upanishath to his shishyas in the temple of Anantheshwar the Acharya is stated to have disappeared from mundane-existence. Infact even to day the seat which is said to have been used by the Madhwa Acharya is shown to the piligrims. Secondly that the Anantheshwara Temple was the seat of teaching by Madhwacharya receives corroboration and **therefore seperate Krishna Mutt could not have existed** is seen from importance attaching to the Anantheshwara even to-day. Anantheswara is considered to be holder of the Muli right and Shri Krishna is treated as his tenant.

ಇದರಲ್ಲಿ ತಿಳಿಸುವುದೇನೆಂದರೆ! ಅನಂತೇಶ್ವರ ದೇವಸ್ಥಾನದ ಒಂದು ಮೂಲೆಯಲ್ಲಿ ಕುಳಿತು ಮಧ್ವಾಚಾರ್ಯರು ಅವರ ಶಿಷ್ಯರಿಗೆ ಐತರೇಯ

ಉಪನಿಷತ್ ಪಾಠ ಹೇಳುತ್ತಿರುವಾಗ ಶರೀರ ಸಮೇತ ಅದೃಶ್ಯರಾದರೆಂದು ಮಧ್ವವಿಜಯದಲ್ಲಿ ಹೇಳಲ್ಪಟ್ಟ ಪ್ರಕಾರ ಈಗಲೂ ಅವರು ಕುಳಿತ ಸ್ಥಳವನ್ನು ಯಾತ್ರಿಕರಿಗೆ ತೋರಿಸುತ್ತಿರುವುದಾಗಿದೆ. ಈ ಕಾರಣದಿಂದಲೂ ಎರಡನೆಯದಾಗಿ ಅನಂತೇಶ್ವರ ದೇವಸ್ಥಾನದಲ್ಲಿಯೇ ಅವರು ಕುಳಿತ ಸ್ಥಾನ ಇರುವುದರಿಂದ ಪ್ರತ್ಯೇಕ ಕೃಷ್ಣಮಠವು ಮಧ್ವಾಚಾರ್ಯರ ಕಾಲದಲ್ಲಿ ಅಲ್ಲಿ ಇರಲಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಇದರಿಂದಾಗಿ ಕೃಷ್ಣಮಠದಿಂದ ಅನಂತೇಶ್ವರ ದೇವಸ್ಥಾನಕ್ಕೆ ಹೆಚ್ಚಿನ ಪ್ರಶಸ್ತಿ ಕೊಡಲ್ಪಟ್ಟಿದೆ. ಅದೂ ಅಲ್ಲದೆ ಅನಂತೇಶ್ವರನಿಗೆ ಮಾಧ್ವರ ಕೃಷ್ಣಮಠದ ಮೂಲೀ ಹಕ್ಕು ಇರುವುದು, ಇದರಿಂದಾಗಿ ಶ್ರೀ ಕೃಷ್ಣನು ಅನಂತೇಶ್ವರನ ಗೇಣೀ ಒಕ್ಕಲು ಆಗಿರುವುದರಿಂದಲೂ ಅನಂತೇಶ್ವರ ಮತ್ತು ಶ್ರೀ ಕೃಷ್ಣನಿಗೆ ಧನಿ ಒಕ್ಕಲು ಭಾವ ಬಂದಂತಾಗಿದೆ. ಈ ಎಲ್ಲಾ ಕಾರಣದಿಂದ ಮೇಲೆ ಹೇಳಿದ ಶ್ರೀ ಕೃಷ್ಣಮಠವು ಮಧ್ವಾಚಾರ್ಯರ ಕಾಲದಲ್ಲಿ ಸಾರ್ವಜನಿಕ ದೇವಸ್ಥಾನವಾಗಿತ್ತೆಂದು, ತಿಳಿಯಬೇಕಾಗುತ್ತದೆ. ಆಗ ಆ ದೇವಸ್ಥಾನದಲ್ಲಿ ಈಗ ಒಳಗೆ ಅಡಗಿರುವ ಶ್ರೀ ವೇಣುಗೋಪಾಲ ಮೂರ್ತಿಯು ಮೂಡುಮುಖವಾಗಿ ಇದ್ದು ಪೂಜೆ ನಡೆಯುತ್ತಿತ್ತೆಂದು ನಿಶ್ಚಯಿಸಬೇಕಾಗುತ್ತದೆ.

ಪಾರಾ 23 ಅಂತ್ಯ ಮತ್ತು 24ರಲ್ಲಿ ಹೀಗಿದೆ:—

The finding that the Hindu Public had right to worship in this temple is sufficient to make the institution "a temple" with in the defination of the form in the Act (Madras Act V of 1947) even if the temple be appartment to a Mutt. The Board orders therefore cannot affect the consideration of the question of this institution being the temple with in the defination in the Act.

We therefore of openion the courts below have come to the correct conclusion that the institution in the suit is a temple with in the meaning of theword "Temple" in the Act, and

that the appeal should fail. We accordingly dismiss the appeal with costs.

ಇದರಲ್ಲಿ ತೀರ್ಪು ಹೀಗಿದೆ:— ಶ್ರೀ ಕೃಷ್ಣಮಠವು ಸಾರ್ವಜನಿಕರಿಂದ ಪೂಜಿಸಲ್ಪಡುವ ದೇವಸ್ಥಾನ, ಇದರಿಂದಾಗಿ, ಇದು ಮದ್ರಾಸ್ ಆಕ್ಟ್ V of 1947ರಲ್ಲಿ ಹೇಳಿದ ಪ್ರಕಾರ "ದೇವಸ್ಥಾನ"ಎಂಬ ಪದದ ವಿವರಣೆಗೆ ಒಳಪಟ್ಟಿದ್ದಾಗಿದೆ. ಆದುದರಿಂದ ವ್ಯಾಜ್ಯದಲ್ಲಿರುವ ಈ ಸಂಸ್ಥೆಯು ಮಠವಲ್ಲ "ದೇವಸ್ಥಾನ" ಎಂದು ಪರಿಗಣಿಸಲ್ಪಡಬೇಕು. ಅಪೀಲಿನ ಖರ್ಚು ಕೂಡಾ ಕೊಡುವಂತಾಗಿ ಡಿಸ್ ಮಿಸ್ ಆಗಿರುತ್ತದೆ.

ಈ ಮೇಲಿನ ತೀರ್ಪಿನಿಂದಲೂ, ಅನಂತೇಶ್ವರ ದೇವಾಲಯವು ಪುರಾತನ ದೇವಾಲಯವೆಂತಲೂ, ಶ್ರೀ ಕೃಷ್ಣಮಠವು ಮಧ್ವಾಚಾರ್ಯರ ಕಾಲದಲ್ಲಿ ಸ್ಥಾಪಿಸಲ್ಪಡಲಿಲ್ಲವೆಂತಲೂ, ಇದರಿಂದಾಗಿ ಈ ಮಾಧ್ವಮಠವು ವಾದಿರಾಜರ ಕಾಲದಲ್ಲಿ ಪ ನಂತರ ಆದರ ಆಡಿಸ್ಥಳವನ್ನು ಗೇಣಿಗೆ ಪಡಕೊಂಡು ಕಟ್ಟಿಸಿರಬೇಕೆಂದು ತಿಳಿಯಬೇಕಾಗುತ್ತದೆ.

True copy of page xiv introduction of Vol.I of Thurston's Caste and tribes of South India.

There is a tradition that the Shivalli Brahmins of the Tulu country came from Ahikshetra. As only males migrated from their home they were compelled to take women from Non-Brahmin Castes as wives. The ranks are said to have swelled by conversions from these castes during the time of Sri Madhwacharya. The Shivalli Brahmins are said to be referred to by the Bunts as Mathumagalu or Mathumalu (bride) in allusion to the fact of their wives being taken from the Bunt Caste. Besides the Shivallis there are other Thulu Brahmins who are said to be recent

converts. The Matti Brahmins were formerly considered low by the Shivallis and were not allowed to sit in the same line with the Shivallis at meal time. They were only permitted to sit in a cross line seperated from the Shivallis though in the same room. This was, because the Matti Brahmins were suppossed to be Mogers (fishermen) raised to Brahminism by one Vadiraja Swami, a Sanyasi. Having become Brahmins they could not carry on their heridetary occupation and to enable them to earn a livelihood the Sanyasi gave them some brinjals seeds and advised them to cultivate the plant. From this fact, the variety of brinjals which is cultivated at Matti is called Vadiraja Gulla. At the present day the Matti Brahmins are on a par with the Shivalli Brahmins and have become desciples of the Sode Mutt. In some of the popular accounts of Brahmins which has been reduced to writing it is stated that during the time of Mayuravarma of the Kadamba Dynesty (according toBrahman chronology Mayuravarmareigned from 455 to 445 B.C. but his probable date was about 750 A. D. See Fleet, Dynestics of the Kanarese Districts of Bombay Presidency 1882-86) Some Andra Brahmins were brought into South Kanara. As a sufficient number of Brahmins were not available for the purpose of Yajnas (sacrifices)

these Andara Brahmins selected a number of families from the Non-Brahmins caste and made them Brahmins and chose exogamous sect names for them. Of these names Manoli, Perala, Kudire and Ane are examples—Exogamous—practice of marrying only outside of ones own tribe.

Stuart's South Kanara District Manual quoted at page 373 of Volume I of Thurston's caste and tribes.

According to Tulu Tradition after a quarrel with Brahmins who used to come to him periodically from Ahikshetra, Parasurama procured new Brahmins for the reclaimed tract by taking the nets of some fishermen and making a number of Brahmanical threads with which he invested the fishermen and then turned them into Brahmins.

South Kanara Manual page 160.—Bunts are divided into 20 balis which correspond with Brahmin gotras

1) Bagethinaya. 2) Bangarannaya.
3) Bermarannaya. 4) Bonnyannaya.
5) Hiribannaya. 6) Karamburannaya.
7) Karburannaya. 8) Killurabannaya.
9) Kochattabannaya 10) Kundadibannaya.
11) Kundalannaya. 12) Nilabannaya.
13) Panjilannaya. 14) Pergadannaya.

15) Pullytannaya. 16) Salabannaya.
17) Salannaya. 18) Talarabannaya.
19) Ulibannaya. 20) Upparannaya.

Castes and tribes of S.I. by E. Thurston Vol.

Catching fish in cloth on the 4th day of marriage is a custom among Gidigars. Page 306 Vol. I.

Holeyas—330 actually catch fish wlth a mat, kiss them and leave them. Vol. VI page 240. Shivalli Brahmins bride and bridegroom make a pretence of catching fish with the mat they were sitting for the 4 days after marriage.

Page—351 "Honne" among Halepaik (toddy drawers of Coondapoor) and Mogers. Vol. III page 268—Kayarathannaya, an exogamous sect of the Bunts and Shivalli Brahmins.

ಇದು 1909ನೇ ಇಸವಿಯಲ್ಲಿ ಥರ್ಸ್ಟನ್ ದೊರೆಯು ಬರೆದ ಕಾಸ್ಟ್ ಮತ್ತು ಟ್ರೈಬ್ (caste and tribes of South India) ಎಂಬ ಪುಸ್ತಕದ Volume 1-ರ ಪ್ರಸ್ತಾವನೆ (Introductory) ಪು. 14ರಲ್ಲಿ ಪ್ರಕಟಿಸಿದ ಇಂಗ್ಲಿಷ್ ಮೂಲದ ಕನ್ನಡ ಸಾರಾಂಶ.

ಇದರಲ್ಲಿ ತುಳು ದೇಶದ ಶಿವಳ್ಳಿಬ್ರಾಹ್ಮಣರೆಂಬವರು ಅಹಿಚ್ಛತ್ರದಿಂದ ಬಂದವರು. ಗಂಡಸರು ಮಾತ್ರ ಅಲ್ಲಿಂದ ಇಲ್ಲಿಗೆ ಬಂದುದರಿಂದ ಅವರಿಗೆ ಬ್ರಾಹ್ಮಣರಲ್ಲದ ಶೂದ್ರಜಾತಿಯವರ ಹುಡುಗಿಯರನ್ನು ಮದುವೆಮಾಡಿ ಕೊಳ್ಳುವ ಪ್ರಸಂಗ ಬಂತು. ಮಧ್ವಾಚಾರ್ಯರು ಅವರನ್ನು ಮತಾಂತರಿಸಿ ಕೊಂಡರು. ಶಿವಳ್ಳಿಬ್ರಾಹ್ಮಣರು ಬಂಟರ ಹುಡುಗಿಯರನ್ನು ಮದುವೆ ಮಾಡಿಕೊಂಡದ್ದರಿಂದ ಅವರಿಗೆ "ಮದುಮಗಳು" (ಮದಿಮಾಳ್) ಎಂದು

ಕರೆಯುವ ವಾಡಿಕೆ ಬಂತು. ಅಲ್ಲದೆ ಬೇರೆ ಕೆಲವು ಶಿವಳ್ಳಿಯವರು ಇತ್ತೀಚೆಗೆ ಮತಾಂತರಿಸಲ್ಪಟ್ಟವರೆಂದು ಹೇಳಲ್ಪಟ್ಟಿದೆ. ಮಟ್ಟುಬ್ರಾಹ್ಮಣರು ಮುಂಚೆ ಶಿವಳ್ಳಿಬ್ರಾಹ್ಮಣರಿಂದ ಕೆಳತರಗತಿಯವರೆಂದು ಅವರನ್ನು ಶಿವಳ್ಳಿಯವರು ತಮ್ಮ ಪಂಕ್ತಿಯಲ್ಲಿ ಕುಳ್ಳಿರಿಸುತ್ತಿರಲಿಲ್ಲ. ಅವರಿಗೆ ಪ್ರತ್ಯೇಕ ಅಡ್ಡಪಂಕ್ತಿ ಕೊಡುತ್ತಿದ್ದರು. ಯಾಕೆಂದರೆ ಮೊದಲು ಅವರು ಮೊಗವೀರರಾಗಿ ಇದ್ದುದರಿಂದ (ಮೀನು ಹಿಡಿಯುವವರು) ಕೊಡುತ್ತಿರಲಿಲ್ಲ. ಆ ಮೇಲೆ ಒಬ್ಬ ಯತಿ ವಾದಿರಾಜರೆಂಬವರಿಂದ ಶುದ್ಧೀಕರಿಸಿ ಬ್ರಾಹ್ಮಣರಾಗಿ ಮಾಡಲ್ಪಟ್ಟವರು. ಅವರು ಬ್ರಾಹ್ಮಣರಾಗಿ ಮಾಡಲ್ಪಟ್ಟವರಾದುದರಿಂದ ಅವರಿಗೆ ಅವರ ಹಿಂದಿನ ಮೀನು ಹಿಡಿಯುವ ಉದ್ಯೋಗವನ್ನು ಮಾಡಲು ಸಾಧ್ಯವಿಲ್ಲವಾದುದರಿಂದ ಆ ವಾದಿರಾಜ ಸ್ವಾಮಿಯು ಅವರಿಗೆ ಕೆಲವು ಗುಳ್ಳದ (ಬದನೇಕಾಯಿ) ಬೀಜಗಳನ್ನು ಕೊಟ್ಟು ಅದನ್ನು ಕೃಷಿ ಮಾಡುವಂತೆ ಮಾಡಿ ಆದರಿಂದ ಅವರ ಜೀವನ ನಡೆಸುವಂತೆ ಮಾಡಿದರು. ಇದರಿಂದಾಗಿ ಮಟ್ಟು ಗ್ರಾಮದಲ್ಲಿ ಬೆಳೆಯುವ ಬದನೆಕಾಯಿಗೆ ವಾದಿರಾಜಗುಳ್ಳವೆಂಬ ಹೆಸರು ಬಂದದ್ದಾಗಿದೆ. ಈ ಕಾರಣದಿಂದ ಆ ಮಟ್ಟುಬ್ರಾಹ್ಮಣರು ಸೋದೆಮಠದ ಶಿಷ್ಯರಾದರು. ಈಗ ಅವರು ಶಿವಳ್ಳಿಬ್ರಾಹ್ಮಣರೊಂದಿಗೆ ಸರಿಸಮಾನವಾಗಿದ್ದಾರೆ. ಇತ್ಯಾದಿ (ಬಾಕಿ ಇದರ ಇಂಗ್ಲಿಷ್ ಮೂಲ ನೋಡಿರಿ)

o o o o o o

ಸ್ಟೂವರ್ಟ್ ದೊರೆಯು ಬರೆದ ದಕ್ಷಿಣಕನ್ನಡ ಜಿಲ್ಲೆಯ ಮೇನುವೆಲ್‌ನಲ್ಲಿ ಪೇಜು 373 Volume I ಕಾಣಿಸಿ ಮೇಲಿನ ಪುಸ್ತಕದಲ್ಲಿ ಬರೆದದ್ದು.

ಆಗಾಗ ಹೊರಗಿನಿಂದ ಬರುತ್ತಿದ್ದ ಬ್ರಾಹ್ಮಣರಿಗೂ ತುಳುವರಿಗೂ ಜಗಳವಾಗುತ್ತಿದ್ದುದರಿಂದ ಪರಶುರಾಮನು ಮೀನು ಹಿಡಿಯುವವರ ಬಲೆಗಳನ್ನು ತೆಗೆದುಕೊಂಡು ಅವರ ನೂಲಿನಿಂದ ಜನಿವಾರಗಳನ್ನು ಮಾಡಿ ಅದನ್ನು ಮೊಗವೀರರಿಗೆ ಕೊಟ್ಟು ಅವರನು ಬ್ರಾಹ್ಮಣರನ್ನಾಗಿ ಮಾಡಿದ್ದನು.

ದಕ್ಷಿಣ ಕನ್ನಡದ ಮೇನುವೆಲ್ ಪುಟ 160.

ಬಂಟರ 20 ಬಳಿಗಳು ಈ ಬ್ರಾಹ್ಮಣರಿಗೆ ಗೋತ್ರವಾಗಿ ಪರಿಣಮಿಸಿದೆ:

1) ಬಗೆತ್ತಿನ್ನಾಯ. 2) ಬಂಗೆರಣ್ಣಾಯ. 3) ಬಿರ್ಮರನ್ನಾಯ. 4) ಬೊನ್ನಿಯನ್ನಾಯ. 5) ಸಿರಿಬನ್ನಾಯ. 6) ಕರಂಬರನ್ನಾಯ. 7) ಕರ್ಬರನ್ನಾಯ. 8) ಕಿಲುರಬನ್ನಾಯ. 9) ಕೊಚೆಟ್ಟಿಬನ್ನಾಯ. 10) ಕುಂಡೊಡಿಬನ್ನಾಯ. 11) ಕುಂಡಲನ್ನಾಯ. 12) ನೀಲಬನ್ನಾಯ. 13) ಪಾಂಗಿಯನ್ನಾಯ. 14) ಪೆರ್ಗಡೆಣ್ಣಾಯ. 15) ಪುತ್ತಿಟ್ಟನ್ನಾಯ. 16) ಸಲಬನ್ನಾಯ. 17) ಸಾಲನ್ನಾಯ. 18) ತಲಬರನ್ನಾಯ. 19) ಉಳಿಬನ್ನಾಯ. 20) ಉಪ್ಪರನ್ನಾಯ.

Caste and Tribes of S. I. by E. Thurstōn Vol. 1.

ಮದುವೆಯ ನಾಲ್ಕನೇ ದಿವಸ ಮೀನು ಹಿಡಿಯುವ ಪದ್ಧತಿ ಈಗಲೂ ಗಿಡಿಗಾರರಲ್ಲಿದೆ—ಪುಟ 306 Vol. 1.

ಹೊಲೆಯರು: ಪುಟ 330 ಇವರು ಚಾಪೆಯಲ್ಲಿ ಕುಳಿತು ಮೀನು ಹಿಡಿದು ಅವನ್ನು ಮೂಸಿ ಬಿಡುವ ಪದ್ಧತಿ. ಪುಟ 240 ಶಿವಳ್ಳಿಬ್ರಾಹ್ಮಣರ ಮದುಮಗ ಮತ್ತು ಮದುಮಗಳು ಅವರ ಮದುವೆ ಸಮಯ 4 ದಿವಸ ಕೂತುಕೊಂಡಿದ್ದ ಚಾಪೆ ಮದುವೆ ದಿವಸ ಮೀನು ಹಿಡಿಯುವ ಕ್ರಮವನ್ನು ಮಾಡುವ ವಾಡಿಕೆ ಇದೆ. ಪುಟ 351ರಲ್ಲಿ "ಹೊನ್ನೆ" ಎಂಬ ಹಳೆ ಪೈಕದವರು (ಕುಂದಾಪುರದ ಕಳ್ಳು ತೆಗೆಯುವವರು) ಮುಗೇರರು Vol. III 268ನೇ ಪುಟವಲ್ಲಿ ಬಂಟರಿಂದ ಬಂದ ಕಾಯರ್ತನ್ನಯ ಕುಲವು ಶಿವಳ್ಳಿ ಬ್ರಾಹ್ಮಣರದ್ದಾಗಿದೆ.

Extract from the Book titled

'The Sthanikas and their Historical Importance' by Dr. B. A. Saletore, M.A., Ph.D. (Lond), D.Phil. (Giessen), Director, National Archives of India, New Delhi.

(Reprinted from the Journal of the Bombay

University, Volume VII, Part I, Pages 1 to 65)

Pages 63 to 65—Extract.

The truth seems to be that the sthanikas, at least so far as South Kanara is concerned, were indeed, forciadly dispossessed of their rights and even of their temples by their religious rivals, who were mostly the followers of the great Madhva. From my personal investigations in Tuluva conducted in the Udipi Taluks between the years 1922 and 1925, I am able to give the following details which indicate the priority of the claims of the Sthanikas over those of Vaisnavites, in the matter of the control over temples. That a change in the possession of temples did not take place peacefully but was characterized by force is evident when we notice one singular point concerning the images in temples. Most of the images of the temples which once belonged to the Sthanikas are now either mutilated or thrown near the precints of temples which have passed into the custody of the Vaisnavites. (This could never have been the work of Muhammadans, since the South Kanara District never suffered from the depradations of the followers of Islam, not even during the reign point. In Malpe, which has the other name of Krodasrama, the original image of Mallikarjuna has been thrown into the tank near the temple, and the image of

Sankatanarayana now is seen in the same temple. The famous Anantesvara Temple of Udipi proper was another stronghold of the Sthanikas. I have elsewhere shown that there is much proof to maintain that 'the Anantesvara Temple was originally a Saivite strong hold (Ancient Karnataka, Volume I, p. 449, n. 2). The Anantesvara Temple, we may note by the way, bears strong resemblance to the famous Somalinga Temple at Nitturu, also in the Udipi taluka. And the Nitturu Somalinga temple itself is another example of forcible dispossession. For the Somalingesvara image of the Nitturu has been thrown out, and an image of Venkatramana installed in its place. In Udayavara, the ancient capital of Alupas the image of Mahadeva was thrown out in order to give room to the image of Ganapathi. And this latter god has replaced Isvara also at Uppuru in the same Udipi taluka. I here abstain from citing the example of least twenty mathas in the neighbourhood of the town of Udipi, which were originally owned by the Sthanikas but which have now passed into the hands of the Vaisnavites In addition to the above examples of temples which had originally belonged to the Sthanikas. we may give a few more centres of theirs which have now become the property of the Vaisnavites, These are the Trisulesvara and Sarabhesvara

temples at Mangalore, the Somesvara temples at Ullala, the famous Subrahmanya temple at Subrahmanya, and the temple at Kabbinare at Hebri.

The enemity between the Sthanikas and the Madhvas seems to have come to a head, according to tradition that is available at Udipi in the time of famous guru Vadiraja (A. D. 1614). It centred round the question of building the famous Krishna mata and the tank near it. The land on which the Krishna mata stands and on which the tank was constructed, belonged to the Sthanikas. Indeed, the Sthanikas claim that the land on which the eight mathas of Udipi were built, formed the property of the Sthanikas whose most powerful spoksmen then were the Nitturu people. It is interesting to note in this connection that in this quarrel between the Madhvas led by the redoubtable Vadiraja on the one hand, and the Nitturu people on the other, the *Pancamas* (or the 'Harijans,' as we now would call them) took the side of the Nitturu people against the orthodox sections. And when the Vaisnavites who had installed the Venkataramana image in the place of Somalingesvara at Nitturu, jeered at the latter deity thus in Tulu—*Nitturu Somalinga bona Tankara, tanjana Tankara*, the *Pancamas* etorted with an equally poignant line in Tulur

thus—*Cittupadi Ballalera bente koryero Nidamburu Ballalera didambu gudyero,* obviously against the Cittupadi and Nidambur Ballalas who had espoused the cause of the Madhvaguru. The success of Vaisnavites, who were numerically superior, over the Nitturu people was complete. These latter had now really no chance against the former, for these were the days of the supremacy of the Vaisnavites all over southern India and Karnataka. Indeed the Emperors of Vijayanagara themselves were now Vaisnavites by persuastion. And there was no one who could espouse the cause of the Nitturu people. If this tradition of the great quarrel between the Nitturu people and the Madhvas, which is current in Tuluva, is substantiated by other evidence, the downfall of the Sthanikas in Tuluva could be dated to the first quarter of the seventeenth century A. D., when Vadiraja's powerful influence undoubtedly reigned supreme in Tuluva.

That the Vaisnavites in Tuluva now own temples which were the property of the Sthanikas there can be no doubt. Nor should we be surprised at it. Some of the temples which were for a long time under the Saivite, seem to have been once Buddhist places of worship, as I have shown elsewhere (Ancient Karnataka 1. pp. 379, n. 1, 384) I have also shown in another work of

mine that many of the temples which are in the possession of the Hindus were once Jaina holy places (Read my Mediæval Jainism Chs. II, III and V) B. A. S.

ಇದು ಡಾಕ್ಟರ್ ಬಿ. ಎ. ಸಾಲೆತ್ತೂರು M.A., Phd. London. ಡೈರೆಕ್ಟರ್ ನೇಶನಲ್ ಆರ್ಚಯಿವ್ಸ್, ಇಂಡಿಯ ಸರಕಾರ, ಇವರಿಂದ ಪರಿಶೋಧಿಸಿ ಬರೆಯಲ್ಪಟ್ಟ "ಸ್ಥಾನಿಕರು ಮತ್ತು ಅವರ ಚಾರಿತ್ರಿಕ ಪ್ರಾಧಾನ್ಯತೆ" ಎಂಬ ಅವರು ಬರೆದ ಜರ್ನಲ್ ಒಫ್ ಬೊಂಬ್ಯಾ ಯುನಿವರ್ಸಿಟಿಯು ಪ್ರಕಟಿಸಿದ Vol. VII, ಪಾರ್ಟ I. ಪುಟ 1 ರಿಂದ 65ರ ವರೇಗಿನ ಪುಸ್ತಕದಿಂದ 64-65ನೇ ಪುಟದಲ್ಲಿ ಇಂಗ್ಲೀಷ್‌ನಲ್ಲಿ ಪ್ರಕಟವಾದ ವಿಷಯಗಳ ಕನ್ನಡ ಸಾರಾಂಶ.

ಕನ್ನಡ ಜಿಲ್ಲೆಯ ದೇವಸ್ಥಾನಗಳ ವಿಚಾರದಲ್ಲಿ

ಕನ್ನಡ ಜಿಲ್ಲೆಯ ದೇವಸ್ಥಾನಗಳ ಸತ್ಯತೆಯು ಹೀಗಿದೆ:— ಈ ದಕ್ಷಿಣ ಕನ್ನಡ ಜಿಲ್ಲೆಯ ದೇವಸ್ಥಾನಗಳ ಅಧಿಕಾರಿಗಳಾದ ಸ್ಥಾನಿಕರನ್ನು ಅವರ ಹಕ್ಕಿನದಾದ ದೇವಸ್ಥಾನಗಳ ಹಕ್ಕನ್ನೂ ದೇವಸ್ಥಾನಗಳನ್ನೂ ಅವರ ಪ್ರತಿಸ್ಪರ್ಧಿ ಮತದವರಾದ ಮಾಧ್ವರು ಬಲಾತ್ಕಾರದಿಂದ ತಮ್ಮ ಸ್ವಾಧೀನಪಡಿಸಿಕೊಂಡದ್ದಾಗಿ ನಾನು 1922-25ರಲ್ಲಿ ಉಡುಪಿ ವಗೈರೆ ಸ್ಥಳಗಳನ್ನು ಸಂದರ್ಶಿಸಿ ಶೋಧನೆ ಮಾಡಿದ್ದಲ್ಲಿ ತಿಳಿದುಬಂದಿದೆ. ನಾನು ಈ ದೇವಸ್ಥಾನಗಳಲ್ಲಿ ಸ್ಥಾನಿಕರಿಗೆ ಇರುವ ಹಕ್ಕಿನ ವಿಚಾರದಲ್ಲಿ ಸ್ಥಾನಿಕರಿಗೂ ವೈಷ್ಣವರಾದ ಮಾಧ್ವರಿಗೂ ಆದ ಜಗಳಗಳನ್ನು ಈ ರೀತಿ ವಿವರಿಸಿಕೊಟ್ಟಿರುತ್ತೇನೆ. ಮಾಧ್ವರಿಂದ ದೇವಸ್ಥಾನಗಳ ಹಕ್ಕಿನ ಸ್ವಾಧೀನವು ಶಾಂತಿಯಿಂದ ನಡೆಯಲಿಲ್ಲ. ಬಲಾತ್ಕಾರದಿಂದಲೇ ಸ್ಥಾನಿಕರಿಂದ ದೇವಸ್ಥಾನಗಳ ಹಕ್ಕನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದನ್ನು ಕೆಲವು ದೇವಸ್ಥಾನಗಳಲ್ಲಿ ಇರುವ ವಿಗ್ರಹಗಳ ಪರಿಸ್ಥಿತಿಯೊಂದನ್ನು ನೋಡಿದರೆ ತಿಳಿಯಬಹುದು. ಸ್ಥಾನಿಕರ ಸ್ವಾಧೀನವಿದ್ದ ಹೆಚ್ಚಿನ ವಿಗ್ರಹಗಳು ವೈಷ್ಣವರ ಸ್ವಾಧೀನ ಬಂದನಂತರ ಹಾಳುಗೆಡವಲ್ಪಟ್ಟು, ದೇವಸ್ಥಾನಗಳ ಹತ್ತಿರ ಎಸೆಯಲ್ಪಟ್ಟದ್ದು ಕಾಣಲು ಸಿಕ್ಕುತ್ತವೆ.

(ಈ ಅನ್ಯಾಯಗಳು ಮುಸ್ಲಿಮರಿಂದ ಆಗಲು ಸಾಧ್ಯವಿಲ್ಲ. ಯಾಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಸ್ಲಿಮರ ಆಕ್ರಮಣ ನಡೆದಿಲ್ಲ. ಅಥವಾ ಟಿಪ್ಪುಸುಲ್ತಾನನ ಕಾಲದಲ್ಲೂ ನಡೆದದ್ದೇ ಇಲ್ಲ). ಇದನ್ನು ಧೃಢೀಕರಿಸಲು ಈ ಕೆಲವು ದೃಷ್ಟಾಂತಗಳೇ ಸಾಕು. ಕ್ರೋಢಾಶ್ರಮವೆಂದು ಹೇಳಲ್ಪಡುವ ಮಲ್ಪೆಯಲ್ಲಿ ಅಲ್ಲಿಯ ಮಲ್ಲಿಕಾರ್ಜುನ ಮೂಲವಿಗ್ರಹವು ದೇವಸ್ಥಾನದ ಹತ್ತಿರದ ಕೆರೆಗೆ ಎಸೆಯಲ್ಪಟ್ಟಿದೆ. ಈಗ ಶಂಕರನಾರಾಯಣ ವಿಗ್ರಹವು ದೇವಸ್ಥಾನದಲ್ಲಿ ಕಾಣಲ್ಪಡುತ್ತದೆ. ಪ್ರಧಾನವಾದ ಉಡುಪಿ ಅನಂತೇಶ್ವರ ದೇವಸ್ಥಾನವು ಆದಿಯಲ್ಲಿ ಶೈವರ ಪ್ರಧಾನ ಸ್ಥಳವಾಗಿತ್ತೆಂಬುದನ್ನು ಈ ಮೊದಲೇ ನಾನು ಬರೆದ ಏನ್ಸಿಯಂಟ್ ಕರ್ನಾಟಕದ ಭಾಗ I ಪುಟ 449ರಲ್ಲಿ ತಿಳಿಸಿರುತ್ತೇನೆ. ಈ ಅನಂತೇಶ್ವರ ದೇವಸ್ಥಾನವು ನಿಟ್ಟೂರಿನ ಸೋಮಲಿಂಗ ದೇವಸ್ಥಾನವನ್ನು ಹೋಲುತ್ತದೆ. ಈ ಉಡುಪಿ ತಾಲೂಕಿನ ನಿಟ್ಟೂರಿನ ಸೋಮಲಿಂಗ ದೇವಸ್ಥಾನವು ಕೂಡ ಸ್ಥಾನಿಕರಿಂದ ಬಲಾತ್ಕಾರವಾಗಿ ಎಳೆದುಕೊಳ್ಳಲ್ಪಟ್ಟು ಮಾಧ್ವರು ಸ್ವಾಧೀನಪಡಿಸಿಕೊಂಡದ್ದಾಗಿದೆ. ಇಲ್ಲಿಯ ಸೋಮಲಿಂಗ ವಿಗ್ರಹವನ್ನು ಹೊರಹಾಕಿ ಅವರ ಸ್ಥಳದಲ್ಲಿ ವೆಂಕಟ್ರಮಣ ವಿಗ್ರಹವನ್ನು ಇರಿಸಲಾಗಿದೆ. ಆಲೂಪರ ಪುರಾತನ ಸ್ಥಳವಾದ ಉದ್ಯಾವರದಲ್ಲಿ ಮಹಾದೇವ ವಿಗ್ರಹವನ್ನು ಹೊರಹಾಕಿ ಗಣಪತಿ ವಿಗ್ರಹವು ಇರಿಸಲ್ಪಟ್ಟಿದೆ. ಇದೇ ಉಡುಪಿ ತಾಲೂಕಿನ ಉಪ್ಪೂರಲ್ಲಿ ಕೂಡ ಈಶ್ವರ ಲಿಂಗದ ಬದಲಿಗೆ ಗಣಪತಿಯನ್ನು ಇರಿಸಲಾಗಿದೆ. ಉಡುಪಿಯ ಸಂಹದ್ದಿನಲ್ಲಿದ್ದ ಸ್ಥಾನಿಕರ 20 ಮಠಗಳು ಈಗ ವೈಷ್ಣವರ ಕೈಸೇರಿವೆ. ಅದೂ ಅಲ್ಲದೆ ಇದಕ್ಕೆ ಸೇರಿಸಿ ಇನ್ನೂ ಕೆಲವು ದೇವಸ್ಥಾನಗಳು ಸ್ಥಾನಿಕರ ಸ್ವಾಧೀನವಿದ್ದು ವೈಷ್ಣವರ ಸ್ವಾಧೀನ ಬಂದದ್ದನ್ನು ಜಿಲ್ಲೆಯ ಕೇಂದ್ರಗಳಲ್ಲಿ ನೋಡಬಹುದು. ಉದಾಹರಣೆಗಾಗಿ ಮಂಗಳೂರಿನ ತ್ರಿಶಿಲೇಶ್ವರ ಮತ್ತು ಶರಭೇಶ್ವರ ದೇವಸ್ಥಾನಗಳು, ಉಳ್ಳಾಲ ಸೋಮೇಶ್ವರ ದೇವಸ್ಥಾನ ಈ ಜಿಲ್ಲೆಯ ಪ್ರಸಿದ್ಧಪಟ್ಟ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಅಲ್ಲದೆ ಕಬ್ಬಿನಾಲೆ ಮತ್ತು ಹೆಬ್ರಿ ದೇವಸ್ಥಾನಗಳು.

ಸ್ಥಾನಿಕರ ಮತ್ತು ಮಾಧ್ವರ ಒಳಗಿನ ದ್ವೇಷವು ಹೆಚ್ಚಿದ್ದು ಉಡುಪಿಯಲ್ಲಿ. ಇದು ನಡೆದದ್ದು ವಾದಿರಾಜ ಸ್ವಾಮಿಗಳ ಕಾಲದಲ್ಲಿ

(AD1614) ಎಂದು ಅಲ್ಲಿಯ ಆಧಾರಗಳಿಂದ ತಿಳಿದುಬರುತ್ತದೆ. ಇದು ಹೆಚ್ಚಿನ ಮಟ್ಟಿನಮೇಲೆ ಹೋದದ್ದು ಅಲ್ಲಿಯ ಕೃಷ್ಣಮಠ ಮತ್ತು ಅದರ ಹತ್ತಿರ ಇರುವ ಕೆರೆಯನ್ನು ಕಟ್ಟಿಸುವ ಸಮಯದಲ್ಲಾಗಿದೆ. ಕೃಷ್ಣಮಠ ಮತ್ತು ಕೆರೆಯು ಇರುವ ಭೂಮಿಯು ಸ್ಥಾನಿಕರದ್ದಾಗಿತ್ತು. ಅಲ್ಲದೆ 8 ಮಠಗಳ ಅಡಿಸ್ಥಳಗಳು ಕೂಡಾ ಸ್ಥಾನಿಕರದ್ದೇ ಇತ್ತು. ಆಗ ನಿಟ್ಟೂರು ಸ್ಥಾನಿಕರು ಬಹಳ ಪ್ರಬಲರಾಗಿದ್ದರು ಎಂದು ತಿಳಿದುಬರುತ್ತದೆ. ನಿಟ್ಟೂರಿನ ಸೋಮಲಿಂಗವನ್ನು ಹೊರಹಾಕಿ ವೆಂಕಟ್ರಮಣ ವಿಗ್ರಹವನ್ನು ಆ ದೇವಸ್ಥಾನದಲ್ಲಿ ಇರಿಸುವ ಸಮಯದಲ್ಲಿ ಆದ ಜಗಳದ ಸಮಯ ವ್ಯವಹರಿಸುತ್ತಿದ್ದ ಕೆಲವು ಮಾತುಗಳು ಅಗತ್ಯ ತಿಳಿಯುತಕ್ಕವುಗಳಾಗಿವೆ. ಮಾಧ್ವರ ಕಡೆಯಿಂದ ವಾದಿರಾಜ ಸ್ವಾಮಿಗೂ ನಿಟ್ಟೂರಿನವರಿಗೂ ಆದ ಜಗಳದಲ್ಲಿ ಪಂಚಮರು ಅಂದರೆ ಈಗಿನ ಹರಿಜನರು ನಿಟ್ಟೂರಿನವರ ಪಕ್ಷಸೇರಿ ಮಾಧ್ವರಿಗೆ ವಿರೋಧ ನಿಂತರು. ವೈಷ್ಣವರು ನಿಟ್ಟೂರಿನ ಸೋಮಲಿಂಗವನ್ನು ಹೊರಹಾಕಿ ವೆಂಕಟ್ರಮಣನನ್ನು ಇರಿಸಿ ತಾವು ಜೈಸಿದ ಕುರುಹಿಗಾಗಿ ತುಳು ಭಾಷೆಯಲ್ಲಿ "ನಿಟ್ಟೂರು ಸೋಮಲಿಂಗ ಬೋನತಂಕರ ತಂಞಣತಂಕರ" ಎಂಬುದಾಗಿ ಘೋಷಣೆ ಮಾಡುತ್ತಿದ್ದುದೂ, ಮತ್ತು ಅದರ ಪ್ರತಿವಿರೋಧವಾಗಿ ಪಂಚಮರು "ಚಿಟ್ಟಿಪಾಡಿ ಬಲ್ಲಾಳ್‍ರ್ ಬೇಂಟೆ ಕೊರಿಯೊರೊ ? ನಿಡುಂಬೂರು ಬಲ್ಲಾಳ್‍ರ್ ದಿಡುಂಬುಗುದ್ಯೆರೊ" ಎಂಬುದಾಗಿ ಚಿಟ್ಟಿಪಾಡಿ ಮತ್ತು ನಿಡುಂಬೂರು ಬಲ್ಲಾಳರು ವಾದಿರಾಜ ಸ್ವಾಮಿಗೆ ಸಹಕರಿಸಿದ್ದರಿಂದ ಆ ಬಲ್ಲಾಳರನ್ನು ಹೀನಾಯವಾಗಿ ಹೇಳಿದ ಮಾತುಗಳು ಓದುಗರಿಗೆ ಆಸಕ್ತಿ ಕೊಡುತ್ತದೆ. ವೈಷ್ಣವರ ಸಂಖ್ಯೆಯು ನಿಟ್ಟೂರಿನವರ ಸಂಖ್ಯೆಯಿಂದ ಜಾಸ್ತಿ ಆಗಿ ಇದ್ದುದರಿಂದ ವೈಷ್ಣವರ ಕೈಯೇ ಮೇಲಾಯಿತು. ನಿಟ್ಟೂರಿನವರ ಮೇಲೆ ಅಧಿಕಾರ ನಡೆಸುವ ಅವಕಾಶವು ಮಾಧ್ವರಿಗೆ ಸಿಕ್ಕಿತು. ಇದರಿಂದಾಗಿ ಕರ್ನಾಟಕ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ವೈಷ್ಣವರ ಪ್ರಾಬಲ್ಯ ಹೆಚ್ಚಿತು. ಆಗಿನ ವಿಜಯನಗರದ ಚಕ್ರವರ್ತಿಗಳು ಕೂಡ ವೈಷ್ಣವರ ಒತ್ತಾಸೆಗೆ ಬಲಿಬಿದ್ದು ವೈಷ್ಣವರಾದರು. ಇದರಿಂದಾಗಿ ನಿಟ್ಟೂರಿನ ಜನರ ಕಷ್ಟವನ್ನು ಎತ್ತಿಹಿಡಿದು ವಿಚಾರಿಸುವವರೇ ಇಲ್ಲದಂತಾಯಿತು. ನಿಟ್ಟೂರಿನ ಜನರಿಗೂ ಮಾಧ್ವರಿಗೂ ಆದ ಈ ಜಗಳದಿಂದ ತುಳುವ ರಾಜ್ಯದಲ್ಲೇ ಇನ್ನಿತರ ಕೆಲವು ಸಾಕ್ಷ್ಯಗಳಿಂದಲೂ, ತುಳುವದ

ಸ್ಥಾನೀಕರ ಅವನತಿಗೆ ಕಾರಣವಾಯಿತು. 17ನೇ ಶತಮಾನದ ಆದಿಯಲ್ಲಿ ಮೇಲೆ ಹೇಳಿದ ವಾದಿರಾಜ ಸ್ವಾಮಿಯ ವತ್ತಾಸೆಯಿಂದ ಅವನ ಅಧಿಕಾರವು ತುಳುವರಲ್ಲಿ ಪ್ರಬಲಗೊಂಡಿತು.

ಈಗ ವೈಷ್ಣವರ ಸ್ವಾಧೀನ ಇರುವ ತುಳುವರ ದೇವಸ್ಥಾನಗಳು ಸ್ಥಾನಿಕರ ಆಸ್ತಿಗಳಾಗಿದ್ದುವು ಎಂಬುದಕ್ಕೆ ಸಂದೇಹವೇ ಇಲ್ಲ. ಯಾರೂ ಈ ವಿಚಾರದಲ್ಲಿ ಆಶ್ಚರ್ಯಪಡಬೇಕೆಂದಿಲ್ಲ. ಕೆಲವು ಅನೇಕ ಕಾಲ ಶೈವರ ವಶವಾಗಿದ್ದ ದೇವಸ್ಥಾನಗಳು ಒಂದು ಕಾಲದಲ್ಲಿ ಬುದ್ಧರ ಸ್ಥಳವಾಗಿತ್ತು. ಈ ವಿಷಯವನ್ನು ನಾನು ನನ್ನ (Ancient Karnataka Vol. I. ಪುಟ 379 n-I.384) ಎಂಬ ಪುಸ್ತಕದಲ್ಲಿ ವಿವರಿಸಿದ್ದೇನೆ (ಬಿ.ಎ.ಎಸ್.)

ಜಗದ್ಗುರು ಶೃಂಗೇರಿ ಮಠೀಯ
ಪ್ರಾಕ್ತನ ಲೇಖನ ಮಾಲಾ ಸಂಗ್ರಹ

ಒಂದನೇ ಭಾಗ ಪುಟ 118-119.
106 ಲೇಖನ ಪ್ರಮೋದೂತ ಕ್ರಿ.ಶ. 1810-11.

ರಾಜಶ್ರೀ ಕವಲೇದುರ್ಗದ ಅಮಿಲ ಶಂಕರಯ್ಯನವರಿಗೆ; ಪೂರ್ಣಯ್ಯನವರ ನಮಸ್ಕಾರ, ಆದಾಗಿ—

ತೀರ್ಥಹಳ್ಳಿಯಲ್ಲು ಕೈಗ ಮಠದ ಮೊದಲು ಯತೀಶ್ವರರು ಮುಕ್ತರಾಗಿ ಅವರ ಶಿಷ್ಯರು ಚಿಕ್ಕವರು ಇದ್ದಾರೆ. ಅಲ್ಲಿ ಇರುವ ಒಂದೆರಡು ಜನರು ಪುತ್ತಿಗೆ ಮಠಕ್ಕೆ ಹೋಗಿ ತೀರ್ಥಹಳ್ಳಿ ಮಠದ ಶ್ಯಾನುಭಾಗ ಮುಂತಾದವರ ಮೇಲೆ ಇಲ್ಲದ ಕ್ಷುದ್ರಗಳನ್ನು ಹೇಳಿದ್ದರಿಂದ **ಪುತ್ತಿಗೆ ಮಠದ ಶ್ರೀ ಸ್ವಾಮಿಗಳವರು ರಾತ್ರಿ ಕಾಲದಲ್ಲಿ ತೀರ್ಥಹಳ್ಳಿ ಮಠದ ಯತೀಶ್ವರರ ಕರೆಸಿಕೊಂಡು, ಈ ಮಠದ ಶ್ಯಾನುಭಾಗನ, ಮಠದ ಲೆಖ್ಖಪತ್ರವೆಲ್ಲಾ ತರಿಸಿಕೊಂಡು ಶ್ಯಾನುಭಾಗನ ಕೊಲ್ಲಬಾರದಕೊಲೆ ಕೊಂದು ಅವನ ಬದುಕು ಸಹ ಹಾಕಿಕೊಂಡು** ಇರುವುದಾಗಿ ಆ ಶ್ಯಾನುಭಾಗನ ಹೆಂಡಿರುಮಕ್ಕಳುಸಹ ಶೃಂಗೇರಿಗೆ ಶ್ರೀಯವರ ಬಳಿಯಲ್ಲೂ ಪಿರ್ಯಾದ ಅರಿಕೆ ಮಾಡಿಕೊಂಡಿರುವ ವಿವರವಾಗಿ ಮಲ್ಲಪ್ಪಯ್ಯನವರು ಹಜೂರಿಗೆ ಬರೆದ ಅರ್ಜಿ ಯಾನೆ ಮುಲಪೂಫ್ ಮಾಡಿ ಕಳುಹಿಸಿ ಇಟ್ಟಿತ್ತಾಗಿ ನೋಡಿಕೊಂಡಲ್ಲಿ ತಿಳಿಯುಬರುತ್ತಾ ಇದೆ.

ಈ ಮೇರೆಗೆ ಜಾಸ್ತಿನಡೆದಲ್ಲು, ನೀವು ಹೇಳಿದಾಗ್ಯೂ ಕೇಳದ ಈ ಮೇರೆಗೆ ನಡೆಮು ಇದೆ ಎಂದು ಬರೆದು ಇರುವುದರಿಂದ, ಸೀವು ಈ ಪೂರ್ವೋಕ್ತರವೇ ಬರಿಯಲಿಲ್ಲ; ಆದಾಗ್ಯೂ ಸದರಿ ಬರೆದ ಮೇರೆಗೆ ನಡೆದದ್ದು ಉಂಟೋ? ಇಲ್ಲವೊ? ನಿಮಿತ್ತವೇನು? ಈ ವಿವರಕ್ಕೆ ಯಥಾವತ್ತಾಗಿ ಬರೆಸಿ ಕಳುಹಿಸುವುದು. ಆ **ಪ್ರಕಾರ ತೀರ್ಥಹಳ್ಳಿ ಮಠದ ಯತೀಶ್ವರರ ರಾತ್ರಿವೇಳೆ ಕರೆಸಿ ಕೊಂಡು ಶ್ಯಾನುಭಾಗನ ಕೊಲ್ಲಿಸಿ ಅವನ ಬದುಕುಹಾಕಿಕೊಂಡು** ಇರು **ವುದು ಯಥಾರ್ಥವಾದಲ್ಲಿ** ನೀವೆ ಪುತ್ತಿಗೆ ಮಠದ ಶ್ರೀಯವರ ಬಳಿಗೆ ಹೋಗಿ ಅಡ್ಡಬಿದ್ದು ಅರಿಕೆಮಾಡಿಕೊಳ್ಳತಕ್ಕ ವಿವರ:—ತೀರ್ಥಹಳ್ಳಿ, ಹೈಗದ ಮಠ ಸ್ಮಾರ್ತರದ್ದು; ಶೃಂಗೇರಿ ಅಧೀನದಲ್ಲಿ ಪೂರ್ವದಾರಾಭ್ಯ ನಡೆದು ಬರುವಲ್ಲಿ, ಅಲ್ಲಿಯ ವಿಚಾರವೇನಿದ್ದರೂ ಅವರು ನೋಡಿಕೊಳ್ಳುವಂತಹ ಕೆಲ್ಸಕ್ಕೆ ಕ್ಷುದ್ರ, ತಂಟೆ ಜನ, ಯಾರಾದರೂ ನಿಮ್ಮ ಸನ್ನಿಧಾನದಲ್ಲಿ ಶೃತ ಪಡಿಸುತ್ತಾರೆ. ಅವರ ಮಾತು ಗೂಂಡಾ ಆ ಮಠದ ಯತೀಶ್ವರರ ಕರೆಸೋಣ; ಶ್ಯಾನುಭಾಗನ ಹೊಡಿಸಿ ಬದುಕುಬಾಳು ಹಾಕಿಕೊಳ್ಳೋಣ, ಇದಕ್ಕೆ ಅವರು ಈ ಮೇರೇಗೆ ಮಾಡುತ್ತಾರೆಂಬ ದುರ್ಜನ ಮಾಡೋಣ, ಅನ್ಯಮಠದವರ ಕೆಲಸವಲ್ಲವಷ್ಟೆ, ಇನ್ನು ಮೇಲೆ ಯಾರಾದರೂ ಆ ಮಠದ ಮೇಲೆ ಕ್ಷುದ್ರ ಹೇಳಿದಾಗ್ಯೂ ಅದರ ಗೋಜು ನನಗೇನೆಂದು ಚಿತ್ತಕ್ಕೆ ತಾರದೆ ಆ ಮಠದ ಯತೀಶ್ವರರು ಅವರ ಮಠಕ್ಕೆ ಹೋಗು ವಂತೆಯೂ, ಆ ಶ್ಯಾನುಭಾಗನ ಲೆಕ್ಕಪತ್ರ ಅವನ ಬದುಕು ಬಾಳು ಏನು ಇದ್ದರೂ ತೆಗೆದುಕೊಂಡು ಹೋಗುವಂತೆ ಅಪ್ಪಣೆಕೊಟ್ಟು ಕಳುಹಿಸತಕ್ಕದ್ದು ಎಂಬುದಾಗಿ ಅರಿಕೆಮಾಡಿ ಆ ಮಠದವರನ್ನೆಲ್ಲಾ ಕಳುಹಿಸಿಬಿಟ್ಟು, ಆ ವಿವರಕ್ಕೆ ಬರೆಸಿ ಕಳುಹಿಸುವುದು.

ಪ್ರಮೋದೂತ ಸಂವತ್ಸರ ಆಷಾಡ ಬಹುಳ ೧೧ ಶುಕ್ರವಾರ, ಜುಲೈ. ತಾ. ೨೭ ಸನ್ ೧೮೧೦ನೇ ಇಸವಿ.

107. ಲೇಖನ ಪ್ರಮೋದೂತ ಕ್ರಿ.ಶ. 1810–11.

ರಾಜಶ್ರೀ ಶೃಂಗೇರಿ ಮಲ್ಲಯ್ಯನವರಿಗೆ, ಪೂರ್ಣಯ್ಯನವರ ನಮಸ್ಕಾರ ಅದಾಗಿ:—

ಜ್ಯೇಷ್ಠ ಬ ೧೨ ರವಾಯನೆಲ್ಲಿ ಬರೆದಿದ್ದರಿಂದೆಲ್ಲಾ ವಿವರ ಶ್ರುತವಾಯಿತು. ಶ್ರೀಗಳವರು ಮೈಸೂರಿಗೆ ದಯಮಾಡುವ ಬಗ್ಗೆ ಚಾತುರ್ಮಾಸ

ಸಂಕಲ್ಪವಾದನಂತರ, ನವರಾತ್ರಿ ಉತ್ಸವ ಸಹ ಬೆಳೆಸಿಕೊಂಡು ದಯ ಮಾಡುವುದಾಗಿ, ಸಂಗಡಲೇ ನೀವು ಬರುತ್ತೇವೆಂದು ಬರೆದ ಬಗ್ಗೆ ಸಂತೋಷ ಪಟ್ಟದ್ದಾಗಿ, ಅದೇ ಪ್ರಕಾರ ಉತ್ಸವಾದಿಗಳ ಆಗ ಮಾಡಿಸು ದಯಮಾಡ ತಕ್ಕ ಸಮರ್ಪಕ ಇದ್ದಂತೆ ಮಾಡಿಸತಕ್ಕದ್ದು. ತೀರ್ಥಹಳ್ಳಿ ಹೈಗ ಮಠದಲ್ಲಿ ಯತೀಶ್ವರರು ಚಿಕ್ಕವರು ಇದ್ದಾರೆ. ಅಲ್ಲಿರುವ ಒಂದೆರಡು ಜನ **ಪುತ್ತಿಗೆ ಮಠದ ಶ್ರೀಯವರ ಸಂಗಡ ಕ್ಷುದ್ರವೆರಸಿ, ಅವರು ತೀರ್ಥಹಳ್ಳಿಯ ಯತೀಶ್ವರರ ರಾತ್ರಿ ವೇಳೆ ಕರಸಿ, ಆ ಮಠದ ಶ್ಯಾನುಭಾಗನ ಹಿಡಿ ತರಿಸಿಕೊಂಡು, ಬಡಿದು ಲೆಕ್ಕಪಕ್ಕ, ಆವನ ಬದುಕು ಸಹ ಹಾಕಿ ಕೊಂಡಿರುವುದಾಗಿ ಅವನ ಹೆಂಗಸರು ಮಕ್ಕಳು, ಶೃಂಗೇರಿಗೆ ಶ್ರೀಗಳವರ ಸನ್ನಿಧಾನಕ್ಕೆ ಬಂದು ಅರಿಕೆ ಮಾಡಿಕೊಂಡದ್ದಾಗಿ ಸಹ** ಬರೆದ ಬಗ್ಗೆ ಹೈಗಮಠದ ಯತೀಶ್ವರರು ಅಲ್ಲೆ ಶ್ಯಾನುಭಾಗನ ಸಹ ಕರೆಸಿ, ಜಾಸ್ತಿ ಅಮಲು ಮಾಡುವುದಕ್ಕೆ ನಿಮಿತ್ತವೇನು? ಹಾಗೆ ನಡೆದಿರದಿದ್ದಾಗ್ಯೂ ಆ ಬಗ್ಗೆ ಕವಲೇದುರ್ಗದ ಅಮಿಲ ಶಂಕರಯ್ಯನವರಿಗೆ ರವಾನೆ ಕಳುಹಿ ಸಿರುವುದರಿಂದ ಆ ಪ್ರಕಾರ ನಡೆದದ್ದು ಉಂಟಾಗಿದ್ದಲ್ಲಿ ಅಲ್ಲಿನ ಅಮಿಲನು ಹೋಗಿ ಹೇಳಿ ಶ್ರೀ......... ಆ ಮಠದ ಗೋಜಿಗೆ ಹೋಗದಂತೆ ಶ್ರುತಪಡಿಸಿ ಆ ಮಠದ ಯತೀಶ್ವರರು ಅಲ್ಲೆ ಶ್ಯಾನುಭಾಗನ ಲೆಕ್ಕಪತ್ರ, ಬದುಕು, ಏನಿದ್ದಾಗ್ಯೂ ಹಿಂದಕ್ಕೆ ಕಳುಹಿಸಿಕೊಟ್ಟದಾಗಿ ತಿಳಿದಿರುವುದು.

ಪ್ರಮೋದೂತ ಸಂವತ್ಸರದ ಆಷಾಡ ಬ. ೧೧ ಶುಕ್ರವಾರ ಜುಲ್ಯೈ ತಾ. ೨೭ ಸನ್ ೧೮೧೦ನೇ ಇಸವಿ.

ಈ ಮೇಲಿನ ಎರಡು ಪತ್ರಗಳಿಂದ ಉಡುಪಿಅಷ್ಟಮಟಗಳಲ್ಲಿ ಒಂದಾದ ಪುತ್ತಿಗೆ ಮಠವು ಯಾವ ರೀತಿ ಸಂಪತ್ತು ಸಂಪಾದಿಸಿದೆ ಎಂಬುದಾಗಿ ವಾಚ ಕರೇ ಊಹಿಸಿಕೊಳ್ಳಬಹುದು.

ಈಗಿನ ಉಡುಪಿ

ಈಗ ಉಡುಪಿ ಪಟ್ಟಣವು ಕನ್ನಡ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನಂತೆ ಅನೇಕ ದೊಡ್ಡ ದೊಡ್ಡ ಕಟ್ಟೋಣಗಳಿಂದಲೂ ಅನೇಕ ಸಂಸ್ಥೆಗಳಿಂದಲೂ, ಜನಸಂಖ್ಯೆಯಿಂದಲೂ ತುಂಬಿ ದೊಡ್ಡದಾಗುತ್ತಾ ಬಂದು ಜಿಲ್ಲೆಯಲ್ಲಿ 2ನೇ ಸ್ಥಾನವನ್ನು ಗಳಿಸಿದೆ. ಮಂಗಳೂರಿನಂತೆ ಇಲ್ಲಿಯೂ ಮುನ್ಸಿಪಾಲಿಟಿಯು ಪಟ್ಟಣದ ವ್ಯವಸ್ಥೆಯನ್ನು ಸರಿಪಡಿಸುತ್ತದೆ. ಈಗ ಈ ಉಡುಪಿ ಪಟ್ಟಣದ ಮಾತ್ರವಲ್ಲದೆ ನಮ್ಮ ಜಿಲ್ಲೆಯ ಮೇಲ್ಮೆಗೆ ಇಲ್ಲಿಯ ಗೌಡ ಸಾರಸ್ವತ ಬ್ರಾಹ್ಮಣರಲ್ಲೊಬ್ಬರಾದ ಪದ್ಮಶ್ರೀ ಡಾ। ಟಿ. ಎಂ. ಎ. ಪೈ ಎಂಬವರು ಕಾರಣರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವರ ಸಾಹಸದ ಕಾರ್ಯಗಳಿಂದ ಉಡುಪಿಯು ಹೆಚ್ಚಿನ ಪ್ರಶಸ್ತಿಗೆ ಬಂದಿದೆ. ಇವರು ಉಡುಪಿಗೆ ಹತ್ತಿರವಿರುವ ಮಣಿಪಾಲ ಎಂಬ ಒಂದು ಗುಡ್ಡ ಪ್ರದೇಶವನ್ನು ಅರಮನೆಯಂತಿರುವ ಕಟ್ಟೋಣಗಳಿಂದ ಸಿಂಗರಿಸಿದಂತೆ ಕಟ್ಟಿಸಿ ಅದರಲ್ಲಿ ಹಲವಾರು ಸಾರ್ವಜನಿಕರಿಗೆ ಉಪಯೋಗವುಳ್ಳ ಸಂಸ್ಥೆಗಳನ್ನು ಏರ್ಪಡಿಸಿ ಅವುಗಳಿಂದ ನಮ್ಮ ಹಿಂದುದೇಶದ ಅನೇಕ ವಿದ್ಯಾರ್ಥಿಗಳು ಪ್ರಯೋಜನ ಪಡೆಯುವಂತೆ ಮಾಡಿದ್ದಾರೆ. ಈಗ ಅನೇಕ ವರ್ಷಗಳಿಂದ ಇವರ ಸಂಸ್ಥೆಗಳಲ್ಲಿ ಅನೇಕ ಪ್ರಾಂತ್ಯಗಳ ಸಹಸ್ರ ಸಂಖ್ಯೆ ವಿದ್ಯಾರ್ಥಿಗಳು ಇಲ್ಲಿ ಬಂದು ತಮ್ಮ ವಿದ್ಯೆಯನ್ನು ಪೂರೈಸಿಕೊಂಡು ಪದವೀಧರರಾಗಿ ಮರಳುತ್ತಿರುವುದು ಸಂತೋಷಕರವಾದ ದೃಶ್ಯವಾಗಿದೆ.

ಈ ಉಡುಪಿ ನಮ್ಮದೆಂದು ಹೇಳಿಕೊಳ್ಳುವ ಇಲ್ಲಿಯ ಮಾಧ್ವ ಶಿವಳ್ಳಿ ಮಠದ ಯತಿಗಳು, ಜನತೆಗೆ ನಿಸ್ವಾರ್ಥ ಸೇವೆಸಲ್ಲಿಸಿದ್ದು ಹೆಚ್ಚಾಗಿ ಇಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಇವರ ಮಠದಲ್ಲಿ ಹೆಚ್ಚಾಗಿ ಇವರ ಮತದವರಿಗೇನೇ ಅನ್ನ ಕೊಡಲಾಗುತ್ತದೆ. ಇವರು ಮೊತ್ತ ಮೊದಲು ಸಂಸ್ಕೃತ ಕಾಲೇಜು ಒಂದನ್ನು ನಡೆಸುತ್ತಿದ್ದರು. ಅದರಲ್ಲಿ ಮೊದಲಿಗೆ ಅವರ ಮತದವರಿಗೆ ಮಾತ್ರ ಪ್ರವೇಶವಿತ್ತು. ಆ ಮೇಲೆ ಸರಕಾರದ ಒತ್ತಡದಿಂದ ಇತರರಿಗೂ ಸ್ವಲ್ಪಮಟ್ಟಿಗೆ ಪ್ರವೇಶ ಸಿಕ್ಕಿತು. ಆದರೆ ಮಧ್ಯಾಹ್ನದ ಊಟದ ವ್ಯವಸ್ಥೆ ಅವರ ಮತದವರಿಗೆ ಮಾತ್ರವೆಂದು ತಿಳಿದುಬರುತ್ತದೆ. ಮಣಿಪಾಲದಲ್ಲಿ ಶ್ರೀ ಡಾ। ಟಿ. ಎಂ. ಪೈಗಳವರು ಕಾಲೇಜುಗಳನ್ನು ತೆರೆದದ್ದು ನೋಡಿ

ಮಠದ ಸ್ವಾಮಿಗಳೂ ಪೂರ್ಣಪ್ರಜ್ಞ ಎಂಬ ಹೆಸರಿನಿಂದ ಒಂದು ಕಾಲೇಜನ್ನು ತೆರೆದರು. ಇವರ ಮಠಗಳಲ್ಲೂ ಸ್ವಾಮಿಗಳ ಅಣ್ಣ ತಮ್ಮ ವ ಅವರ ಹತ್ತಿರದ ಬಂಧುಗಳಿಗೆ ಮಾತ್ರ ಅಧಿಕಾರದ ಉದ್ಯೋಗಗಳು. ಇತರರಿಗೆ ಕೊಟ್ಟದ್ದು ಹೆಚ್ಚಾಗಿ ಕಾಣಬರುವುದಿಲ್ಲ. ಇವರ ಅಪಾರ ಸಂಪತ್ತು ಹಣ ಹೊರಗಿನ ಸಾರ್ವಜನಿಕರಿಂದ ಸಂಗ್ರಹಿಸಿ ಬಂದದ್ದಾದರೂ ಇವರು ಮಾಡಿದ ಜನತಾಸೇವೆ ಇಷ್ಟೆ ಎಂದು ತೋರಿಬರುತ್ತದೆ.

ಮಂಗಳೂರಿನಿಂದಲೂ ಉಡುಪಿಯು ಜಿಲ್ಲೆಯ ಕೇಂದ್ರವಾಗಲು ಯೋಗ್ಯಸ್ಥಳವಾಗಿದೆ. ಮಂಗಳೂರು ಹಿಂದಿನಿಂದಲೇ ಕೇಂದ್ರ ಸ್ಥಾನವನ್ನು ಪಡೆದುದರಿಂದ ಅದೇ ಮುಂದರಿಸಿ ಹೋಯಿತು. ಉಡುಪಿಯು ಜಿಲ್ಲೆಯ ಮಧ್ಯದಲ್ಲಿದ್ದು ಇಲ್ಲಿಯ ಮಲ್ಪೆಎಂಬ ಸ್ಥಳವು ಸ್ವಾಭಾವಿಕ ಬಂದರವಾಗಿದೆ.

ಪದ್ಮಶ್ರೀ ಟಿ. ಎಂ. ಎ. ಪೈಗಳವರು ಸ್ಥಾಪಿಸಿದ ಎಕಾಡಮಿ ಆಫ್ ಜನರಲ್ ಎಜುಕೇಶನ್ ಮಣಿಪಾಲ್. (Academy of General Education Manipal) ಎಂಬ ವಿದ್ಯಾಸಂಸ್ಥೆಯ ಆಡಳಿತದಲ್ಲಿ ಈ ಕೆಳಗೆ ನಿರೂಪಿಸಿದ ಸಂಸ್ಥೆಗಳು ಉಡುಪಿಯಲ್ಲೂ ಮಣಿಪಾಲದಲ್ಲೂ, ಇನ್ನಿತರ ಸ್ಥಳಗಳಲ್ಲೂ ಕಾರ್ಯನಿರ್ವಹಿಸುತ್ತವೆ.

1. ಕಸ್ತೂರ್ಬಾ ಮೆಡಿಕಲ್ ಕಾಲೇಜು.
2. ಕಸ್ತೂರ್ಬಾ ಮೆಡಿಕಲ್ ಆಸ್ಪತ್ರೆ.
3. ಮಣಿಪಾಲ್ ಇಂಜಿನಿಯರಿಂಗ್ ಕಾಲೇಜು.
4. ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು.
5. ಉಪಾಧ್ಯಾಯರ ಟ್ರೈನಿಂಗ್ ಕಾಲೇಜು.
6. ಉಡುಪಿ ಲಾ ಕಾಲೇಜು.
7. ಸಿಂಡಿಕೇಟ್ ಬೇಂಕ್.
8. ಸಂಗೀತ ಕಾಲೇಜು.
9. ದಂತ ಸರ್ಜರೀ ಕಾಲೇಜು.

10 ಅಲ್ಲದೆ ಮಣಿಪಾಲ್ ಇಂಡಸ್ಟ್ರೀಸ್ ಎಂಬ ದೊಡ್ಡ ಸಂಸ್ಥೆಯನ್ನು ಕೂಡ ಆರಂಭಿಸಿದ್ದಾರೆ. ಪಟ್ಟಣದ ಹೊರಗೆ ಈ ಎಕಾಡಮಿಗೆ ಸಂಬಂಧಪಟ್ಟ ಸಂಸ್ಥೆಗಳು—

1. ಕುಂದಾಪುರ ಭಂಡಾರ್‌ಕಾರ್ ಕಾಲೇಜು.
2. ಮುಲ್ಕಿ ವಿಜಯ ಕಾಲೇಜು.
3. ಕಾರ್ಕಳ ಶ್ರೀ ಭುವನೇಂದ್ರ ಕಾಲೇಜು.
4. ಮೂಡುಬಿದ್ರೆ ಮಹಾವೀರ ಕಾಲೇಜು.
5. ಶ್ರೀ ಶೃಂಗೇರಿ ಶ್ರೀ ಚಂದ್ರಶೇಖರ ಭಾರತೀ ಮೆಮ್ಮೋರಿಯಲ್ ಕಾಲೇಜು.

ಇಷ್ಟು ಸಂಸ್ಥೆಗಳನ್ನು ಸ್ಥಾಪಿಸಿದ ಶ್ರೀ ಪೈಗಳವರು ನಮ್ಮ ಹಿಂದೂ ಸಂಸ್ಕೃತಿಗೆ ಸಂಬಂಧಪಟ್ಟ ಆಯುರ್ವೇದ ಕಾಲೇಜು ಒಂದನ್ನು ಕ್ರಮಬದ್ಧವಾಗಿ ಆರಂಭಿಸದೇ ಇರುವುದು ವ್ಯಸನಾಸ್ಪದವಾಗಿದೆ. ಈಗ ಉಡುಪಿ ಒಳಕಾಡಿನಲ್ಲಿ ಅತಿ ಕಷ್ಟದಿಂದ ನಡೆಸಲ್ಪಡುವ ಆಯುರ್ವೇದ ಕಾಲೇಜನ್ನು ತಮ್ಮ ಎಕಾಡಮಿಗೆ ಸೇರಿಸಿಕೊಂಡು ಅದನ್ನು ಕ್ರಮಬದ್ಧವಾದ ಆಯುರ್ವೇದ ಕಾಲೇಜನ್ನಾಗಿ ಮಾಡಿ ಅದಕ್ಕೆ ಸಂಬಧಪಟ್ಟ, ಆಯುರ್ವೇದ ಮೆಡಿಕಲ್ ಆಸ್ಪತ್ರೆ ಮತ್ತು ಆಯುರ್ವೇದ ಸಂಶೋಧನ ಸಂಸ್ಥೆ (Research Institute) ಅದರೊಂದಿಗೆ ಆಯುರ್ವೇದ ಹಸಿ ಔಷಧಿಗಳ ತೋಟ (Medical Herbal Garden) ಮೊದಲಾದವುಗಳನ್ನು ಸ್ಥಾಪಿಸಿ ದೇಶದ ಸಂಸ್ಕೃತಿಯನ್ನು ಉಳಿಸಿದರೆ ಶ್ರೀ ಪೈಗಳವರು ಇನ್ನೂ ಹೆಚ್ಚು ಜನ ಪ್ರೀತರಾಗುವರೆಂದು ನಂಬುತ್ತೇನೆ.

ಅಲ್ಲದೆ ಶ್ರೀಮಾನ್ ಪೈಗಳವರು ಅವರ ಆಕಾಡಮಿಯಲ್ಲಿ Y.M.C.A. College of Physical Education ಸಂಸ್ಥೆ ಎಂಬ ಫಿಸಿಕಲ್ ಟ್ರೈನಿಂಗ್ ಕಾಲೇಜು ಒಂದನ್ನು ಸ್ಥಾಪಿಸಿದರೆ ಈ ಊರಿನ ಅನೇಕ ಅಧ್ಯಾಪಕರು ಮದ್ರಾಸ್ ಮತ್ತು ಬೆಂಗಳೂರು ವರೇಗೆ ಹೋಗಿ ಕಷ್ಟಪಟ್ಟು ಕಲಿಯುವ ತೊಂದರೆಗಳಿಂದ ಅವರನ್ನು ಪಾರುಮಾಡಬಹುದು.

ಇನ್ನೊಂದು ಘಟನೆ.

ಇದರಲ್ಲಿ ಜಜ್‌ಮೆಂಟಿನ ಸ್ವಲ್ಪ ಅಂಶವು ಪ್ರಕಟಿಸಲ್ಪಟ್ಟಿದೆ.

In the High Court of Mysore, at Bangalore Friday, the 15th day of September 1937.

Before Mr. Justice C. Abdulla Ghani Criminal Revision Petition Nos. 60 and 169 of 1936-37

In Cr. R P. 160/36-37—

P. Narnappa—Complainant:—Petitioner.

(By Mr. S. Shrikantaiah—Advocate.)

Verses

Sri Vishwamanyathirtha Shrigalavaru, Pejawar Mutt Udipi Mutt, S.K. Dt. } *Accused-opponent.*

(By Mr. L S. Raju—Advocate)

C.R P. against the decision of the Sessions Judge of Shimogga Division in C.A. No. 3 of 1934-35 setting aside the conviction and sentence passed by the special first class Magistrate, Chittaldurga in C.C. No. 143 of 1930-31.

In Cr.R.P. 169 of 36-37

Shrinivasa Rao—Accused-2 Petitioner, (by Mr. L. S Raju and Mr. G. Shrinivasa Rao).

Narnappa—Complainant: Opponent.

(By Mr S. Shrikantiah)

Cr R.P. against the decision of the Sessions Judge of Shimogga in C.A. No. 4 of 1934—35 confirming the conviction and sentence passed by the special first class Magistrate in Chittaldurg in C.C. No. 143 of 1930-31.

These two R.P's. comming on for hearing on Wednesday the 25th day of August 1937. The court pronounced the following—

ORDER.

Both the revision Petitions arise out of the same case viz C·C No· 143 of 1930-31 on the file of the Ist class Magistrate of Chittaldurga. The opponent in Cr. R.P. No. 169 of 1936—37 was the Ist accused in that case, while the petition in Crl·R.P. No. 169 of 1936—37 was the 2nd accused in the same case; the complainant being P. Narnappa Hotel Keeper Chittaldurg. The main facts leading to the complainant are not in dispute. The Ist acccused in this case is the Swami of one of the eight mutts in Udipi, while the 2nd accused is the secretary of the Shri Rama Seva Sangha Dhavanagere. When the head of the Sri Puttige Mutt visited Dhavangere he seems to have told the Brahmins of the place that some Totigas, who are not worthy of giving water to Brahmins are running hotels in Dhavangere. This naturally perturbed the citizens of the place who seems to have authorised the 2nd accused to make enquiries in regard to the allegations made by the Puttige Swamy. A 2, thereupon, wrote letters "Binnapatras" as they are called to the several Mutts in Udupi, presumably under the impression that the Mutts of Udupi were likely to know the antecedents of Toligas who are supposed to have migrated from those parts into Mysore. To the letters are attatched a

set of questions which A.2 requests the heads of the mutts to answer Ex. D.8. is said to be the reference made to, A.1. in this connection while D.13 and D.19 are stated to be similar reference made to the other mutts. I shall have to refer to D.19. later, because that contains the full set of questions which A.2 wanted answeres and also contains a seal to suggest its authenticity. It is only A.1. who seems to have complied with request of A.2 and sent a reply Ex. P3, which according to the rendering of the learned Sessions Judge is as follows.

Rayasa dated 21—8—1930

With reference to your letter dated 27-7-1930 asking for information in religious matters about certain persons residing in South Kanara District We enquired about the matter in your Rayasa No. S. 18/30; 19/30 and 20/30. It is learnt from the records that Subbanna, Ananthappa Sons of Manjunath belonging to Kalamunkur Village and Narayana, Mahadeva, Venkanna, Shrinivasa, Janardana Venkanna of Mijaru grama, all belongs to Totiga Caste, that Totiga community has no gurumutt and they are not worthy of sitting on same line while dining, that their occupation is a gardening and that even the high cast shudras do not take their food in the house

of Totigas. Therefore, you are hereby informed that the said Totigas are not eligible for inter-dining and Inter marriage and other acts "Savya-vahara" with Dravida Brahmins. We have hereby given to you the extracts of the following documents which have been collected in this matter.

Camp, Bijwada. Dated 21—8—1930

signature:

o o o o o o

In this case it is not proved that Exhibit P 3. was made with any such intention and the utmost that can be aseribed to A.1. is that he gave his opinion on the request of A 2 and if there was any implied authorisation at all it was for the publication of Ex-P.B. to only those who are interested in its publication. Anything beyond that, and an intention to publish Ex-P.3. to people, who are not interested such as Smartha Brahmins, cannot be ascribed to A-1 without specific proof.

Apart from this consideration a court of a revision cannot after an aquittal into a condition or an order or a rebail in a case like this which relates to an access who is not a menable to the jurisdiction of Mysore Court and the offence is not extraditable, moreover, the case has had

inquired earlier and has already run over a period of 7 years and it is certainly not worth while, in case of this kind, to interfer with an aquittal which ordinarily is not interfered with, at the instance of a party.

In the result, both the revision petitions are dismissed.

(Sd.) C. Abdul Ghani,
Judge.

True copy
Sd. Deputy Registrar.

ಈ ಮೇಲಿನ ಜಜ್‌ಮೆಂಟಿನ ಸಾರಾಂಶ:

1930–1931ರಲ್ಲಿ ಚಿತ್ರಲ್‌ದುರ್ಗ ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆದ ಕ್ರಿಮಿನಲ್ ಕೇಸ್ 143 of 1930—31ರ ಮೇಲೆ ಶಿವಮೊಗ್ಗ ಜಿಲ್ಲಾ ಸೆಶನ್ ಜಡ್ಜರು C.A. No. 3 of 1934-35 ಮತ್ತು C.A. No. 4 of 1934–35 ಈ ಎರಡು ಅಪೀಲುಗಳಲ್ಲಿ ಕೊಟ್ಟ ತೀರ್ಪು. ಇದರಲ್ಲಿ ಅರ್ಜಿದಾರರು:— ಶ್ರೀ ಪಿ. ನಾರ್ಣಪ್ಪ. ತಪ್ಪಿತಸ್ಥರು: (1) ಉಡುಪಿ ಪೇಜಾವರ ಮಠದ ವಿಶ್ವಮಾನ್ಯ ತೀರ್ಥಸ್ವಾಮಿಗಳವರು ಮತ್ತು (2) ದಾವಣಗೆರೆ ಶ್ರೀರಾಮ ಸೇವಾಸಂಘದ ಕಾರ್ಯದರ್ಶಿ ಶ್ರೀನಿವಾಸರಾವ್, ಈ ಕೇಸಿನಲ್ಲಿ ಜಿಲ್ಲಾ ಮೆಜಿಸ್ಟ್ರೇಟರು ತಪ್ಪಿತಸ್ಥರಾದ ಇಬ್ಬರಿಗೂ ತಲಾ ರೂ. 51 ಜುಲುಮಾನೆ ಕೊಡಬೇಕೆಂತಲೂ, ಅದಕ್ಕೆ ತಪ್ಪಿದರೆ 15 ದಿವಸ ಸಾದಾ ಜೈಲು ಅನುಭವಿಸಬೇಕೆಂತಲೂ, ಕೊಟ್ಟ ತೀರ್ಪನ್ನು ಡಿಸ್ಟ್ರಿಕ್ಟ್ ಜಡ್ಜರು ಅಂಗೀಕರಿಸಿ ಅವರಲ್ಲಿ ಒಂದನೇ ತಪ್ಪಿತಸ್ಥರಾದ ಸ್ವಾಮಿಗಳು ಮೈಸೂರು ಪ್ರಾಂತಕ್ಕೆ ಸೇರದೆ ಮದ್ರಾಸ್ ಪ್ರಾಂತಕ್ಕೆ ಸೇರಿದವರಾದುದರಿಂದ ಕ್ಷೇತ್ರ ಪರಿಮಿತಿಗೆ ಒಳಪಡದೇ ಇದ್ದ ಕಾರಣ ಅವರ ಮೇಲಿನ ಕೇಸನ್ನು ತೆಗೆದುಹಾಕಿ 2ನೇ ತಪ್ಪಿತಸ್ಥ ಶ್ರೀನಿವಾಸರಾಯರ ಮೇಲಿನ ತಪ್ಪನ್ನು ಕಾಯಂ ಮಾಡಿದರು. ಹಾಗಿದ್ದರೂ ಸ್ವಾಮಿಗಳೂ

ತಪ್ಪಿತಸ್ಥರಲ್ಲವೆಂದು ಆಗುವುದಿಲ್ಲ. ಅದರ ಮೇಲೆ ಮಾಡಿದ ಹೈಕೋರ್ಟು C.R.P. No. 60 ಮತ್ತು 169 of 1936-37ರಲ್ಲಿ ಮೈಸೂರು ಹೈಕೋರ್ಟು ಬೆಂಗಳೂರಲ್ಲಿ ತಾ. 15—9—1937ರಲ್ಲು ಹೈಕೋರ್ಟು ಜಡ್ಜರು ಕೂಡ ಕೆಳಕೋರ್ಟುಗಳ ಜಜ್‌ಮೆಂಟುಗಳನ್ನು ಕಾಯಂ ಮಾಡಿ ಅಪೀಲ್ C.R.P. ಗಳನ್ನು ಡಿಸ್‌ಮಿಸ್ ಮಾಡಿರುತ್ತಾರೆ. ಇದರಲ್ಲಿ ಹೈಕೋರ್ಟು ಜಡ್ಜರು ಜಸ್ಟಿಸ್ ಶ್ರೀ ಅಬ್ದುಲ್ಲ ಘನಿ ಎಂಬವರು.

ಕೇಸಿನ ವಿವರ

ಉಡುಪಿ ಅಷ್ಟಮಠಗಳಲ್ಲೊಂದಾದ ಪುತ್ತಿಗೆ ಮಠದ ಸ್ವಾಮಿಗಳೊಬ್ಬರು ದಾವಣಗೆರೆಗೆ ಬಂದಾಗ ಅಲ್ಲಿ ಹೋಟೆಲು ನಡೆಸುತ್ತಿದ್ದ ಶ್ರೀ ನಾರ್ಣಪ್ಪ ಎಂಬವರ ಜಾತಿಯು ವಿಷಯದಲ್ಲಿ ಕ್ಷುಲ್ಲಕ ಕಾರಣ ತೆಗೆದುಕೊಂಡು ಅವರ ಮತದವರು ಬ್ರಾಹ್ಮಣರಲ್ಲವೆಂದು, ಅವರ ಮತಸ್ಥರಿಂದ ನೀರು ಸಹ ಕುಡಿಯಬಾರದೆಂದು ಊರಲ್ಲಿ ಗುಲ್ಲು ಎಬ್ಬಿಸಿ ಆ ಊರಿನ ಜನರ ಸಹಕಾರ ಅವರಿಗೆ ಸಿಕ್ಕದಂತೆ ಮಾಡಲು ಪ್ರಯತ್ನಿಸಿದರು. 2ನೇ ತಪ್ಪಿತಸ್ಥರಾದ ಶ್ರೀನಿವಾಸರಾಯರು ಪುತ್ತಿಗೆ ಸ್ವಾಮಿಗಳ ಮಾತನ್ನು ಪುಷ್ಟೀಕರಿಸಲು ಉಳಿದ ಉಡುಪಿಯ 7 ಮಠದ ಸ್ವಾಮಿಗಳಲ್ಲಿ ಕನ್ನಡ ಜಿಲ್ಲೆಯ ದೇಶಸ್ಥ ಬ್ರಾಹ್ಮಣರಾದ ಶ್ರೀ ನಾರ್ಣಪ್ಪನವರ ಜಾತೀ ವಿಚಾರದಲ್ಲಿ ರಾಯಸ ಒಂದನ್ನು ಕಳುಹಿಸಬೇಕೆಂದು ಬರಹ ಮೂಲಕ ಕೇಳಿಕೊಂಡದ್ದಕ್ಕೆ ಆಗ ಬೆಜ್ವಾಡದಲ್ಲಿ ಪ್ರವಾಸಮಾಡಿಕೊಂಡಿದ್ದ ಪೇಜಾವರಮಠದ ಶ್ರೀ ವಿಶ್ವಮಾನ್ಯ ತೀರ್ಥಸ್ವಾಮಿಗಳು "ಕನ್ನಡ ಜಿಲ್ಲೆಯ ಕಲ್ಲಮಣ್ಕೂರು ಗ್ರಾಮದಲ್ಲಿ ವಾಸ ಮಾಡುವ ಮಂಜುನಾಥಯ್ಯನ ಮಕ್ಕಳು ಅನಂತಪ್ಪ ಮತ್ತು ಸುಬ್ಬಣ್ಣ ಎಂಬವರೂ, ಮಿಜಾರು ಗ್ರಾಮದ ನಾರಾಯಣ, ಮಹದೇವ, ವೆಂಕಣ್ಣ, ಶ್ರೀನಿವಾಸ, ಜನಾರ್ದನ ಮೊದಲಾದವರು ತೋಟಿಗರೆಂದೂ, ಅವರಿಗೆ ಗುರುಗಳಿಲ್ಲವೆಂದು ಅವರು ಬ್ರಾಹ್ಮಣರ ಪಂಕ್ತಿಯಲ್ಲಿ ಕುಳಿತು ಭೋಜನ ಮಾಡಲು ಅರ್ಹರಲ್ಲವೆಂದೂ, ಇತ್ಯಾದಿ ಕ್ಷುಲ್ಲಕ ದೋಷಗಳನ್ನು ಕಲ್ಪಿಸಿ ಅವರಿಗೆ ದ್ರಾವಿಡ ಬ್ರಾಹ್ಮಣರೊಳಗೆ ಸವ್ಯವಹಾರವಿಲ್ಲ"ವೆಂದು ಬರಹಮೂಲಕ ತಾ. 21—8—1930ರಲ್ಲಿ ತನ್ನ ರಾಯಸವನ್ನು ಕೊಟ್ಟು ಕಳುಹಿಸಿದರು.

ಶ್ರೀ ಶೃಂಗೇರಿಮಠದ ಶಿಷ್ಯವರ್ಗದವರಾದ ಸ್ಮಾರ್ತಬ್ರಾಹ್ಮಣ ಸಂಗಡಕ್ಕೆ ಸೇರಿದ ಶ್ರೀ ನಾರ್ಣಪ್ಪನವರ ಉದ್ಯೋಗಕ್ಕೇನೆ ಇವರ ಈ ರೀತಿಯ ಪ್ರಚಾರ ದಿಂದ ತೊಂದರೆ ಉಂಟಾಯಿತು. ಈ ಕಾರಣದಿಂದ ಶ್ರೀ ನಾರ್ಣಪ್ಪನವರು ರಾಯಸಕೊಟ್ಟ ಪೇಜಾವರ ಸ್ವಾಮಿಗಳ ಮೇಲೂ, ಪ್ರಚಾರಮಾಡಿದ ಶ್ರೀನಿವಾಸರಾಯರ ಮೇಲೂ ಇವರು ಮಾಡಿದ ತಪ್ಪಿಗಾಗಿ ಚಿತ್ರಲ್‌ದುರ್ಗ ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರಲ್ಲಿ C.C. ನಂಬ್ರ 143 of 1930-31 ಕೇಸ್ ದಾಕ್ಲು ಮಾಡಬೇಕಾಯಿತು. ಇದರಲ್ಲಿ ಮೇಲಿನ ತಪ್ಪಿತಸ್ಥರಾದ ಪೇಜಾವರ ಸ್ವಾಮಿಗಳಿಗೂ, ಶ್ರೀನಿವಾಸರಾಯರಿಗೂ ತಲಾ 51 ರೂಪ್ಯಾ ಪ್ರಕಾರ ಜುಲುಮಾನೆಯೂ ಕೊಡಲು ತಪ್ಪಿದ್ದಲ್ಲಿ 15 ದಿವಸದ ಶಿಕ್ಷೆಯು ವಿಧಿಸಲ್ಪಟ್ಟಿತು. ಈ ಕೇಸು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸ್ವಾಮಿಗಳಿಗೆ ಕ್ಷೇತ್ರ ಪರಿಮಿತಿಗೆ ಒಳಪಡದೇ ಇದ್ದದಾದುದರಿಂದ ಅವರ ಮೇಲಿನ ತಪ್ಪು ತೆಗೆದು ಹಾಕಲ್ಪಟ್ಟಿತು. ಎರಡನೆ ತಪ್ಪಿತಸ್ಥ ಶ್ರೀನಿವಾಸರಾಯರ ಮೇಲೆ ಕಾಯಂ ಆಯಿತು. ಹೈಕೋರ್ಟಿನ ಅಪೀಲಿನಲ್ಲೂ ಶ್ರೀನಿವಾಸರಾಯರ ಮೇಲೆ ಅಪರಾಧವು ಸ್ಥಿರವಾಯಿತು.

ಈ ಮೇಲಿನ ವಿಷಯಗಳನ್ನು ಪರಿಶೀಲಿಸುವಾಗ ಮಠಾಧಿಪತಿಗಳೆನಿಸಿ ಕೊಂಡ ಶ್ರೀ ಸ್ವಾಮಿಗಳವರು ತಮ್ಮ ಅಧಿಕವಾದ ಮಾಧ್ವಮತದ ಅಭಿ ಮಾನದಿಂದ ಶೃಂಗೇರಿ ಮಠದ ಶಿಷ್ಯವರ್ಗದವರಾದ ಕನ್ನಡ ಜಿಲ್ಲೆಯ ಸ್ಮಾರ್ತ ಬ್ರಾಹ್ಮಣರಲ್ಲಿ ತೋರಿಸುತ್ತಿರುವ ತಾತ್ಸಾರಭಾವನೆಯು ಇದರಿಂದ ವ್ಯಕ್ತವಾಗುತ್ತದೆ. ಮೇಲಿನ ಕೇಸಿನಲ್ಲಿ ಇವರು ಮಾಡಿದ ಅಧಿಕ ಪ್ರಸಂಗ ದಿಂದ ಇವರೇ ಸಿಕ್ಕಿಕೊಂಡಂತಾಯಿತು.

ಈ ಉಡುಪಿ ಮಾಧ್ವಸ್ವಾಮಿಗಳವರು ತಮ್ಮ ಕುಲ ಎಲ್ಲಿಂದ ಬಂತು ತಮ್ಮ ಮೂಲ ಯಾವುದು. ತಾವು ಎಷ್ಟರಮಟ್ಟಿನ ಶ್ರೇಷ್ಠರರು ಎಂಬು ದನ್ನು ತಿಳಿದುಕೊಳ್ಳದೆ ಇತರ ಬ್ರಾಹ್ಮಣರ ಮೇಲೆ ಈ ರೀತಿ ವರ್ತಿಸುತ್ತಿರು ವುದು ಹುಚ್ಚುತನ ಈ ಮಾಧ್ವರ ಮೂಲವನ್ನು ಶ್ರೀ ವ್ಯಾಸಪ್ರಣೀತ ಶ್ರೀ ಸೌರಪುರಾಣದ 39—40ನೇ ಸರ್ಗಗಳಲ್ಲೂ, ಶ್ರೀ ದೇವೀಭಾಗವತದ 11ನೇ ಮತ್ತು 12ನೇ ಸ್ಕಂದಗಳಲ್ಲೂ, ಪರಿಶೀಲಿಸಿ ನೋಡಿದರೆ ಇವರೇ ಬ್ರಾಹ್ಮ ಣರು ಹೌದೋ? ಅಲ್ಲವೋ? ಎಂಬ ಪ್ರಶ್ನೆಗಳು ಏಳುತ್ತವೆ. ಆದುದರಿಂದ

ಇವರ ಬ್ರಾಹ್ಮಣ್ಯವನ್ನು ಮೊದಲು ಇವರು ಕಾಪಾಡಿಕೊಳ್ಳಬೇಕು. ಈ ಪುಸ್ತಕದ ಅಂತ್ಯದಲ್ಲಿ ಮೇಲಿನ ಪುರಾಣಗಳ ಸ್ವಲ್ಪ ಅಂಶಗಳು ಪ್ರಕಟಿಸಲ್ಪಟ್ಟಿವೆ.

ಉಪ ಸಂಹಾರ

ಆ ಸೇತು ಹಿಮಾಚಲ ಪರ್ಯಂತ ವ್ಯಾಪಿಸಿರುವ ಈ ಭರತಖಂಡವು ಪ್ರಾಚೀನದಿಂದಲೇ ಹಿಂದು ಸನಾತನಧರ್ಮಾಭಿಮಾನಿಗಳಾಗಿರುವ ಭಾರತೀಯರಿಗೆ ತವರುಮನೆಯಾಗಿ ಈಗ ಕೆಲವು ಶತಮಾನಗಳಿಂದ ಈಚೆಗೆ ಇತರ ಹೊರಗಿನ ಪಂಗಡದವರಿಗೂ ಕೂಡ, ಹಿಂದೂಧರ್ಮದ ಭೇದಭಾವವಿಲ್ಲದ ಮಾನವೀಯತೆಯ ತತ್ವದಿಂದ ನಿವಾಸಿಸಲು ಎಡೆಕೊಟ್ಟು ತಮ್ಮ ಮಕ್ಕಳಂತೆ ಎಲ್ಲರನ್ನು ಪೋಷಿಸುತ್ತಿರುವುದು ನೋಡಿದರೆ ಇತರ ಎಲ್ಲಾ ಖಂಡಗಳಿಗಿಂತ ಈ ಭಾರತವು ಹೆಚ್ಚಿನ ಶ್ರೇಷ್ಠತೆ ಮತ್ತು ಪೂಜ್ಯತೆಯನ್ನು ಪಡೆದದ್ದಾಗಿರುತ್ತದೆ.

ಈ ಭರತಖಂಡದಲ್ಲಿ ಸಾಧಾರಣ 1200 ವ 2000 ವರ್ಷಗಳ ಹಿಂದೆ ನಮ್ಮ ಹಿಂದುಗಳೊಳಗೆ ಶೈವರೂ, ವೈಷ್ಣವರೂ, ಶಾಕ್ತೇಯರು ಗಾಣಪತ್ಯರು, ದಿವಾಕರವಾದಿಗಳು ಮತ್ತು ಹಿರಣ್ಯಗರ್ಭವಾದಿಗಳೆಂಬ ಇತ್ಯಾದಿ ಭೇದಗಳು ಏರ್ಪಟ್ಟು ಕೆಲವರು ತಮ್ಮ ದೇವತೆಗಳ ಪ್ರೀತಿಗೋಸ್ಕರ ಪಶುಹಿಂಸೆಮಾಡುತ್ತಾ ಹಿಂಸಾವಾದಿಗಳಾಗಿ ಒಬ್ಬರಿಗೊಬ್ಬರು ತಮ್ಮ ತಮ್ಮ ಮೇಲ್ಮೆಗಾಗಿ ಹೊಡೆದಾಡಿಕೊಳ್ಳುತ್ತಿದ್ದರು. ಇದರಿಂದಾಗಿ ನಮ್ಮ ದೇಶದಲ್ಲಿ ವಿಶಾಲಬುದ್ಧಿಯ ನಮ್ಮ ಹಿಂದು ಸನಾತನಧರ್ಮವು ಶಿಥಿಲವಾಗುತ್ತಾ ಬಂದುದರಿಂದ ಅದರ ಪರಿಣಾಮವಾಗಿ ದೇಶದಲ್ಲಿ ಬೌದ್ಧಮತವೂ ನಾಸ್ತಿಕತೆಯೂ ತುಂಬಿತು. ಜನರು ತಮ್ಮ ಕರ್ತವ್ಯವನ್ನು ಮರೆತು ಸತ್ಯಾಸತ್ಯತೆಯನ್ನು ತಿಳಿಯದೆ ಕಷ್ಟಪಡುತ್ತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಇರುವಾಗ ಪರಮಶಿವನು ಕೇರಳದ ಕಾಲಡಿ ಎಂಬ ಗ್ರಾಮದಲ್ಲಿ ಶಂಕರನೆಂಬ ಹೆಸರಿನಿಂದ ಅವತರಿಸಿ ತನ್ನ ಬಾಲ್ಯದಲ್ಲೆ ಸನ್ಯಾಸ ಸ್ವೀಕಾರಮಾಡಿ ಸರ್ವ ಶಾಸ್ತ್ರಪಾರಂಗತನಾಗಿ ಶ್ರೀ ಶಂಕರಾಚಾರ್ಯರೆಂಬ ಬಿರುದನ್ನು ಪಡೆದು ನಶಿಸುತ್ತಿರುವ ಅಭೇದವನ್ನು ಸಾರುವ ಹಿಂದೂ ಸನಾತನಧರ್ಮದ ಭೇದರಹಿತ ವಿಶಾಲವಾದ ತತ್ವವನ್ನು ತನ್ನ ಅಗಾಧಜ್ಞಾನದಿಂದ ಜನರಿಗೆ ಕರ್ಮಯೋಗ, ಭಕ್ತಿಯೋಗಗಳು ಜ್ಞಾನಯೋಗದ ಸೋಪಾನಗಳೆಂದೂ ಜ್ಞಾನವೇ

ಪರಮಾತ್ಮನನ್ನು ತಿಳಿಯಲು ಮುಖ್ಯಮಾರ್ಗವೆಂದು ಅಂತಹ ಪರಮಾತ್ಮನು "ಏಕಮೇವ ಅದ್ವಿತಿಯಂ'' ಎರಡಾಗಿರದೆ ಒಬ್ಬನೇ ಆಗಿದ್ದಾನೆಂದೂ, ಶಿವ, ವಿಷ್ಣು, ಗಣಪತಿ, ದುರ್ಗಾ, ಆದಿತ್ಯಾ ಇತ್ಯಾದಿ ದೇವತೆಗಳು ಆ ಪರಮಾತ್ಮನ ಅಂಶಗಳೆಂದೂ, ಆ ಅದ್ವಿತೀಯ ಬ್ರಹ್ಮನ ಪೂಜೆಯನ್ನು ಪಂಚಪೂಜಾ ವಿಧಾನದಿಂದ ಶ್ರುತಪಡಿಸಿ ಜನರಲ್ಲಿ ಉಂಟಾದ ಉಚ್ಛ ನೀಚ ಭಾವನೆಯನ್ನು ತೊಲಗಿಸಿ ಶಿವ, ವಿಷ್ಣು, ಶಕ್ತಿ, ಗಣಪತಿ ಮತ್ತು ಆದಿತ್ಯ ಇತ್ಯಾದಿ ದೇವತೆಗಳಲ್ಲಿ ಅಭೇದ ಭಾವನೆಯನ್ನೂ ಜನರು ಹಿಂಸನುಯುವಾದ ವೃತ್ತಿಯನ್ನೂ ಬಿಡುವಂತೆಯೂ ತನ್ನ ಬೋಧನೆಯಿಂದ ತೋರಿಸಿಕೊಟ್ಟು ಜನರೊಳಗೆ ಐಕ್ಯಮತ್ಯವವನ್ನು ಉಂಟುಮಾಡಿದ್ದರು. ಆ ಸಂದರ್ಭದಲ್ಲಿ ಅವರ ಅವತಾರವಾಗದೇ ಇರುತ್ತಿದ್ದರೆ ಇಂದಿಗೆ ನಾವೆಲ್ಲರು ಬೌದ್ಧರಾಗಿಯೋ ಅಥವಾ ನಮ್ಮ ದೇಶವನ್ನು ಆಕ್ರಮಿಸಿದ ಮುಸಲ್ಮಾನರಾಗಿಯೋ ಕ್ರೈಸ್ತರಾಗಿಯೋ ಇರಬೇಕಾಗಿತ್ತು. ನಮ್ಮ ಸನಾತನಧರ್ಮದ ಸನಾತನತೆಯು ಅವರು ಉಪದೇಶಿಸಿದ ಅಭೇದವನ್ನು ಸಾರುವ ಅದ್ವೈತ ತತ್ವದಿಂದಲೇ ಉಳಿಯಿತು.

ನಮ್ಮ ಸನಾತನಧರ್ಮವು ಶಾಶ್ವತವಾದುದು ಅವರ ಅಭೇದವಾದದಿಂದಲೇ. ನಮ್ಮ ಸನಾತನಧರ್ಮವು ನಾಲ್ಕು ವೇದಗಳ ಮತ್ತು ಅವುಗಳನ್ನು ಅನುಸರಿಸಿ ಇರುವ, ಸ್ಮೃತಿ, ಪುರಾಣಾದಿಗಳ ತಳಹದಿಯಲ್ಲಿ ನಿಂತಿದೆ. ವೇದಗಳು ಮೊದಲು ಕರ್ಮ ಪ್ರಾಧಾನ್ಯವನ್ನು ಹೇಳಿಕೊಂಡು ಅಂತ್ಯದಲ್ಲಿ ಅದ್ವೈತದ ಅಭೇದವನ್ನು ಸಾರುತ್ತಿವೆ. ಆದುದರಿಂದಲೇ ಅಭೇದವಾದ ಅದ್ವೈತ ತತ್ವ ಪ್ರತಿಪಾದಕವಾದ ಆತ್ಮಬೋಧ ತತ್ವಗಳಿಗೆ ವೇದಾಂತವೆಂಬ ಹೆಸರು ಬಂತು. ಅಂದರೆ ತಿಳುವಳಿಕೆಯ ಅಂತ್ಯ ಅಂದರೆ ತನ್ನನ್ನು ತಾನು ತಿಳಿಯುವುದು ಅಥವ ತನ್ನ ಸ್ವರೂಪ ಜ್ಞಾನವನ್ನು ಪಡಿಯುವುದು ಎಂದರ್ಥ. ಅನೇಕ ಆಕಾರಗಳನ್ನು ಹೊಂದಿದ ಮಣ್ಣಿನ ಮಡಿಕೆಗಳಲ್ಲಿ ಮಣ್ಣನ್ನು ಬಿಟ್ಟು ಮಡಿಕೆಗಳು ಎಲ್ಲಿವೆ? ಎಂದು ಭಾವಿಸುವವನಿಗೆ ಮಣ್ಣೇ ಎಂಬ ಬುದ್ಧಿಯು ನಿರ್ವಿಕಲ್ಪವಾಗಿ ನಿಂತು ಅದರ ಆಕಾರವಾದ ಮಡಿಕೆ ಎಂಬ ಭಾವನೆ ಬಿಟ್ಟುಹೋದಂತೆಯೂ, ಸಮುದ್ರದ ನೀರಲ್ಲಿ ಆಕಾರವನ್ನು ಹೊಂದಿದ ಅಲೆಗಳನ್ನು ಬಿಟ್ಟು ನೀರೇ ಎಂಬ ನಿರ್ವಿಕಲ್ಪಭಾವನೆಯು ಬಂದಂತೆಯೂ, ಇರುವ ಈ ತತ್ವವನ್ನು ಅನುಸರಿಸಿಯೇ ಆತ್ಮನಲ್ಲಿ

(ಬ್ರಹ್ಮದಲ್ಲಿ) ರೂಪನಾಮಗಳಿಂದ ಅನೇಕತ್ವ ಹೊಂದಿ ಪ್ರತಿಭಾಸಿಸುತ್ತಿರುವ ಪ್ರಪಂಚವು, ಆತ್ಮನನ್ನು ಬಿಟ್ಟು ಪ್ರಪಂಚವಿಲ್ಲ, ಎಂಬ ನಿರ್ವಿಕಲ್ಪದಿಂದ ಪ್ರಪಂಚ ಜ್ಞಾನವನ್ನು ಬಿಟ್ಟು, ಆತ್ಮವು ಒಂದೇ ಅನೇಕತೆಯು ಇಲ್ಲ ಎಂಬ ಜ್ಞಾನವನ್ನು ಅನುಭವಿಸುವುದೇ ವೇದಾಂತವು.

"ಸ್ಥಾಣೌ ಪುರುಷವತ್ ಭ್ರಾಂತ್ಯಾಕೃತಾ ಬ್ರಹ್ಮಣಿ ಜೀವತಾ ॥ ರಜ್ಜೌ ಸರ್ಪವತ್ ಭ್ರಾಂತ್ಯಾ ॥ ಅಂದರೆ ರಾತ್ರಿ ಕಾಲದಲ್ಲಿ ಕಲ್ಲನ್ನು ಮನುಷ್ಯನೆಂದೂ, ಹಗ್ಗವನ್ನು ಸರ್ಪವೆಂದು ಭ್ರಮಿಸಿ ಹೆದರಿದಂತೆ ಆತ್ಮದಲ್ಲಿ (ಬ್ರಹ್ಮದಲ್ಲಿ) ಜೀವಪ್ರಪಂಚಗಳ ಭಾವನೆಯನ್ನು ಭ್ರಮಿಸುವುದಾಗಿದೆ. ಮನುಷ್ಯನಲ್ಲ ಕಲ್ಲೆಂಬ ಮತ್ತು ಸರ್ಪವಲ್ಲ ಹಗ್ಗವೆಂಬ ಭ್ರಮನಿರಸನವಾಗಿ ವಸ್ತುವಿನ ನಿಜಸ್ಥಿತಿಯನ್ನು ತಿಳಿಯುವಂತೆ ಆತ್ಮನಲ್ಲಿ ಭ್ರಮಿಸಿದ ಜೀವ ಜಗತ್ತುಗಳ ಭಾವನೆಯು, ಆತ್ಮಜ್ಞಾನ ಬಂದೊಡನೆ ತನಗೆ ತಾನಾಗಿಯೇ ತನ್ನ ನಿಜತ್ವವನ್ನು ತಿಳಿಯುವುದೆ ವೇದಾಂತವು. ಈ ಸರ್ವವ್ಯಾಪಕವಾದ ಆತ್ಮನಲ್ಲಿ ಜೀವಜಗತ್ತುಗಳೆಂಬ ನಾಮರೂಪಗಳು—ಸೃಷ್ಟಿ, ಸ್ಥಿತಿ, ಲಯಗಳೆಂಬ ಮೂರು ಅವಸ್ಥೆಗಳನ್ನು ಹೊಂದಿ ನಾಶವನ್ನು ಹೊಂದುತ್ತವೆ. ಈ ನಾಮರೂಪಗಳಾದ ಆಕಾರ ವಿಕಾರಗಳು 'ಆಗಮಾಪಾಯಿನಃ'. ಹುಟ್ಟು ಸಾವುಗಳ ಮಧ್ಯೆ ಬಂದು ಹೋಗುವುವುಗಳು. ಆದುದರಿಂದ ಜಗತ್ತು ಜೀವರುಗಳು ಮಿಥ್ಯವೆಂದೂ ವ್ಯತ್ಯಾಸ ಹೊಂದದ ಬ್ರಹ್ಮವೊಂದೆ ಸತ್ಯವೆಂದು ತಿಳಿಯುವುದೇ ವೇದಾಂತವು.

ಈ ತತ್ವವನ್ನು ಅನುಸರಿಸಿ ವಿಮರ್ಶಿಸುವಾಗ ಹಿಂದು, ಮುಸಲ್ಮಾನ್, ಕ್ರೈಸ್ತ, ಮೊದಲಾದ ಅನೇಕ ಮತಗಳನ್ನು ಅವಲಂಬಿಸಿ ಜಗತ್ತಿನಲ್ಲಿರುವ ಮಾನವರೆಲ್ಲರೂ, ಶಿವ, ವಿಷ್ಣು, ಏಸು, ಅಲ್ಲ, ಎಂಬ ನಾಮಭೇದಗಳಿಂದ ಪರಮಾತ್ಮನನ್ನು ಬೇರೆ ಬೇರೆ ವಿಧದಿಂದ ಭಜಿಸಿದರೂ ಇವರೆಲ್ಲಾ ಬೇರೆ ಬೇರೆ ಎಂಬ ಭೇದಭಾವನೆಯು ಉಂಟಾಗಲಾರದು. ನಾವೆಲ್ಲಾ ಒಂದೇ ಭೂಮಿಯಲ್ಲಿ ಹುಟ್ಟಿ ಅದರಲ್ಲಿ ಬೆಳೆದ ಅನ್ನವನ್ನು ತಿಂದು ಅಂತ್ಯಕ್ಕೆ ಅದರಲ್ಲೇ ಭೇದಭಾವನೆ ಇಲ್ಲದೆ ಮಣ್ಣಾಗುವವರಾಗಿದ್ದು, ಮಧ್ಯದಲ್ಲಿ ಮಾತ್ರ ಸ್ವಲ್ಪಕಾಲ ಭೇದಭಾವನೆಯನ್ನು ಕಲ್ಪಿಸಿಕೊಂಡು ಜಗಳವಾಡಿಕೊಳ್ಳುವುದು ವಿಚಿತ್ರವಾಗಿದೆ. ಆದಿಯಲ್ಲೂ ಅಂತ್ಯದಲ್ಲೂ ಬೇದಭಾವನೆ

ಇಲ್ಲದೆ ಮಧ್ಯದಲ್ಲಿ ಮಾತ್ರ ಬಂದು ಹೋಗುವ ಬೇದಭಾವನೆಗಳು ಹೇಗೆ ಸತ್ಯವಾಗುವುವು? ಆದುದರಿಂದ ನಾವೆಲ್ಲಾ ಒಂದೇ ಪರಮಾತ್ಮನ ಅಂಶಗಳೆಂದು ಜನರಲ್ಲಿ ಬೋಧಿಸಿ ಅವರ ಬೇದಭಾವನೆಯ ಅಜ್ಞಾನವನ್ನು ಹೋಗಲಾಡಿಸಿ ನಮ್ಮೊಳಗೆ ಐಕ್ಯಮತ್ಯವನ್ನು ತರುವುದೇ ವೇದಾಂತವು.

ಹಿಂದೂ ಸನಾತನಧರ್ಮದಲ್ಲಿ ಪ್ರತ್ಯೇಕತಾ ಭಾವನೆಯೇ ಇರುವುದಿಲ್ಲ. ವಿಶ್ವದ ಸರ್ವ ಚರಾಚರಗಳು ನಮ್ಮೊಡನೆ ಹುಟ್ಟಿದವುಗಳು. ಅವುಗಳನ್ನೆಲ್ಲಾ ನಮ್ಮ ಸಹೋದರ ಭಾವನೆಯಿಂದ ಅರಿತು ಮನುಷ್ಯ ಜನ್ಮವನ್ನು ತಾಳಿದ ನಾವು ಅವುಗಳ ಸುಖಶಾಂತಿಗಾಗಿ ದುಡಿಯಬೇಕು. ದೇಶ ಭೇದದಿಂದ ಮತಭೇದದಿಂದ ಬಂದ ಭಾವನೆಯನ್ನು ಕಟ್ಟಿಕೊಂಡು ಜಗಳಾಡುವುದು ಮೂರ್ಖತನ. ನಮಗೆ ನಮ್ಮ ಪ್ರಾರಬ್ಧದಿಂದ ಬಂದ ಕರ್ಮಗಳನ್ನು ಕರ್ತವ್ಯತಾ ದೃಷ್ಟಿಯಿಂದ ನಿಷ್ಠೆ ಮತ್ತು ಶ್ರದ್ಧೆಯಿಂದ ಫಲಾಪೇಕ್ಷೆ ಇಲ್ಲದೆ ಮಾಡಬೇಕು. ಹೀಗೆ ಮಾಡುತ್ತಾ ಬಂದಲ್ಲಿ ಅವನಿಗೆ ಪ್ರಾಣಿಗಳಲ್ಲೂ ಪರಮಾತ್ಮನಲ್ಲೂ ಭಕ್ತಿ ಉಂಟಾಗಿ ಅವನು ಕ್ರಮೇಣ ಆತ್ಮಜ್ಞಾನದ ಸಾಮಿಪ್ಯವನ್ನು ಹೊಂದುತ್ತಾನೆ. ಆ ಮೇಲೆ ಅವನಿಗೆ ಅದೇ ಜ್ಞಾನದಿಂದ ತನ್ನ ಸ್ವರೂಪ ಜ್ಞಾನವು ಉಂಟಾಗಿ ತಾನೇ ಸರ್ವವ್ಯಾಪಕವಾದ ತ್ರಿಗುಣಾತೀತ, ಪ್ರಜ್ಞಾನ ಘನ ಸಚ್ಚಿದಾನಂದ ವಸ್ತುವೆಂದು ಅರಿತುಕೊಂಡು ತನ್ನ ನಾಮರೂಪಕವಾದ ಜಡಶರೀರವು ಸಚ್ಚಿದಾನಂದರೂಪನಾದ ತನ್ನ ವಿಕಾರವೆಂದು ಅರಿತು ತನ್ನಲ್ಲಿ ತಾನೇ ಆತ್ಮರಾಮನಾಗಿ ಆನಂದಿಸುತ್ತಾನೆ. ಆಗ ಅವನು ತನ್ನ ಕಲ್ಪಿತಶರೀರಕ್ಕೆ ಬರುವ ಸುಖ ದುಃಖಗಳು ತನಗಿಲ್ಲ ವೆಂದು ತಿಳಿದು ಅವುಗಳನ್ನು ಸ್ವಪ್ನದಂತೆ ಭಾವಿಸಿ ಅದರ ಅನುಭವವನ್ನು ಅನುಭವಿಸುವುದಿಲ್ಲ. ಆವನ ಪ್ರಾರಾಬ್ಧದಿಂದ ಬಂದ ಶರೀರಕ್ಕೆ ಸಿಕ್ಕುವ ಪ್ರತಿಫಲಗಳನ್ನು ತನ್ನ ಪಾಲಿಗೆ ಬಂದ ಪಂಚಾಮೃತವೆಂದು ಕುಗ್ಗದೆಯೂ ಹಿಗ್ಗದೆಯೂ ಶಾಂತಿಯಿಂದ ಅನುಭವಿಸಿ ಅಂತ್ಯಕ್ಕೆ ಪ್ರಾರಬ್ಧ ಕರ್ಮದ ಜಡಶರೀರವನ್ನು ಬಿಟ್ಟು ತಾನು ಯಾವ ಒಂದು ಕರ್ಮಬಂಧನಗಳಿಗೆ ಸಿಕ್ಕದೆ ಸ್ವಯಂ ಪ್ರಕಾಶನಾಗಿ ಮುಕ್ತನಾಗುತ್ತಾನೆ. ಈ ರೀತಿಯ ಅದ್ವೈತ ಭಾವನೆಯ ಮಾನವ ಧರ್ಮವೇ ಹಿಂದೂ ಸನಾತನಧರ್ಮವು.

ಈ ಸನಾತನ ಹಿಂದೂ ಧರ್ಮವು ಮುಂದಕ್ಕೂ ಸ್ಥಾಯಿಯಾಗಿ ನಿಲ್ಲುವಂತೆ ಅದನ್ನು ಜನರು ಅಜ್ಞಾನದಿಂದ ಮರೆತು ಬೇಧವಾದಿಗಳಾದಾಗ

ಅವರಿಗೆ ಅಭೇದವನ್ನು ಸಾರುವ ಅದ್ವೈತ ತತ್ವವನ್ನು ಬೋಧಿಸಿ ಅವರಲ್ಲಿ ಪುನಃ ಐಕ್ಯಮತ್ಯವನ್ನು ಉಂಟುಮಾಡುವುದಕ್ಕಾಗಿಯೂ ಆದಿ ಶಂಕರರು ನಮ್ಮ ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನೂ ಮತ್ತು ಅತಿ ದಕ್ಷಿಣದ ಕಾಂಚಿಯಲ್ಲಿ ಐದನೇ ಮಠವನ್ನು ಕೂಡ ಸ್ಥಾಪಿಸಿ ಅವುಗಳಲ್ಲಿ ಅವರ ಶಿಷ್ಯರುಗಳನ್ನು ಇರಿಸಿ ತಮ್ಮ ಉದ್ದೇಶವು ನೆರವೇರುವಂತೆ ಮಾಡಿದರು. ಅವುಗಳಲ್ಲಿ ಮೊದಲನೇದಾದ ಶ್ರೀ ಶೃಂಗೇರಿಮಠವು ಅವರ ಪ್ರಥಮ ಶಿಷ್ಯರಾದ ಸುರೇಶ್ವರಾಚಾರ್ಯರಿಂದ ಪ್ರಾರಂಭಿಸಲ್ಪಟ್ಟು ಜ್ಞಾನದಾತೆಯಾದ ಶಾರದಾಪೀಠವಾಗಿ ರಾರಾಜಿಸಿತು. ಈ ಮಠಗಳಲ್ಲಿ ಇಂದಿನವರೇಗೆ ಅವಿಚ್ಛಿನ್ನವಾಗಿ ಬಂದ ಆಚಾರ್ಯ ಪರಂಪರೆಯು ತನ್ನ ಕರ್ತವ್ಯಗಳನ್ನು ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡಿಕೊಂಡು ಬಂದದ್ದು ಸ್ತುತ್ಯಾರ್ಹವಾಗಿದೆ.

ಒಂದು ಸಲ ಅಳಿದುಹೋದ ಕರ್ನಾಟಕ ರಾಜ್ಯವು ಶ್ರೀ ವಿದ್ಯಾರಣ್ಯ ಕಾಲದಲ್ಲಿ ಅವರ ತಪೋಬಲದಿಂದ ಪುನಃ ವಿಜಯನಗರವೆಂಬ ಹೆಸರಿನಿಂದ ಪ್ರಖ್ಯಾತಿಗೆ ಬಂತು. ಪುನಃ ಕೆಲವು ಕಾಲದನಂತರ ವಿಜಯನಗರದ ಹೆಸರು ಅಳಿದು ಹೋದರೂ ಕರ್ನಾಟಕವನ್ನು ಆಳಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಮುಸಲ್ಮಾನರಾದರೂ ಅವರ ಅದ್ವೈತತತ್ವದ ಏಕತಾಭಾವನೆಗೆ ಮನ ಒಲಿದು ಶ್ರೀ ಶೃಂಗೇರಿಮಠದ ಜಗದ್ಗುರು ಭಾವನೆಯನ್ನು ಬಿಡಲಿಲ್ಲ. ಅಲ್ಲದೆ ಆಮೇಲಿನ ಮೈಸೂರು ರಾಜರುಗಳೂ ಕೂಡ ಅವರ ರಾಜತನ ಅಂತ್ಯವಾಗುವ ವರೆಗೂ ಶ್ರೀ ಶೃಂಗೇರಿಮಠದ ಗುರುತ್ವವನ್ನು ಬಿಡದೆ ಶ್ರೀ ಜಗದ್ಗುರುಗಳ ಆದೇಶದಂತೆ ಶ್ರೀ ಶಾರದಾ ಚಂದ್ರಮೌಳೀಶ್ವರರ ಆದೇಶವನ್ನು ಪಡೆದೇ ಧರ್ಮದಿಂದ ರಾಜ್ಯವನ್ನು ಆಳಿ ಕೀರ್ತಿಗೊಂಡರು.

ಟಿಪ್ಪುಸುಲ್ತಾನನಿಗೆ ಅದ್ವೈತವನ್ನು ಸಾರುವ ಶ್ರೀ ಶೃಂಗೇರಿ ಮಠದ ಮೇಲೆ ಎಷ್ಟು ಗೌರವವಿತ್ತೆಂದು ಆಗಿನ ಶೃಂಗೇರಿಮಠದ ಯತಿಗಳಿಗೆ ಅವನು ಆಗ ಬರೆದ ಪತ್ರಗಳಲ್ಲೊಂದನ್ನು ಈ ಕೆಳಗೆ ಕೊಟ್ಟಿರುತ್ತೇನೆ. ಪತ್ರ 65–ಲೇಖನ ರಾಕ್ಷಸ ಕ್ರಿ.ಶ. 1795–96, ಶ್ರೀ ಮತ್ಪರಮಹಂಸೇತಿ ಯಥೋಕ್ತ ಬಿರುದಾಂಕಿತರಾದಂಥ ಶೃಂಗೇರಿ ಸಚ್ಚಿದಾನಂದ ಭಾರತಿ ಸ್ವಾಮಿಗಳವರಿಗೆ ಟಿಪ್ಪುಸುಲ್ತಾನ ಬಾದಶಹರವರ ಸಲಾಂ ॥

ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರ ತಿಳಿಯಿತು. ಸ್ಥಳಕ್ಕೆ ಬಂದು ಸೇರುವುದಾಗಿ ಬರೆದು ಇದ್ದುದು ಸರಿಯಷ್ಟೆ. ಒಳ್ಳೆಯದಾಯಿತು. ದೇವರ ಮುಂದೆ ತ್ರಿಕಾಲನಿಷ್ಟೆಯಿಂದ ಈಶ್ವರ ಧ್ಯಾನಮಾಡುವಲ್ಲಿ ನಮ್ಮ ಮೇಲೆ ಪರಾಂಬರಿಕೆ ಇಟ್ಟು ಸರ್ವಥಾ ಈಶ್ವರ ಜಯಕೊಡಲಿ ಎಂದು ಧ್ಯಾನಮಾಡುತ್ತ ಇರುವುದಾಗಿ ಮುಲ್ಲಾಪಂಡಿತ ನರಸಿಂಹ ಶಾಸ್ತ್ರೀ ಸಹ ಅಲ್ಲಿನ ವಿವರ ಶ್ರುತಮಾಡಿದ್ದರಿಂದ ತಿಳಿಯಿತು. ನಮ್ಮ ಮನಸಿನಲ್ಲಿ ಮೂರು ಬಲದ ಮೇಲೆ ಅಹಂಕಾರ ಇದೆ. ಅದು ಏನು ಎಂದರೆ—**ಮೊದಲು ಈಶ್ವರ ದಯಾಪೂರ್ಣವಾಗಿರುವುದು ಒಂದು, ಎರಡನೆದು ನಿಮ್ಮಂಥ ಗುರುಗಳ ಆಶೀರ್ವಾದ ಇರುವುದು ಒಂದು, ಮೂರನೆಯದು ಆಯುಧಗಳಿರುವುದು ಒಂದು, ಈಮೂರರಲ್ಲಿ ಈಶ್ವರ ಜಯ ಕೊಡಬೇಕಾದರೆ ನಿಮ್ಮಂಥಹ ದೊಡ್ಡವರ ಆಶೀರ್ವಾದದಿಂದಲೇ ಜಯವಾಗಬೇಕು.** ನೀವು ಕಳುಹಿಸಿದ ಆನೆ; ಕುದುರೆ ನೋಡಿ ಕಳುಹಿಸಿ ಇದ್ದೀತು. ನಿಮ್ಮ ಮಠದಲ್ಲಿ ಬಹುಜನಕ್ಕೆ ಅನ್ನ ಕೊಡುತ್ತಾ ಇದ್ದೀರಿ. ನಿಮ್ಮ ಈ ಮೂಗು ಜೀವಕ್ಕೆ ಏನು ಕಡಿಮೆ ಆಗುತ್ತಾ ಇದೆ. ಮಠದಲ್ಲಿ ಇರತಕ್ಕದ್ದಾದ್ದರಿಂದ ಹಿಂದಕ್ಕೆ ಕಳುಹಿಸಿ ಇದ್ದೀತು. ಮಠದಲ್ಲಿ ಇರಿಸುವಂತೆ ಮಾಡುವುದು. ಈಗ ತಾವು ಧರಿಸುವ ಬಗ್ಗೆ ಜೋಡಿ ಒಂದು ಕಳುಹಿಸಿ ಇದ್ದೀತು ತೆಗೆದುಕೊಳ್ಳುವ ಹಾಗೆ ಮಾಡಿಸುವುದು. ಸ್ವಲ್ಪ ದಿವಸದಲ್ಲೆ ಖಾನ್ ಸವಾರಿ ಆ ಪ್ರಾಂತಕ್ಕೆ ಬರುತ್ತಾ ಇದ್ದೀತು. ಬಂದಲ್ಲಿ ಭೇಟಿ ಆದೀತು. ಕಡಿಮೆ ವಿವರವೆಲ್ಲಾ ಮುಲ್ಲಾಪಂಡಿತ ನರಸಿಂಹಶಾಸ್ತ್ರೀ ಸಹ ಹೇಳಲಾಗಿ ತಿಳಿಯುತ್ತಾ ಇದೆ.

ತಾ. ೨೪ನೇ ಮಾಹೆ ತರಸ್ಕಲ್ ಷಾದ್ ಸನ್ ೧೨೨೩ ಮುಹಮ್ಮದ್ ರಾಕ್ಷಸ ಸಂವತ್ಸರದ ಜ್ಯೇಷ್ಠ ಬಹುಳ ಆರಲ್ಲು.

ಇದರಿಂದ ತಿಳಿಯಬಹುದೇನೆಂದರೆ ಶ್ರೀ ಆದಿಶಂಕರಾಚಾರ್ಯರ ಅದ್ವೈತ ತತ್ವವು ಹಿಂದೂ ಸನಾತನಧರ್ಮದ ತಿರುಳು ಎಂದೂ ತನ್ಮೂಲಕ ಜಗತ್ತಿನ ಸರ್ವಮತಪಂಥದ ಜನರೊಳಗಿನ ಭೇದಭಾವನೆಯನ್ನು ದೂರೀಕರಿಸಿ ಜನರೊಳಗೆ ಐಕ್ಯತೆಯನ್ನು ಸಾಧಿಸಬಹುದೆಂದೂ. ಭೇದಭಾವದಿಂದ ಮಾನವನು ತನ್ನ ಸ್ವಾರ್ಥಕ್ಕಾಗಿ ತನ್ನ ಕರ್ತವ್ಯವನ್ನು ಮರೆತು

ಅಹಂಕಾರವನ್ನು ಹೊಂದಿ ಸಂಸಾರದ ಕಷ್ಟ ಪರಂಪರೆಗಳನ್ನು ಅನುಭವಿಸುತ್ತಿರುವಾಗ ಈ ತತ್ವಬೋಧೆಯಿಂದ ಅವನಿಗೆ ಅವನ ನಿಜತ್ವವನ್ನು ತಿಳಿಸಿ ಅವನನ್ನು ಅವನ ಕರ್ತವ್ಯದ ಕಡೆಗೆ ತಿರುಗಿಸಿ ಅವನ ಕಲ್ಯಾಣವನ್ನು ಬಯಸುವುದು ಮಾತ್ರವಲ್ಲದೆ ಲೋಕ ಕಲ್ಯಾಣವನ್ನು ಕೂಡಾ ಸಾಧಿಸಬಹುದಾಗಿದೆ.

ರಜತಪೀಠ, ಕುಮಾರಾದ್ರಿಃ, ಕುಂಭಕಾಶೀ, ಧ್ವಜೇಶ್ವರಃ

ಕ್ರೋಢ. ಗೋಕರ್ಣ, ಮೂಕಾಂಬಾ, ಸಪ್ತೈತೇ ಮೋಕ್ಷದಾಯಕಃ॥ ಗಳೆಂಬ ಪರಶುರಾಮಸೃಷ್ಟಿಯ ಏಳು ಮೋಕ್ಷದಾಯಕ ಶೈವಕ್ಷೇತ್ರಗಳಲ್ಲಿ ಒಂದಾದ ರಜತಪೀಠವೆಂಬ ಈ ಉಡುಪಿಯು ಪ್ರಥಮ ಸ್ಥಾನವನ್ನು ಹೊಂದಿ ಶ್ರೇಷ್ಠತೆಯನ್ನು ಪಡೆದಿದೆ. ಶ್ರೀ ಆನಂದಗಿರಿ ಶಂಕರವಿಜಯದಲ್ಲಿಯೂ ಆದಿಶಂಕರರು ಕಾಂಚಿಯಲ್ಲಿ ಇದ್ದುಕೊಂಡು ಧರ್ಮಪ್ರಚಾರಕ್ಕೆ ಕಳುಹಿಸಲ್ಪಟ್ಟ ಅವರ ಶಿಷ್ಯರಾದ ಹಸ್ತಾಮಲಕಾಚಾರ್ಯರು ಉಡುಪಿಯನ್ನು ರಜತಪೀಠವೆಂದು ಸಂಭೋಧಿಸಿ ಈ ಉಡುಪಿಯಲ್ಲಿ ಶ್ರೀ ಕೃಷ್ಣ ಪ್ರತಿಮೆಯನ್ನು ಪ್ರತಿಷ್ಠಿಸಿದ ವಿಚಾರ ಈ ರೀತಿ ಉಲ್ಲೇಖಿಸಿದ್ದಾರೆ: "ರಜತ ಪೀಠಾಧಿಸ್ಥಲೇಷು ಶ್ರೀ ಕೃಷ್ಣ ದೇವತಾದಿ ಪ್ರತಿಮಾಂ ಕೃತ್ವಾ" ಎಂದು ಹೇಳಲ್ಪಟ್ಟದ್ದರಿಂದ ಈ ಉಡುಪಿ ಕ್ಷೇತ್ರವು ಮಾಧ್ವರ ಪ್ರವೇಶದ ಮುಂಚೆ ರಜತಪೀಠವೆಂಬ ಹೆಸರಿನಿಂದ ಮೆರೆಯುತ್ತಿತ್ತೆಂದೂ; ಶ್ರೀ ಹಸ್ತಾಮಲಕರಿಂದ ಪ್ರತಿಷ್ಠಿತವಾದ ಶ್ರೀ ಕೃಷ್ಣನ ಗುಡಿಯೊಂದು ಅಲ್ಲಿ ಇತ್ತೆಂದು ಅಲ್ಲಿ ಸ್ಪಷ್ಟವಾಗುತ್ತದೆ. ಈಗ ಇವರ ಮಾಧ್ವಮಠದಲ್ಲಿ ಶ್ರೀ ಕಡಗೋಲು ಕೃಷ್ಣನ ವಿಗ್ರಹದ ಹಿಂದೆ ಮೂಡು ಮುಖಮಾಡಿ ಪೂಜೆ ಇಲ್ಲದೆ ಇರುವ ಶ್ರೀ ವೇಣುಗೋಪಾಲಕೃಷ್ಣನ ಮೂರ್ತಿ ಅದೇ ಆಗಿರಬೇಕೆಂದು ನಿಶ್ಚೈಸಬೇಕಾಗುತ್ತದೆ.

ಆದಿಶಂಕರರ ಕಾಲದನಂತರ ಸಾಧಾರಣ ಒಂದೂಕಾಲು ಸಾವಿರ ಅಥವ ಸಾಧಾರಣ 600 ವರ್ಷಗಳು ಕಳೆದುಹೋದ ಮೇಲೆ ಶ್ರೀ ಮಧ್ವಾಚಾರ್ಯರ ನೂತನ ಮಾಧ್ವಮತವು ಜನರಲ್ಲಿ ಭೇದಭಾವ ಹುಟ್ಟಿಸಿ ಜನರಲ್ಲಿ ನೆಲೆಗೊಂಡಿದ್ದ ಹಿಂದೂಧರ್ಮದ ಐಕ್ಯತೆಯನ್ನು ಹೋಗಲಾಡಿಸಿ ಪುನಃ ಮತಸಂಬಂಧವಾದ ಜಗಳಗಳನ್ನು ಉಂಟುಮಾಡಿದ್ದು ನಮ್ಮ ಭಾರತಕ್ಕೆ ಒಂದು ದೊಡ್ಡ ಕಳಂಕವನ್ನೇ ತಂದಂತಾಗಿದೆ. ಈ ಮೇಲೆ ನಾನು

ವಿವರಿಸಿದ ಜಗತ್ತಿನ ಮಾನವ ಧರ್ಮಕ್ಕೆ ತಳಹದಿಯಾದ ವಿಶಾಲಬುದ್ಧಿಯನ್ನು ಸಾರುವ ವೇದೋಕ್ತ ಸನಾತನ ಹಿಂದೂ ಧರ್ಮಕ್ಕೆ ಅಪಚಾರ ಮಾಡಿದಂತಾಗಿದೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ದೇವಾಲಯಗಳು ಮತ್ತು ಅದರ ವಿಗ್ರಹಗಳು ಮುಸಲ್ಮಾನರಾದ ಹೈದರಾಲಿ ಟಿಪ್ಪುವಿನ ಕಾಲದಲ್ಲೂ ಕೂಡ ಅಪಘಾತಕ್ಕೆ ಈಡಾಗಲಿಲ್ಲ. ಆದರೆ ಈ ಮಾಧ್ವರ ಪ್ರವೇಶದ ನಂತರ ಇವರ ಮತಾಸಕ್ತಿಯಿಂದ ಮುಖ್ಯವಾಗಿ ಉಡುಪಿ ಮೊದಲಾದ ಜಿಲ್ಲೆಯ ಹೆಚ್ಚಿನ ಶಿವ ಸಂಬಂಧವಾದ ದೇವಾಲಯಗಳು, ಶಿವಲಿಂಗಗಳ ಒಡೆಯುವಿಕೆ, ವಿಗ್ರಹಗಳ ಪದಚ್ಯುತಿ, ಶೈವತತ್ವಕ್ಕೆ ವಿರೋಧವಾಗುವಂತೆ ನಡೆಸುವ ಅರ್ಚನಕ್ರಮ, ಶಿವಾಲಯಗಳಿಗೆ ವೈಷ್ಣವ ಸಂಬಂಧವಾದ ಹೆಸರಿಟ್ಟು ಅದಕ್ಕೆ ಸರಿಯಾಗಿ ಕಟ್ಟುಕತೆಗಳನ್ನು ಕಲ್ಪಿಸಿ ತಿಳುವಳಿಕೆ ಇಲ್ಲದ ಜನರನ್ನು ಆಕರ್ಷಿಸುವುದು, ಇತ್ಯಾದಿಗಳಿಂದ ಇಲ್ಲಿಯ ಶೈವಾಲಯಗಳೆಲ್ಲಾ ತಮ್ಮ ಅಸ್ತಿತ್ವವನ್ನು ಕಳಕೊಂಡಂತಾಗಿವೆ. ಈ ಮಾಧ್ವರು ತಮ್ಮ ಸಂಖ್ಯೆ ಮತ್ತು ಹಣದಲ್ಲಿ ಬಲಯುತರಾದುದರಿಂದ ಈ ದೇವಸ್ಥಾನಗಳಲ್ಲಿ ಆಗುತ್ತಿರುವ ಅಪಚಾರವನ್ನು ಕೇಳುವವರಿಲ್ಲವೆಂದಾಗಿದೆ. ಸರಕಾರವೂ ಕೂಡ ಈ ವಿಷಯದಲ್ಲಿ ಗಮನ ಕೊಡದೆ ಇರುವುದೂ ಈ ದೇವಾಲಯಗಳಿಗೆ ಇಂಥವರನ್ನೇ ಆಡಳಿತದಾರರನ್ನಾಗಿ ನೇಮಿಸುವುದೂ ವಿಶಾದನೀಯವಾಗಿದೆ. ಇವರು ಕ್ರೈಸ್ತ ಮಿಶನರಿಗಳಂತೆ ಮಾಧ್ವಸಿದ್ಧಾಂತವೆಂಬ ಸಿದ್ಧಾಂತವನ್ನು ಸಾರುವ ಅಖಿಲಭಾರತ ಮಾಧ್ವಮಹಾಮಂಡಲವನ್ನು ಸ್ಥಾಪಿಸಿ ದೇಶಸಂಚಾರ ಮಾಡುತ್ತಾ ತಪ್ತಮುದ್ರಾಧಾರಣೆಯಿಂದ (ಸುಟ್ಟು ಮುದ್ರೆ ಒತ್ತುವ) ಜನರನ್ನು ಶುದ್ಧಿಗೊಳಿಸಿ ತಮ್ಮ ಮತಕ್ಕೆ ಸೇರಿಸಿಕೊಂಡು ಅವರಿಂದ ಧನಸಂಗ್ರಹಿಸಿ ಜನರಿಗೆ ವೇದವಿರೋಧವಾದ ತಪ್ಪು ಭಾವನೆಗಳನ್ನು ಪ್ರಚೋದಿಸುವುದು ಇತ್ಯಾದಿಗಳಿಂದ ಇವರನ್ನು ಹಿಂದುಗಳೆಂದು ಹೇಳಲು ಕಷ್ಟವಾಗಬಹುದು. ಒಂದು ದೇವರ ಹೆಸರನ್ನು ಎತ್ತಿಹಿಡಿದು ಇತರ ಮತ ದೇವರುಗಳನ್ನು ದೂಷಿಸುವ ಯಾವ ಮತವೇ ಆಗಲಿ ಅದು ವೇದಬಾಹಿರವಾದುದು. ಈ ಕೆಳಗಿನ ಶ್ರೀ ದೇವೀಭಾಗವತದ ಶ್ಲೋಕದಿಂದ ಇವರೆಲ್ಲಾ ವೇದಬಾಹಿರರೆಂದು ವ್ಯಕ್ತವಾಗುತ್ತದೆ.

"ಕಾಮಾಚಾರಾಃ ಪಾಶುಪತಾಃ ತಥೈವ ಲೈಂಗಧಾರಿಣಃ। ತಪ್ತಮುದ್ರಾಂಕಿತಾಃ ಯೇಽಶ್ಚವೈಖಾನಸಮತಾನುಗಾಃ। ತೇಸರ್ವೇ ನಿರಯಂ

ಯಾಂತಿ ವೇದಮಾರ್ಗ ಬಹಿಷ್ಕೃತಾಃ ॥ [ದೇವೀ ಭಾಗವತ ೧೧ನೇ ಸ್ಕಂದ ಬ್ರಾಹ್ಮಣ ಧರ್ಮ ೧ನೇ ಅಧ್ಯಾಯ] ಈ ಉಕ್ತಿಯಲ್ಲಿ ತಪ್ತ ಮುದ್ರಾಧಾರಿಗಳಾದ ಮಾಧ್ವರು ಸೇರಿರುವರು. ಬ್ರಹ್ಮ ಬೇರೆ ಜೀವ ಬೇರೆ ಎಂದು ವಾದಿಸುವವವರಿಗೆ ತಾವೇ ಬ್ರಹ್ಮವೆಂಬ ಸ್ವರೂಪ ಜ್ಞಾನ ಬಾರದೆ ವ ದಿವಸಕ್ಕೆ ಒಂದು ಸಲವಾದರೂ ತನ್ನ ಆಕಾರವನ್ನು ಮರೆತು ತನ್ನ ನಿರಾಕಾರ ಸ್ವರೂಪನ್ನು ಧ್ಯಾನಿಸದೇ ಇದ್ದ ದ್ವೈತಿಯು ಬ್ರಾಹ್ಮಣ ನಾಗಲೂ ಸಾಧ್ಯವೇ? ತಾನು ಬ್ರಹ್ಮವಲ್ಲ ತಾನು ಜೀವನೆಂದು ತಿಳಿಯು ವವನಿಗೆ "ಬ್ರಹ್ಮಜ್ಞಾನೇತಿ ಬ್ರಾಹ್ಮಣಾಃ ॥ ಎಂಬ ಉಕ್ತಿಯಂತೆ ಅವನು ಬ್ರಾಹ್ಮಣನಾಗಲು ಸಾಧ್ಯವಿಲ್ಲ. ಬ್ರಾಹ್ಮಣ್ಯವು ನಾಮಗಳಿಂದ ಮುದ್ರೆ ಗಳಂದ, ವಿಭೂತಿ ಧಾರಣೆಯಿಂದ ಬರುವುದಲ್ಲ. ಬ್ರಹ್ಮಜ್ಞಾನದಿಂದ ಬರು ವುದೆಂಬುದನ್ನು ವೇದಗಳೂ ಉಪನಿಷತ್ತುಗಳೂ, ಗೀತೆ ಮೊದಲಾದವುಗಳು ನಮಗೆ ಉಪದೇಶಿಸುತ್ತವೆ. ಇವುಗಳಿಗೆ ಅಪಾರ್ಥವನ್ನು ಕಲ್ಪಿಸಿ ಬರೇ ಒಂದು ತಮ್ಮ ಮಾಧ್ವಮತದ ಮೇಲ್ಮೆಗಾಗಿ ತಮ್ಮ ಭೇದವಾದದಿಂದ ಜನರನ್ನು ತಪ್ಪುದಾರಿಗೆ ಎಳೆಯುವುದು ಧರ್ಮದ್ರೋಹವಾಗಿದೆ.

ಈ ಕನ್ನಡ ಜಿಲ್ಲೆಯಲ್ಲಿ ಈ ಮಾಧ್ವರು ತಮ್ಮ ತತ್ವಕ್ಕೆ ಏನೂ ಸಂಬಂದ ಪಡದ ಶೈವಾಲಯಗಳಲ್ಲಿ ತಾವು ದೇವಾಲಯದ ಅನಾದಿ ಅರ್ಚಕ ರೆಂದು ಹೇಳಿಕೊಂಡು ಆ ದೇವಾಲಯಗಳ ಸೊತ್ತನ್ನು ತಮ್ಮ ಸ್ವಾರ್ಥ ಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವುದು ಹೇಯಾಸ್ಪದ. ಅದರಲ್ಲೂ ಈ ಪುರಾತನವಾದ ಈ ಶೈವಕ್ಷೇತ್ರವಾದ ಈ ಉಡುಪಿಯಲ್ಲಿ ಇವರ ಪ್ರವೇಶದ ನಂತರ ಇಲ್ಲಿಯ ಪೂರ್ವಿಕರಾದ ಸ್ಮಾರ್ತಶೈವ ಬ್ರಾಹ್ಮಣರಿಗೂ, ದೇವಾ ಲಯಗಳಿಗೂ ಮಾಡಿರುವ ಅಪಚಾರವು ಹೇಳಲಸಾಧ್ಯವಾಗಿದೆ. ಇವರ ಕೃಷ್ಣಮಠವನ್ನು ಬಲಾತ್ಕಾರದಿಂದ ಕಟ್ಟಿಸುವ ಕಾಲದಲ್ಲಿ, ಆ ಸ್ಥಳದಮೂಲ ಪುರುಷರಾದ ನಿಟ್ಟೂರಿನ ಸ್ಥಾನಿಕರಿಗೂ ಇವರಿಗೂ ನಡೆದ ಹೋರಾಟದ ಸಮಯ ಇವರ ಮಠವಿರುವ ಸ್ಥಳದಲ್ಲಿ ಇಕ್ಕಡೆಗಳಲ್ಲೂ ಎಷ್ಟೋ ಜನರ ಮರ ಣವು ಸಂಭವಿಸಿತ್ತೆಂದು ಹೇಳಲು ವ್ಯಸನವಾಗುತ್ತದೆ.

ಈಗ ಇಲ್ಲಿ ಇವರ ಮಠದ ಕೃಷ್ಣನಿಗೆ ಬರುವ ಉತ್ಪತ್ತಿ ಮತ್ತು ಹಣ ಶ್ರೀ ಅನಂತೇಶ್ವರ ಚಂದ್ರಮೌಳೀಶ್ವರರಿಗೆ ಬರುವ ಕಾಣಿಕೆ ಹಣ ಮತ್ತು ಅದರ ಆಡಳಿತೆಗಾಗಿ ಮಠ ಮಠಗಳೊಳಗೆ ಜಗಳಾಡುತ್ತಾ ತಮ್ಮ

ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರುವುದು ವ್ಯಸನಾಸ್ಪದವಾಗಿದೆ. ಈ ಮತಗಳ ಸತ್ಯಾಂಶಗಳನ್ನು ತಿಳಿದುಕೊಳ್ಳದೆ ಕೇವಲವಾದ ಮತಭೇದಗಳನ್ನು ತೊಡೆದುಹಾಕಬೇಕೆಂದು ಸಾರಲ್ಪಡುವ ಈ ಇಪ್ಪತ್ತನೇ ಶತಮಾನದ ಅಂತ್ಯದಲ್ಲಿಯೂ ಇತರ ಅನೇಕರು ಇವರಿಗೆ ಬೆಂಬಲಕೊಡುತ್ತಿರುವುದು ಕೂಡ ಶೋಚನೀಯವಾಗಿದೆ.

ಪರಮಾತ್ಮನು ಅವಿಕಾರಿಯೂ ಅವಿನಾಶಿಯೂ ಆಗಿರುವುದರಿಂದ ರೂಪನಾಮಗಳು ಅವನಿಗೆ ಕಲ್ಪಿತವಾಗಿವೆ. ಆದರೂ ನಾವು ಪ್ರಾಪಂಚಿಕ ಸತ್ತೆಯಲ್ಲಿ ಇರುವಾಗ ಆಯಾಯ ಅಭಿಮಾನಿ ದೇವತೆಗಳನ್ನು ಆಯಾಯ ದೇವತಾಭಿಮಾನಿಗಳು ಅರ್ಚಿಸುವುದು ಧರ್ಮಸಮ್ಮತ. ಸರಕಾರವು ಒಂದೇ ಆಗಿದ್ದರೂ ನ್ಯಾಯಾಂಗದವರು ಆಡಳಿತೆವರ್ಗದಲ್ಲೂ, ಆಡಳಿತೆವರ್ಗದವರು ನ್ಯಾಯಾಂಗದಲ್ಲೂ ಕೆಲ್ಸಮಾಡಿದರೆ ಸರಿಯಾದೀತೆ? ಸರ್ವವ್ಯಾಪಕನಾದ ಪರಮಾತ್ಮನು ಒಬ್ಬನೇ ಆದರೂ ಅವನ ಅಂಶಗಳಾದ ಶಿವ, ವಿಷ್ಣು, ದುರ್ಗಾ ಇತ್ಯಾದಿ ದೇವತೆಗಳಿಗೆ ಆಯಾಯಾ ಆಗಮೋಕ್ತ ಪ್ರಕಾರ ಸಮಯವರಿತು ಪೂಜೆ ಸಲ್ಲಿಸಿದರೇನೇ ಅಲ್ಲಿಯ ಮಹಿಮೆಯು ಹೆಚ್ಚಾಗುವುದಲ್ಲದೆ ಹಣದ ಆಶೆಗಾಗಿ ತಮಗೆ ಸಂಬಂಧಪಡದ ದೇವಸ್ಥಾನಗಳಲ್ಲಿ ಅರಿವಿಲ್ಲದ ಜನರಿಗೆ ತಾವು ಅರ್ಚಕರೆಂದು ತೋರಿಸಿಕೊಂಡು ವಿಧಿತಪ್ಪಿ ಯದ್ವಾತದ್ವಾ ಮಾಡಿ ಜನರನ್ನು ನಂಬಿಸಿ ಕೆಲಸಮಾಡುವುದು ದೇವಳದ ಪ್ರತಿಷ್ಠೆಗೆ ಕುಂದು ತಂದಂತಾಗುತ್ತದೆಯಲ್ಲವೆ? ಆದುದರಿಂದ ಈ ವಿಷಯಗಳನ್ನು ಸರಕಾರದಿಂದ ನೇಮಿಸಲ್ಪಟ್ಟ ಧರ್ಮದರ್ಶಿಗಳು ಕನ್ನಡಜಿಲ್ಲೆಯ ಆಯಾಯ ದೇವಳಗಳ ಈ ರೀತಿಯ ಕುಂದುಕೊರತೆಗಳನ್ನು ಸರಕಾರದ ಗಮನಕ್ಕೆ ತಂದು ಆಯಾಯ ದೇವತೆಗಳಿಗೆ ಅವುಗಳಿಗೆ ಸಂಬಂದಪಟ್ಟ ಆಗಮೋಕ್ತ ಪ್ರಕಾರ ಅರ್ಚನೆಯನ್ನು ನಡೆಸುವ ವ್ಯವಸ್ಥೆಯನ್ನು ಮಾಡಿಸುವುದು ಅವಶ್ಯವಾಗಿದೆ. ಅಲ್ಲದೆ ಸರಕಾರದವರು ಧರ್ಮದರ್ಶಿಗಳನ್ನು ನೇಮಿಸುವಾಗ ಆಯಾಯ ದೇವತೆಗಳ ಹಿತಚಿಂತಕರಾದ ಅವುಗಳ ಭಜಕರನ್ನೇ ಧರ್ಮದರ್ಶಿಗಳನ್ನಾಗಿ ನೇಮಿಸಿ ದೇವಸ್ಥಾನಗಳ ನೈತಿಕ ಮತ್ತು ಧಾರ್ಮಿಕ ಮಟ್ಟವನ್ನು ಕಾಪಾಡುವುದು ಅತ್ಯವಶ್ಯವಾಗಿದೆ.

ಶ್ರೀ ಅನಂದಗಿರಿ ವಿರಚಿತ ಶಂಕರವಿಜಯದಲ್ಲಿ ಉಡುಪಿಯ ಶ್ರೀ ಕೃಷ್ಣದೇವರು:—

ಶ್ರೀ ಶಂಕರವಿಜಯ ಆನಂದಗಿರಿ ವಿರಚಿತ ಕಲಿಕತ್ತಾ ನಗರ್ಯಾಂ ಸಾರಸುಧಾ ನಿಧಿಯಂತ್ರಣಾಲಯೆ ಮುದ್ರಿತಂ ಕ್ರಿ.ಶ. 1881.

ಇದರಲ್ಲಿ ಪುಟಸಂಖ್ಯೆ 206.

ಶ್ರೀ ಆದಿಶಂಕರರ ಶಿಷ್ಯರಾದ ಹಸ್ತಾಮಲಕಾಚಾರ್ಯರು ಸ್ಮಾರ್ತ ತತ್ವಕ್ಕನುಗುಣವಾಗಿ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದ ಉಲ್ಲೇಖ ವಿದೆ. ಅವರು ಪಶ್ಚಿಮ ಕರಾವಳಿಯಲ್ಲಿ ಸಂಚರಿಸಿ ಉಡುಪಿಗೆ ಬಂದಿರುವ ರೆಂದೂ ಅಲ್ಲಿ ಶ್ರಿ ಕೃಷ್ಣ ವಿಗ್ರಹವನ್ನು ಪ್ರತಿಷ್ಟಿಸಿದರೆಂದೂ ಪಂಚಮುದ್ರಾಂ ಕಿತ ಅಷ್ಟಾಕ್ಷರೀ ಜಪಾಸಕ್ತರಾದ ಕೆಲವು ಬ್ರಾಹ್ಮಣರನ್ನು ಅಲ್ಲಿ ಮಾಡಿದ ರೆಂದೂ ಆ ಮೇಲೆ ಕಾಂಚಿಯಲ್ಲಿ ಆಗ ಇದ್ದ ತನ್ನ ಗುರುಗಳಲ್ಲಿ ತಾನು ಮಾಡಿದ ವಿಚಾರವನ್ನು ತಿಳಿಸಿದರೆಂದೂ ಹೇಳಲ್ಪಟ್ಟಿದೆ—ಅದು ಹೀಗಿದೆ:

"ಹಸ್ತಾಮಲಕಸ್ತು ಭೂಮಧ್ಯಾತ್ ಪಶ್ಚಿಮ ಖಂಡ ದಿಗ್ವಿಜಯಂ ಕೃತ್ವಾ । ಪಂಚ ಮುದ್ರಾಂಕ ವಿರಾಜಿತಾನ್ । ಭಗವದಷ್ಟಾಕ್ಷರ ಮಂತ್ರ ಜಪಾಸಕ್ತಾನ್ । ಕಾಂಶ್ಚಿತ್ ಬ್ರಾಹ್ಮಣಾದೀನ್ ಕೃತ್ವಾ । ರಜತ ಪೀಠಾದಿ ಸ್ಥಲೇಷು ಕೃಷ್ಣಾದಿ ದೇವತಾ ಪ್ರತಿಮಾಂ ಕೃತ್ವಾ । ಮತಂ ವಿಜ್ಞಾಪಯಿ ತುಂ ಪುನಃ ಪರಮಗುರುಂ ಪ್ರಾಪ । ದೃಷ್ಟ್ವಾ ತದಾ ನೀಂ ಕಾಂಚ್ಯಾಂ ಪರಮಗುರುಂ ಶಂಕರಾಚಾರ್ಯಂ ನತ್ವಾ । ತತ್ ಪಾದಯುಗಳೆ ಸ್ವಕೃತಂ ವಿಜ್ಞಾಪಯಾಮಾಸ ॥ ಇದರಲ್ಲಿ "ಕೃಷ್ಣಾದಿ" ಎಂಬ ಶಬ್ದದಿಂದ ಈಗಿನ ಕಡಗೋಲು ಕೃಷ್ಣನ ಮಂದಿರದಲ್ಲಿ ಅಡಗಿ ಇರುವ ವೇಣುಗೋಪಾಲ ಮೂರ್ತಿಯನ್ನು ಮಾತ್ರ ಅಲ್ಲದೆ ಅದರ ಹತ್ತಿರವಿದ್ದ ಶ್ರೀ ಸುಬ್ರಹ್ಮಣ್ಯ ವಿಗ್ರಹವನ್ನು ಕೂಡ ಅವರೆ ಪ್ರತಿಷ್ಟಿಸಿರಬಹುದೆಂಬುದನ್ನು ತಿಳಿಯಬೇಕಾಗು ತ್ತದೆ. ಈಗಲೂ ಉಡುಪಿಯ ಆ ಕೃಷ್ಣನಿಗೆ ಹೊಸ್ತಾರೋಗಣೆ (ಹೊಸ ಅಕ್ಕಿ ಊಟ) ಒಂದು ದಿವಸ ಮೂಡು ಬಾಗಿಲನ್ನು ತೆರೆದು ಬತ್ತದ ತೆನೆ ಯನ್ನು ತಂದು ಅಲ್ಲಿ ಇಟ್ಟು ನಮಸ್ಕರಿಸಿ ಮತ್ತೆ ಅದನ್ನು ಉಪಯೋಗಿಸುವ ಕ್ರಮ ಇದೆಯೆಂದು ತಿಳಿದುಬರುತ್ತದೆ. ಆದುದರಿಂದ ನ್ಯಾಯವಾದ ಶ್ರೀ ವೇಣುಗೋಪಾಲ ಕೃಷ್ಣಮೂರ್ತಿಯು ಈಗಲೂ ಅಲ್ಲಿ ಮೂಡುಮುಖ

ವಾಗಿಯೇ ಇದೆ. ಅದು ವಾದಿರಾಜರ ಕಾಲಕ್ಕೆ ಮುಂಚೆ ಸಾರ್ವಜನಿಕ ಮಂದಿರವಾಗಿತ್ತೆಂದೂ ಗೃಹಸ್ಥಾಶ್ರಮಿಗಳ ಪೂಜೆ ಅದಕ್ಕೆ ಇತ್ತೆಂದೂ ನಿಶ್ಚಯಿಸಬಹುದಾಗಿದೆ.

ಉಡುಪಿಯಲ್ಲಿ ಗೋಕುಲಾಷ್ಟಮಿ

ಭಾರತದ ಆದ್ಯಂತ ಗೋಕುಲಾಷ್ಟಮಿಯನ್ನು ಶ್ರಾವಣ ಮಾಸದ ಬಹುಳ ಅಷ್ಟಮಿ ದಿವಸ ಆಚರಿಸುತ್ತಿರುವಾಗ ಉಡುಪಿ ಒಂದು ಸ್ಥಳದಲ್ಲಿ ಮಾತ್ರ ಅಲ್ಲಿಯ ಮಾಧ್ವರು ಕರ್ಕಾಟಕ ವರ್ಜ್ಯವೆಂದು ಕೆಲವುಸಲ ಮಹಾಲಯಪಕ್ಷ (ಪಿತೃಪಕ್ಷ)ದಲ್ಲಿ ಆಚರಿಸುತ್ತಿರುವುದು ಚೋದ್ಯವಾಗಿದೆ. ಉಡುಪಿ ಮಾಧ್ವರೇ ಆದ ಶ್ರೀ ಕೃಷ್ಣಾಚಾರ್ಯರ ಸ್ಮೃತಿ, ನಿರ್ಣಯಸಿಂಧು ಇತ್ಯಾದಿ ಧರ್ಮಗ್ರಂಥಗಳಲ್ಲಿ ಕೂಡ ಗೋಕುಲಾಷ್ಟಮಿ ವ್ರತಾಚರಣೆಗೆ ಕರ್ಕಾಟಕ ವರ್ಜ್ಯವೆಂದು ಹೇಳಿದ್ದು ಎಲ್ಲಿಯೂ ತಿಳಿದುಬರುವುದಿಲ್ಲ. ಹೀಗಿರುವಾಗ ಉಡುಪಿ ಮಾಧ್ವರು ತಾವು ಸೌರರೆಂದು ಹೇಳಿಕೊಂಡು ಧರ್ಮ ಸಮ್ಮತವಲ್ಲದ ಪಿತೃಗಳಿಗೆ ಪಿಂಡ ತಿಲೋದಕಗಳನ್ನು ಕೊಡುವ ಪಕ್ಷದಲ್ಲಿ ಗೋಕುಲಾಷ್ಟಮಿ ವ್ರತವನ್ನು ಹೇಗೆ ಆಚರಿಸುತ್ತಾರೆ? ತಿಳಿಯದು.

ಯಃ ಶಾಸ್ತ್ರವಿಧಿ ಮುತ್ಸೃಜ್ಯವರ್ತತೆ ಕಾಮಕಾರತಃ ।
ನಸ ಸಿದ್ಧಿಮವಾಪ್ನೋತಿ ನಸುಖಂ ನಪರಾಂಗತಿಂ ೨೩ ॥
ತಸ್ಮಾತ್ ಶಾಸ್ತ್ರಂ ಪ್ರಮಾಣಂತೆ ಕಾರ್ಯಕಾರ್ಯವ್ಯವಸ್ಥಿತೌ ॥
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ॥ ೨೪ ॥

ಅಂದರೆ:—ಯಾವಾತನು ಶಾಸ್ತ್ರವಿಹಿತ ಮಾರ್ಗವನ್ನು ಬಿಟ್ಟು ಸ್ವೇಚ್ಛಾನುಸಾರ ನಡೆಯುತ್ತಾನೋ ಅವನು ಜ್ಞಾನಸಿದ್ಧಿಯನ್ನೂ ಸುಖವನ್ನೂ ಪರಗತಿಯನ್ನೂ ಪಡೆಯಲಾರನು. ಆದುದರಿಂದ ಮಾಡತಕ್ಕ ಕರ್ತವ್ಯಗಳನ್ನು ಶಾಸ್ತ್ರಗಳನ್ನು ಪ್ರಮಾಣವನ್ನಾಗಿ ಇಟ್ಟುಕೊಂಡು ಕರ್ತವ್ಯವನ್ನು ಮಾಡು, ಈ ರೀತಿ ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕಗಳಲ್ಲಿ ಶ್ರೀ ಕೃಷ್ಣಪರಮಾತ್ಮನು ಬೋಧಿಸಿದ್ದನ್ನು ಉಡುಪಿಯ ಮಾಧ್ವರು ಶ್ರೀ ಕೃಷ್ಣನ ಪೂಜಕರಾಗಿದ್ದುಕೊಂಡು ಬಿಟ್ಟಿದ್ದನ್ನು ನೋಡುವಾಗ ವ್ಯಸನವಾಗುತ್ತದೆ. ಕರ್ಕಾಟಕ ಮಾಸದಲ್ಲಿ ಬರುವ ನಾಗರಪಂಚಮಿ, ವರಮಹಾಲಕ್ಷ್ಮೀವ್ರತ ಇತ್ಯಾದಿ ವ್ರತಗಳನ್ನು ಇವರು ಹೇಗೆ ಆಚರಿಸುತ್ತಾರೆ?

ಹೀಗಿರುವಾಗ ಶಾಸ್ತ್ರಸಮ್ಮತವಲ್ಲದ ಕಾಲದಲ್ಲಿ ಉಡುಪಿಯ ಮಾಧ್ವರು ಶ್ರೀ ಗೋಕುಲಾಷ್ಟಮೀ ವ್ರತವನ್ನು ಆಚರಿಸುವುದರಿಂದ ಶ್ರೀ ಕೃಷ್ಣನಿಗೆ ಉಪಚಾರ ಮಾಡುವ ಬದಲು ಅಪಚಾರ ಮಾಡುವಂತೆ ಆಗುತ್ತದೆ ಅಲ್ಲವೇ? ಈ ಅಪಚಾರವು ಇವರ ಮಠದಲ್ಲಿ ಅಡಗಿ ಕುಳಿತುಕೊಂಡ ಶ್ರೀ ವೇಣು ಗೋಪಾಲಕೃಷ್ಣ ಮೂರ್ತಿಗೋ ವಾ ಅವರ ಕಡೆಗೋಲು ಕೃಷ್ಣನಿಗೋ ತಿಳಿಯದು. ಇದರಿಂದಾಗಿ ಇವರು ನಿಜವಾಗಿ ಶ್ರೀ ಕೃಷ್ಣಭಕ್ತರು ಹೌದೋ, ಅಲ್ಲವೊ ಎಂಬ ಸಂದೇಹಕ್ಕೆ ಎಡೆಕೊಟ್ಟಂತಾಗುತ್ತದೆ.

ನಮ್ಮ ಜಿಲ್ಲೆಯ ಜನರು ಉಡುಪಿಯ ಮಾಧ್ವಮಠದವರ ಆಚರಣೆಯನ್ನು ಅನುಸರಿಸಿ ಸಾರ್ವಜನಿಕ ಗೋಕುಲಾಷ್ಟಮೀ ವ್ರತವನ್ನು ಆಚರಿಸಿದರೆ ಶಾಸ್ತ್ರಸಮ್ಮತವಲ್ಲದ ಕಾಲದಲ್ಲಿ ಆಚರಿಸುವುದರಿಂದ ಹಿಂದೂ ಸನಾತನ ಧರ್ಮಕ್ಕೇನೇ ಅಪಚಾರ ಮಾಡಿದಂತಾಗಿ ಜನತೆಯ ಕ್ಷೇಮಕ್ಕೆ ಪ್ರತಾಚರಣೆ ಮಾಡಿದಂತೆ ಆಗುವುದಿಲ್ಲ. ಹದಿನೈದು ಪರ್ವಕಾಲಗಳ ಹೆಸರುಗಳನ್ನು ಉಚ್ಚರಿಸುವಾಗ "ಅಷ್ಟಮೀ ಗೋಕುಲಾಷ್ಟಮೀ" ಎಂದು ಹೇಳುತ್ತಾರಲ್ಲದೆ, "ಉಡುಪಿ ಅಷ್ಟಮೀ" ಎಂದು ಯಾರೂ ಹೇಳುವುದಿಲ್ಲ. ಶ್ರೀ ಕೃಷ್ಣನು ಹುಟ್ಟಿಬೆಳೆದ ಗೋಕುಲ ವೃಂದಾವನಗಳಲ್ಲೂ ಕರ್ಕಾಟಕ ಮಾಸ(ಆಟಿ)ವರ್ಜ್ಯವೆಂದು ಶ್ರಾವಣ ಮಾಸದಲ್ಲಿ ಬಂದ ಕೃಷ್ಣಾಷ್ಟಮಿ ಜನ್ಮದಿನಾಚರಣೆಯನ್ನು ಬಿಡುವುದಿಲ್ಲ. ಗೋಕುಲದಲ್ಲಿ ಶಾಸ್ತ್ರವಿಹಿತವಾಗಿಯೇ ಆಚರಿಸುತ್ತಾರೆ. ಆದುದರಿಂದ ಜನತೆಯು ಗೋಕುಲಾಷ್ಟಮೀ ವ್ರತವೆಂದು ಹೆಸರುಳ್ಳ ಕೃಷ್ಣ ಜನ್ಮಾಷ್ಟಮೀ ವ್ರತವನ್ನು ಗೋಕುಲದಲ್ಲಿ ಆಚರಿಸುವುದೇ ನ್ಯಾಯ ಮತ್ತು ಶಾಸ್ತ್ರಸಮ್ಮತವೆಂದು ತಿಳಿದು ಶ್ರೀ ಕೃಷ್ಣಜನ್ಮಾಷ್ಟಮೀ ವ್ರತವನ್ನು ಆಚರಿಸುವುದು ಆಗತ್ಯ. ರೋಹಿಣೀ ನಕ್ಷತ್ರ ಕೂಡಿದ ಅಷ್ಟಮೀ ಸಿಂಹ ಮಾಸದಲ್ಲಿ ಬರುವುದು ಮೂರು ನಾಲ್ಕು ವರ್ಷಕ್ಕೊಮ್ಮೆ ಮಾತ್ರ ಎಂದು ಜನತೆಯು ತಿಳಿಯಬೇಕು.

ತಾ. 18—8—68ರ 'ಕನ್ನಡಪ್ರಭಾ'ದಲ್ಲಿ ಆಸ್ಥಾನ್‌ವಿದ್ವಾನ್ ತಿರು ಶ್ರೀನಿವಾಸ ಗೋಪಾಲ ಆಚಾರ್‌ರವರು ಪ್ರಕಟಿಸಿದ ಪ್ರಕಾರವೂ ಜನ್ಮ ನಕ್ಷತ್ರವನ್ನು ಹೊಂದಿಕೊಂಡು ಹೋಗುವುದಿದ್ದಲ್ಲಿ ಶ್ರಾವಣ ಮಾಸದ ರೋಹಿಣೀ ನಕ್ಷತ್ರದ ದಿವಸ ಶ್ರೀ ಕೃಷ್ಣಜಯಂತಿಯನ್ನು ಆಚರಿಸುವುದೇ ಸಮ್ಮತವಾಗಿದೆ ಎಂದೂ ಭಾದ್ರಪದ ಪಿತೃಪಕ್ಷದಲ್ಲಿ ಆಚರಿಸುವುದು ಗೌಣವು

ಎಂದು ಅವರ ಅಭಿಪ್ರಾಯ ಕಂಡುಬರುತ್ತದೆ. ಆದುದರಿಂದ ಶಾಸ್ತ್ರಸಮ್ಮತ ಜನ್ಮಾಷ್ಟಮಿ ವ್ರತವು ಶ್ರಾವಣದಲ್ಲಿಯೇ ಭಾರತ ಆದ್ಯಂತ ಆಚರಿಸುವ ಅಷ್ಟಮೀ ತಿಥಿಯನ್ನು ವ ರೋಹಿಣೀ ನಕ್ಷತ್ರವನ್ನು ಅನುಸರಿಸಿ ಆಗಲೀ ಮಾಡುವುದು ನ್ಯಾಯ ಸಮ್ಮತ. ವ್ರತ ತಿಥಿಗಳು ಚಾಂದ್ರಮಾನವನ್ನು ಅನುಸರಿಸಿಯೇ ಇರುವುವುಗಳು. ಸೌರದಲ್ಲಿ ಬರೆ ವಿಷು ಸಂಕ್ರಮಣ, ಮತ್ತು ಮಕರ ಸಂಕ್ರಮಣಗಳು ಮಾತ್ರ ಬರುವುವು. ಹಿಂದೂವಾದವನು ಚಾಂದ್ರ ವ್ರತಗಳನ್ನೂ ಸೌರವ್ರತಗಳನ್ನೂ ಆಚರಿಸಲೇಬೇಕು. ನಾವು ಚಾಂದ್ರರು, ನಾವು ಸೌರರು ಎಂಬ ಭೇದಭಾವವು ಭೇದವಾದ ಪ್ರತಿಪಾದಕರಾದ ಮಾಧ್ವರಲ್ಲೇ ಮೊದಲು ಉಂಟಾದುದು ಎಂದು ಇಲ್ಲಿ ನಂಬಬೇಕಾಗುತ್ತದೆ.

ಪರಿಶಿಷ್ಟ ಭಾಗ

ಈ ಉಡುಪಿ ಕ್ಷೇತ್ರದ ಚಾರಿತ್ರಿಕ ಹಿನ್ನೆಲೆಯನ್ನು ಬರೆಯುವಾಗ ಶ್ರೀ ಮಧ್ವಾಚಾರ್ಯರ ಮಾಧ್ವಮತವು ಉಡುಪಿಯಿಂದಲೇ ಹೊರಟದ್ದರಿಂದ ಸ್ವಲ್ಪಮಟ್ಟಿಗೆ ಅವರ ವಿಚಾರ ಇಲ್ಲಿ ಪ್ರಸ್ತಾಪಿಸಿದರೆ ಅಪ್ರಸ್ತುತವಾಗದೆಂದು ಇದರೊಂದಿಗೆ ಸ್ವಲ್ಪಮಟ್ಟಿಗೆ ವಿವರಿಸಿರುತ್ತೇನೆ. ಶ್ರೀ ಮಧ್ವಾಚಾರ್ಯರ ಜನ್ಮವು ಉಡುಪಿಯಿಂದ 7 ಮೈಲು ದೂರ ಇರುವ ಕುಂಜಾರುಗಿರಿ ಎಂಬಲ್ಲಿಗೆ ಹತ್ತಿರ ಇರುವ ಪಾಜಕ ಕ್ಷೇತ್ರವೆಂದು ಹೇಳಲ್ಪಡುವ ಸ್ಥಳದಲ್ಲಿ ಆಯಿತೆಂದೂ ಇವರ ಗುರುಗಳು ಶ್ರೀ ಅಚ್ಯುತಪ್ರೇಕ್ಷಕಾಚಾರ್ಯರೆಂದೂ ಇಲ್ಲಿಯ ಮಾಧ್ವರು ಹೇಳುತ್ತಾರೆ. ಇವರ ತಂದೆಯ ಹೆಸರು ಸಂಸ್ಕೃತದಲ್ಲಿ ಮಧ್ಯಗೇಹಭಟ್ಟರೆಂದೂ, ಕನ್ನಡದಲ್ಲಿ ನಡುಮನೆಯ ಭಟ್ಟರೆಂದೂ ಮತ್ತು ತುಳು ಭಾಷೆಯಲ್ಲಿ ವಡ್ಡಂತ್ತಿಲ್ಲಾಯರೆಂಬ ಹೆಸರುಗಳಿಂದ ನಿರೂಪಿಸಲ್ಪಟ್ಟಿರುವುದರಿಂದ ಇವರ ಸರಿಯಾದ ಹೆಸರು ಎಲ್ಲಿಯೂ ಸರಿಯಾಗಿ ತಿಳಿದುಬರುವುದಿಲ್ಲ ನಡುಮನೆಯ ಭಟ್ಟರಮಗ ಎಂದು ಹೇಳಿರುವುದರಿಂದ ಕೆಲವು ಮನೆಗಳಿದ್ದು ಅವುಗಳಲ್ಲಿ ಮಧ್ಯದ ಮನೆಯ ಭಟ್ಟರ ಮಗನೆಂದು ನಿರ್ಧರಿಸಬೇಕಾಗುತ್ತದೆ. ತಂದೆಯ ಹೆಸರನ್ನು ಸರಿಯಾಗಿ ನಿರೂಪಿಸದೇ ಇರುವುದರಿಂದ ಅವರಲ್ಲಿ ಏನೋ ವೈಶಿಷ್ಟ್ಯ ಇರಲು ಸಾಧ್ಯವಿದೆ.

ಶ್ರೀ ವ್ಯಾಸಕೃತ ಉಪ ಪುರಾಣಗಳಲ್ಲೊಂದಾದ ಸೌರಪುರಾಣದ 39 ಮತ್ತು 40ನೇ ಅಧ್ಯಾಯಗಳಲ್ಲಿ ನಿರೂಪಿಸಲ್ಪಟ್ಟ, ಕಲಿಪ್ರವೇಶ, ಪ್ರತರ್ದನ ಮಹಾರಾಜರಿಂದ ಪಾಲಿತ ಪ್ರಜೆಗಳ ಅವಸ್ಥಾವರ್ಣನ, ಪರಮ ಶಿವನ ವಿಚಾರದಲ್ಲಿ ಲಕ್ಷ್ಮೀನಾರಾಯಣರ ಸಂವಾದ, ಶ್ರೀ ಲಕ್ಷ್ಮೀನಾರಾಯಣರ ಕೈಲಾಸಾಗಮನ, ಶಿವಸುರರುಗಳ ಸಂವಾದ, ಶ್ರೀ ಮಧ್ವಾಚಾರ್ಯರನ್ನು ಅಧಿಕರಿಸಿದ ಬ್ರಾಹ್ಮಣರ ಭವಿಷ್ಯಕಥನ, ರತಿ ಮತ್ತು ವಸಂತರ ಸಂವಾದ, ಮನ್ಮಥನ ನಾಶದಿಂದಾಗಿ ಬ್ರಹ್ಮಮೋಹಾದಿಗಳ ಸಂವಾದ, ಮಧ್ವಾಚಾರ್ಯರನ್ನು ಉದ್ದೇಶಿಸಿ ಭವಿಷ್ಯವಿಚಾರ, ಮಧ್ವಾಚಾರ್ಯರು ತನ್ನ ಗುರುವಾದ ಶ್ರೀ ಪದ್ಮಪಾದುಕರಲ್ಲಿ ಮಾಡಿದ ಅಪರಾಧದ ವಿಚಾರ.

ಸೂತೌವಾಚ— ತತಃ ಕಲಿಯುಗೆ ಪ್ರಾಪ್ತೆ ಸರ್ವಧರ್ಮವಿವರ್ಜಿತೆ ।
ಮ್ಲೇಂಛ್ಯೆ ಬ್ರಾಹ್ಮಣಧೇನೂನಾಂ ವಿಧ್ವಂಸನಕರೆ ಖರೆ ॥ ೩೧ ॥
ಅಸ್ವಾಧ್ಯಾಯ ವ ಷಟ್ಕಾರೆ ಜೈನ ಬೌದ್ಧಾದಿಸಂಕುಲೆ |
ಬ್ರಾಹ್ಮಣೆ ಮ್ಲೇಂಛ ಮಾರ್ಗಸ್ಥೆ ಶೂದ್ರೈಬ್ರಾಹ್ಮಣ ಘಾತಿನೀ ॥ ೩೨ ॥
ತದಾ ವಸಂತಃ ಕರ್ಣಾಟೆ ತ್ರಿಲಿಂಗಾದಿಕ ದೂಷಕಃ ॥
ಮಧುನಾ ಮಾಚ ವಿಧವಾ, ಕ್ಷೇತ್ರೆ ವಿಪ್ರಾದ್ಭವಿಷ್ಯತಿ ॥ ೩೩ ॥
ಗೋಲಕಃ ಸತು ಪಾಪಿಷ್ಠ: ಪದ್ಮಪಾದುಕ ಮಾಶ್ರಿತಂ ॥
ವೇದಾಂತ ವ್ಯಾಖ್ಯಾನರತಂ ಶಿಷ್ಯತ್ವೇ ನಾರ್ಚಯಿಷ್ಯತಿ ॥ ೩೪ ॥
ಶಾಸ್ತ್ರಂಪೂರ್ಣ ತತೋಧೀತ್ಯ ಸ್ಥಿತಃ ಅಹ್ನೀಕ ವರ್ಜಿತಃ ॥
ಕಿಮಗ್ನಿ ಹೋತ್ರಂ ಕೊಯಾಗೊ ಹೇತು ಮೇವಂಕರಿಷ್ಯತಿ ॥ ೩೫ ॥
ಗುರು ರಾಕರ್ಣ್ಯ ತದ್ವಾಕ್ಯಂ ಬ್ರಾಹ್ಮಣೊ ನಭವೇದಯಂ ।
ಇತಿನಿಶ್ಚಿತ್ಯ ತಂ ದುಷ್ಟಂ ವಕ್ಷ್ಯತಿ ಶೃತತದ್ವಚಃ ॥ ೩೬ ॥
ಗುರುರುವಾಚ:-ಕೋವರ್ಣ ಸ್ತವಮೆಬ್ರೂಹಿ ಯಥಾರ್ಥಂ ವೇದದೂಷಕ ॥
ಕರ್ಮ ಬ್ರಹ್ಮೊಪ್ಯವದ್ವೇಷ್ಟಾನೋತ್ಪತ್ತಿ ಬ್ರಾಹ್ಮಣಾತ್ತವ ॥ ೩೭ ॥
ಮಧುರವಾಚ:-ಬ್ರಾಹ್ಮಣಾದಹ ಮುತ್ಪನ್ನೊ ಭ್ರಾಹ್ಮಣ್ಯಾಂಚ ನಸಂಶಯ:
ಸತ್ಯಂ ವದಾಮಿನೋವಿಥ್ಯಾ ಕಥಂ ಮಾಂಪಶ್ಯಸೇ ಗುರೊ ॥ ೩೮ ।
ಗುರುರುವಾಚ:-ತ್ವನ್ಮಾತಾ ಕೇನದತ್ತಾರೆ ಕಸ್ಯಪುತ್ರೀ ಕದಾಕಥಂ ॥
ಕಸ್ಮೈದತ್ತಾಚ ವಿಧಿನಾ ಕೇನತದ್ಬ್ರೂಹಿ ಮಾಚಿರಂ ॥ ೩೯ ॥

ಮಧುರುವಾಚ:–ವಿಧವಾ ಜನನೀನಾಥಬ್ರಹ್ಮಣೇನ ತಪಸ್ವಿನಾ ॥
ಗರ್ಭಿಣೀ ಸಮಭೂತ್ತಸ್ಮಾದಯಂ ದೇಹಸ್ತತೋಽಭವತ್ ॥ ೪೦ ||
ಇತ್ಯಾದಿ ಶ್ಲೋಕಗಳಿಂದ ತನ್ನ ದೇಹವು ವಿಧವೆಯಲ್ಲಿ ಉಂಟಾಯಿತೆಂದು ಗುರುಶಿಷ್ಯರೊಳಗೆ ನಡೆದ ಸಂವಾದದ ವಿಚಾರ. ಮಧ್ವಾಚಾರ್ಯರು ವೇದಕ್ಕೆ ವಿರೋಧವಾಗಿ ವರ್ತಿಸಿದ್ದರಿಂದ ಆ ವಿಷಯದಲ್ಲಿ:
ಗುರುರ ವಾಚ:—ಕಪಟೇನ ತತಃ ಶಾಸ್ತ್ರಂ ಮತ್ತೋಽಧೀತಂ ದುರಾತ್ಮನಾ ||
ತೇನ ಸಿದ್ಧಾಂತ ಮರ್ಯಾದ ಕದಾಚಿನ್ನಾ ಸ್ಫುರತ್ವಿಯಂ ॥ ೪೧ ||
ಮಧುರವಾಚ:—ಭವಿಷ್ಯತಿ ಮಹಾ ಭಾಗವಚನಂ ತವನಾನ್ಯಥಾ ॥
ಪೂರ್ವಪಕ್ಷೋಽಮಮಹೃದಿ ಪ್ರಾದುರ್ಭವತು ನಿಶ್ಚಲಃ ॥ ೪೨ ॥

ಅಂಧತಾ ತವಸಿದ್ಧಾಂತೆ ಪೂರ್ವ ಪಕ್ಷೆಚಪಾಟವಂ । ಭವತ್ವೇವ ಪರಂ ತ್ವೇಕಂ ಪಾಪಾಃ ಶಿಷ್ಯಾಃ ಭವಂತುತೆ || ೪೩ ॥ ಮೋಹಾತ್ ಸಿದ್ಧಾಂತ ರಹಿತಾಃ ಲೋಭಾತ್ತೆ ನೃಪ ಸೇವಕಾಃ । ಕ್ರೋಧಾತ್ ಕಠಿಣವಕ್ತಾರೊ ದಂಭಾ ಧ್ವೇಷೇಣ ಸುಂದರಾಃ|| ೪೪ ॥ ಹೇತುವಾದೇನಶಾಸ್ತ್ರಾಣಿ ಸರ್ವಾಣಿ ನವಿದಂತಿತೆ || ನಿರಯೇಷ್ವೇವ ಘೋರೆಷು, ಗಮಿಷ್ಯತ್ಯಚಿರಾತ್‌ಚಿರಂ ॥ ೪೫ ॥ ಎಂಬಿತ್ಯಾದಿ ಮಧ್ವಾಚಾರ್ಯರಿಗೆ ಸಿಕ್ಕಿದ ಗುರುಶಾಪ, ಕಲಿ ಮಹಿಮಾವರ್ಣದಲ್ಲಿ"ಪಾಪಿಷ್ಠಾ: ನೈವಮನ್ಯಂತೆ ವೇದಮಾರ್ಗಭಹಿಷ್ಕೃತಾಃ| ಆಚಾರ್ಯ ಮಧುನಾಮಾನಂ ವದಂತೋ ವಿಧವಾಸುತಂ ॥ ಪ್ರಚ್ಛನ್ನೋ ಸೌಮಹಾದುಷ್ಟಾಶ್ಚಾರ್ವಕೋ ಮಧುಸಂಜ್ಞಕಃ ॥ ಭವಿಷ್ಯತಿ ಕಲೌವಿಪ್ರಾಃ ಶಿವನಿಂದಾ ಪ್ರವರ್ತಕಾಃ । ಮೋಹಾತ್‌ಸಿದ್ಧಾಂತ ಬಾಹ್ಯತ್ವಂ, ಕ್ರೋಧಾತ್ ಶಾಸ್ತ್ರನಿಶೇಧನಂ ॥ ಲೋಭೇನ ನೃಪತೇ ಸೇವಾ ದಂಭಾದನ್ಯಪ್ರತಾರಣಂ ॥ ಗಣಿಕಾ ಪ್ಯೈಥುನಂ ಕಾಮಾದ್ಧೇತು ವಾದೇನ ವಾದಿತಾ ॥ ಭವಿಷ್ಯತಿ ಕಲೌ ವಿಪ್ರಾಃ ಷೋಡೊಯಂ ತತ್ಪವಾದಿನಾ: || "ಪಂಚವರ್ಷಂ ಯತಿಂ ಕೃತ್ವಾ ಕ್ರಮೇಣಾಽದಾಯಬಾಲಕಂ । ಮಾಠಾಪತ್ಯಂ ವಿಧಾಸ್ಯಂತಿ ದ್ರವ್ಯ ಲೋಭೇನ ನಾಸ್ತಿಕಾಃ ॥ ೬೪ ॥ ಪಾರಂಪರ್ಯಂ ಮಠಸ್ಯೈವ ರಕ್ಷಿಷ್ಯಂತ್ಯಭಿ ರಾಗಿಣಃ । ಭೋಗಾಸಕ್ತಾಶ್ಚ ಪಾಪಿಷ್ಠಾ: ದಾಸೀ ಗಮನ ಕಾರಿಣಃ ॥ ೬೫ ॥ ನಾಮ್ನಾ ಸನ್ಯಾಸಿನಸ್ತೀರ್ಥ ಯಾನಾರೂಡಾ: ಸಸೇವಕಾಃ ॥ ನರವಾಹನ ಮಾರೂಡಾಃ ಶಿಖಾಸೂತ್ರಭಹಿಷ್ಕೃತಾ: ॥೬೬॥ ತತ್ಪಕ್ಷಪಾತಿನೋ ಮೂಢಾ:

ಗೃಹಸ್ಥಾಃ ಶಿವನಿಂದಕಾಃ ॥ ಮಿಥ್ಯಾವೈಷ್ಣವ ಮಾನೇನ ಗ್ರಸ್ತಾ ನಿರಯ ಗಾಮಿನಃ ||೬೭|| ವೈಷ್ಣವಾಃ ವೇಷಮಾತ್ರೇಣ ತಂತು ಮಾತ್ರೇಣ ಬಾಡವಾಃ ವಾದಿನಃ ಕ್ರೋಧ ಮಾತ್ರೇಣ ವಿದ್ವಾಂಸೋ ಹೇತುವಾದತಃ॥೬೮॥ಪಠಿಷ್ಯಂತಿ ಚಶಾಸ್ತ್ರಾಣಿ ಕೇಚಿತ್ ದೂಷಣಸಿದ್ಧಯೆ ॥ ಸ್ವಕೀಯಂ ಗೋಪನಿಯಂತಿ ಪರಕೀಯೇನ ಪಂಡಿತಾಃ || ೬೯ ॥ ಇತ್ಯಾದಿ ಶ್ಲೋಕಗಳಲ್ಲಿ ವರ್ಣಿಸಲ್ಪಟ್ಟ ಪ್ರಕಾರದ ಬ್ರಾಹ್ಮಣರ ಉತ್ಪತ್ತಿ ಮತ್ತು ರತಿಗೆ ವಸಂತ ಮೋಹಾದಯರು ಗಳಿಂದ ಕೊಡಲ್ಪಟ್ಟ ಆಶ್ವಾಸನೆ, ಇತ್ಯಾದಿಗಳಿಂದ ವಿವರಿಸಲ್ಪಟ್ಟ ಪ್ರಕಾರ ಶ್ರೀ ಮಧ್ವಾಚಾರ್ಯರ ಅವತಾರವು ಯಾವಾಗ ಹೇಗೆ ಎಲ್ಲಿ ಇತ್ಯಾದಿ ವಿವರಗಳು ವಿಶದೀಕರಿಸಲ್ಪಟ್ಟಿವೆ. ಅದರಲ್ಲಿ ವಿವರಿಸಿರುವ ವಿಷಯಗಳನ್ನೂ ಉಡುಪಿಯ ಮಾಧ್ವರ ಕ್ರಮನಡತೆಗಳನ್ನೂ ಅವರ ಮತಾಸಕ್ತಿ ಇತರ ಮತದ್ವೇಷ ಇತ್ಯಾದಿಗಳನ್ನು ತುಲನೆಮಾಡಿ ನೋಡಿದರೆ ಏಕರೀತಿಯಾಗಿ ಕಂಡು ಬರುತ್ತದೆ.

ಇದೇ ವಿಚಾರಗಳು ಸಹ್ಯಾದ್ರಿಖಂಡದ ಸನತ್ಕುಮಾರ ಸಂಹಿತೆಯ ಆರನೇ ಅಧ್ಯಾಯದಲ್ಲೂ "ಮಧು ನಾಸ್ನೂಭಿ ದಾನೇನ ವಿಶ್ವಸ್ತಾಯಾಂ ಕಲೌಯುಗೆ" ಎಂಬ ಪದದ ಅರ್ಥವೂ ಕೂಡಾ ಮೇಲಿನ ವಿವರಗಳಿಗೆ ಸಾಮ್ಯವನ್ನು ಕೊಡುತ್ತದೆ. ಅದೂ ಅಲ್ಲದೆ ಹದಿನೆಂಟು ಪುರಾಣಗಳಲ್ಲಿ ಒಂದಾದ ವ್ಯಾಸಕೃತ ದೇವೀಭಾಗವತದ 12ನೇ ಸ್ಕಂದದ 9ನೇ ಅಧ್ಯಾಯ ದಲ್ಲಿ ಗಾಯತ್ರೀ ಉಪಾಸಕರಾದ ಗೌತಮ ಮಹರ್ಷಿಗಳನ್ನು ಅವ ಮಾನಗೊಳಿಸಿದ ಬ್ರಾಹ್ಮಣರಿಗೆ "ವೇದ ಮಾತರಿ ಗಾಯತ್ರ್ಯಾಂ ತಧ್ಯಾನೆ ತನ್ಮನೋರ್ಜಪೆ | ಭವತಾನುನ್ಮುಖಾ ಯೂಯಂ ಸರ್ವಥಾ ಬ್ರಾಹ್ಮಣ ಧಮಾಃ ॥ ೫೭ ॥ ವೇದೇವೇದೋಕ್ತ ಯಜ್ಞೇಷು ತದ್ವಾರ್ತಾಸು ತಥೈವಚ ॥ ಭವತಾನುನ್ಮುಖಾಃ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ॥ಶಿವೆಶಿವಸ್ಯ ಮಂತ್ರೆಚಾ ಶಿವಶಾಸ್ತ್ರೆ ತಥೈವಚ ॥ ಭವತಾ ನುನ್ಮುಖಾಃ ಯೂಯಂ ಸರ್ವಥಾ ಬ್ರಾಹ್ಮಣಾಧಮಾಃ || ೫೮ || ಎಂಬಿತ್ಯಾದಿ 22 ಶ್ಲೋಕ ಗಳಿಂದ ವಿವರಿಸಲ್ಪಟ್ಟ ಗೌತಮರ ಶಾಪದಿಂದಲೂ, ಅಂತ್ಯದಲ್ಲಿ "ತಪ್ತ ಮುದ್ರಾಂಕಿತಾಃ ಕೇಚಿತ್ ಕಾಮಾಚಾರಾಃ ರತಾಃಪರೆ ॥ ಎಂಬಿತ್ಯಾದಿ ಉಕ್ತಿಗಳಿಂದಲೂ ಗಾಯತ್ರೀವರ್ಜ್ಯರಾದ ಬ್ರಾಹ್ಮಣರ ಸಾಮ್ಯವೂ ಕೂಡ ಈ ಉಡುಪಿಮಾಧ್ವರಲ್ಲಿ ಏಕಸಾಮ್ಯವನ್ನು ಹೊಂದುತ್ತದೆ. ಅವರಿಗೆ ಅವರ

ಮತಾಸಕ್ತಿ ಮತ್ತು ಇತರ ಮತದ್ವೇಷ ಎಷ್ಟರಮಟ್ಟಿಗೆ ಇದೆ ಎಂಬುದೂ ಈ ಕೆಳಗಿನ ಅವರ ಈಗಿನ ವರ್ತನೆಗಳಿಂದಲೂ ವ್ಯಕ್ತವಾಗುತ್ತದೆ.

ಇದೇ ಕಳೆದ ತಾ. 11—2—68ನೇ 'ನವಭಾರತ' ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ಶ್ರೀ ಮಧ್ವರಾದ್ಧಂತ ಸಂವರ್ಧಿನೀ ಸಮಾರಂಭ ಸಮಾರೋಪ ಭಾಷಣದಲ್ಲಿ ಗಾಯತ್ರೀ ಮಂತ್ರದ 'ಧಿಯೋ ಯೋನಃ ಪ್ರಚೋದಯಾತ್' ಎಂಬ ಪದಗಳಿಗೆ ದ್ವೈತಾರ್ಥವನ್ನು ಕಲ್ಪಿಸಿದ್ದೂ, ಈಗಿನ ಪರ್ಯಾಯ ಸ್ವಾಮಿಗಳಾದ ಶ್ರೀ ವಿಶ್ವೇಷತೀರ್ಥಸ್ವಾಮಿಗಳವರು ಅಂದಿನ ಅಧ್ಯಕ್ಷಭಾಷಣ ದಲ್ಲಿ "ಅದ್ವೈತವು ಎಲ್ಲರದೂ ತನ್ನದೆಂಬ ದುರಂಹಂಕಾರವನ್ನು ತೋರಿಸುವ ತತ್ವ"ವೆಂದೂ ದೂಶಿಸಿ ಜನತೆಗೆ ಪ್ರಸಾರ ಭಾಷಣಮಾಡಿದ್ದೂ ನೋಡುವಾಗ ಇವರಿಗೆ ಇವರ ಮತಾಸಕ್ತಿ ಇತರ ಮತದ್ವೇಷ ಎಷ್ಟರಮಟ್ಟಿಗೆ ಇದೆ ಎಂದು ಕೂಡ ವ್ಯಕ್ತವಾಗುತ್ತದೆ. ಶ್ರೀ ಸ್ವಾಮಿ ಚಿನ್ಮಯಾನಂದಜೀಯವರು ನಮ್ಮ ಜಿಲ್ಲೆಯಲ್ಲಿ ಗೀತಾ ಉಪನಿಷತ್ ಇತ್ಯಾದಿಗಳ ಜ್ಞಾನಯಜ್ಞಗಳನ್ನು ನಡೆಸಿ ಅದ್ವೈತದ ಸಾರವನ್ನು ಈಗಿನ ವಿದ್ಯಾವಂತ ಜನರಿಗೆ ಮುಂದಟ್ಟಾಗು ವಂತೆಮಾಡಿ ಜನರಲ್ಲಿ ಐಕಮತ್ಯವನ್ನು ತರಿಸುತ್ತಿರುವುದನ್ನು ನೋಡಿ ಈ ಮಾಧ್ವಸ್ವಾಮಿಗಳು ತಮ್ಮ ತತ್ವಕ್ಕೆ ಎಲ್ಲಿಯಾದರೂ ಚ್ಯುತಿ ಬಂದಿತೆಂಬ ಹೆದರಿಕೆಯಿಂದ ಅಖಿಲಭಾರತ ಮಾಧ್ವ ಮಹಾಮಂಡಲವೆಂದು ಸ್ಥಾಪಿಸಿ ಕೊಂಡು ತನ್ಮೂಲಕ ಮಾಧ್ವರಾದ್ಧಾಂತ ಸಂವರ್ಧಿನಿ ಸಭೆಗಳ ಮೂಲಕ ತಮ್ಮ ಸಂಕುಚಿತ ತತ್ವವನ್ನು ಪ್ರಚಾರ ಮಾಡುತ್ತಿರುವುದು ನಮ್ಮ ಹಿಂದೂ ಸನಾತನ ಧರ್ಮಕ್ಕೇನೆ ಒಂದು ಕಳಂಕ ತಂದಂತಾಗಿದೆ. ಮಾತ್ರವಲ್ಲದೆ ಜನತೆಯಲ್ಲಿ ಮೇಲು ಕೀಳು ಎಂಬ ತಾರತಮ್ಯವನ್ನು ಉಂಟುಮಾಡುತ್ತ ಜನತೆಯ ಒಗ್ಗಟ್ಟನ್ನು ಮುರಿಯುತ್ತಿರುವುದು ವ್ಯಸನದ ಸಂಗತಿಯಾಗಿದೆ.

ಸೌರಪುರಾಣದಲ್ಲಿ ನಿರೂಪಿಸಲ್ಪಟ್ಟ ಪ್ರಕಾರ ಇವರ ಮಾಧ್ವಮತವು ಭಾರತದ ಕರ್ನಾಟಕ ತೆಲಂಗಾಣ (ಆಂಧ್ರ) ಪ್ರಾಂತಗಳಲ್ಲಿ ಮಾತ್ರ ಹೆಚ್ಚಿನ ಪ್ರಚಾರದಲ್ಲಿ ಇದೆಯ ಷ್ಟೆ ಹೊರತು ಇತರ ಕೇರಳ, ತಮಿಳುನಾಡು ಮತ್ತು ಉತ್ತರದ ಪ್ರಾಂತಗಳಲ್ಲಿ ಇರುವುದಿಲ್ಲ. ಹಾಗೆ ಒಂದು ವೇಳೆ ಇವರ ದ್ವೈತ ಮತ (ಭೇದವಾದ) ಪ್ರಚಾರ ಮಾಡಲು ಹೋದರೂ ಅಲ್ಲಿ ಅವರ ದ್ವೈತವಾದವು ಮೇಲೆ ಬರುವುದಿಲ್ಲ ಎಂಬುದಕ್ಕೆ ನಿದರ್ಶನವಾಗಿ ಇದೇ

ಕಳೆದ 1965ನೇ ಜುಲ್ಯಾ ತಿಂಗಳು ತಾ. 4-5ರಲ್ಲು ಉಡುಪಿಗೆ ಹತ್ತಿರ ಇರುವ ಮಾಧ್ವಮತದ ಭಂಡಾರಿಕೆರೆ ಸ್ವಾಮಿಗಳೊಬ್ಬರು ತಾನು ದ್ವೈತದಲ್ಲಿ ಹೆಚ್ಚು ಬಲ್ಲವನೆಂದು ಶ್ರುತಪಡಿಸಲು ಹರಿದ್ವಾರಕ್ಕೆ ಹೋಗಿ ಅಲ್ಲಿ ಶ್ರೀ ಸ್ವಾಮಿಶಂಕರಪಾತ್ರಿ; ಸ್ವಾಮೀಜಿಯವರೊಂದಿಗೆ ವಾದಮಾಡಿ ಸೋತುಬಂದ ವಿಚಾರವನ್ನು ಈ ಪರಿಶಿಷ್ಟಭಾಗದ ಅಂತ್ಯದಲ್ಲಿ ಓದಬಹುದು.

ಈ ಮೇಲಿನ ವಿಷಯಗಳು ಮಾತ್ರವಲ್ಲದೆ ಈ ಉಡುಪಿ ಮಾಧ್ವರಲ್ಲಿ ಬ್ರಾಹ್ಮಣ ಧರ್ಮಕ್ಕೆ ಸಂಬಂಧಪಟ್ಟ ಕೆಲವು ನಿತ್ಯ ನೈಮಿತ್ತಿಕ ಕರ್ಮಗಳನ್ನು ಪರಿಶೀಲಿಸುವಾಗ ಇತರ ಬ್ರಾಹ್ಮಣರಲ್ಲಿ ಎಲ್ಲಿಯೂ ಕಾಣದ ಕೆಲವು ಕ್ರಮ ಗಳನ್ನು ಕಾಣಬಹುದು. ಇವರು ಬ್ರಾಹ್ಮಣರು ಆಚರಿಸುತ್ತಿರುವ ವರ್ಷಾ ವಧಿ ಪ್ರಾಯಶ್ಚಿತ್ತಕರ್ಮವಾದ ಉಪಕರ್ಮವನ್ನೂ ಶ್ರೀ ಕೃಷ್ಣಾಷ್ಟಮಿ ವ್ರತವನ್ನೂ ಇತರ ಬ್ರಾಹ್ಮಣರು ಶಾಸ್ತ್ರೋಕ್ತವಾಗಿ ಶ್ರಾವಣ ಮಾಸದಲ್ಲಿ ಆಚರಿಸುತ್ತಿರುವಾಗ ತಾವು ಸೌರಮಾನಿಗಳೆಂದೂ ಕರ್ಕಾಟಕ ವರ್ಜ್ಯವೆಂದೂ ಹೇಳಿಕೊಂಡು ಶ್ರಾಣಮಾಸವನ್ನು ಬಿಟ್ಟು ಭಾದ್ರಪದದಲ್ಲೋ ವ ಇತರ ಮಾಸದಲ್ಲಿ ಯಾವಾಗಲೋ ಆಚರಿಸುತ್ತಾರೆ. ಇದರಿಂದಾಗಿ ಶ್ರಾವಣ ಮಾಸದಲ್ಲಿ ನಡೆಯುತಕ್ಕ ಗಾಯತ್ರೀ ಪುರಶ್ಚರಣಾ ಕಾಲವನ್ನು ಬಿಟ್ಟಂತಾಗಿ ಇವರು ಗಾಯತ್ರಿಯನ್ನೇ ಬಿಟ್ಟಂತಾಗುವುದು. ಮತ್ತು ಇವರಲ್ಲಿ ಹೆಚ್ಚಿ ನವರು ಗಾಯತ್ರೀ ಜಪಮಾಡುವ ಕಾಲದಲ್ಲಿ ಗಾಯತ್ರೀ ದೇವಿಯ ಧ್ಯಾನ ವನ್ನು ಬಿಟ್ಟು ವಿಷ್ಣುಧ್ಯಾನವನ್ನು ಮಾಡುತ್ತಿರುವುದರಿಂದ ಕೂಡಾ ಗಾಯ ತ್ರಿಯನ್ನು ತ್ಯಜಿಸಿದಂತಾಗುವುದು ಕಂಡುಬರುತ್ತದೆ. ಅಲ್ಲದೆ ಇಲ್ಲಿಯ ಶಿವಾಲಯಗಳಲ್ಲಿ ಮಾಧ್ವರು ಮೂಲ ಅರ್ಚಕರೆಂದು ಹೇಳಿಕೊಂಡು ವಿಭೂತಿ ರುದ್ರಾಕ್ಷಗಳನ್ನು ಧಾರಣೆಮಾಡದೆ ಶಿವನಿಗೆ ಶೈವಾಗಮೋಕ್ತ ಪೂಜೆ ನಡೆ ಸದೆ ಶಿವನಿಗೆ ಪ್ರಿಯವಾದ ಬಿಲ್ವಪತ್ರಗಳನ್ನು ಅರ್ಪಿಸದೆ ಲಿಂಗದ ಹತ್ತಿರ ತಮ್ಮ ಸಾಲಿಗ್ರಾಮಗಳನ್ನು ಇಟ್ಟುಕೊಂಡು ಆ ಸಾಲಿಗ್ರಾಮಗಳಿಗೆ ಪೂಜೆ ನೈವೇದ್ಯಗಳನ್ನು ಮಾಡಿ ಹೊರಗಿನಿಂದ ಬಂದ ಭಕ್ತಾದಿಗಳಿಗೆ ವಿಭೂತಿ, ಬಿಲ್ವಪ್ರಸಾದಗಳನ್ನು ಕೊಡದೆ ತುಲಸಿ ಗಂಧಪ್ರಸಾದವನ್ನು ಶಿವಪ್ರಸಾದ ವೆಂದು ಕೊಡುತ್ತಿರುವುದು ಚೋದ್ಯವಾಗಿದೆ. ಅದೂ ಮಾತ್ರವಲ್ಲದೆ ತಾವು ಶಿವಾಲಯದ ಮೂಲ ಅರ್ಚಕರೆಂದು ಹೇಳುತ್ತಾ ದೇವಾಲಯದ ಸರ್ವ ವಸ್ತುಗಳೂ, ಅಲ್ಲಿಗೆ ಬರುವ ತಸದಿಕು, ಉಂಬಳಿ, ವರಾಡಗಳು ಅಲ್ಲಿಯ

ಈಶ್ವರನಿಗೆ ಸಂಬಂಧಪಟ್ಟದ್ದಾಗಿದ್ದರೂ ತಾವು ಮಾಧ್ವರು, ಶಿವಪ್ರಸಾದವನ್ನು ತಿನ್ನುವವರಲ್ಲವೆಂದು ಶಿವಲಿಂಗದ ಎದುರಿನಲ್ಲಿ ಇರಿಸಲ್ಪಟ್ಟ ಸಾಲಿಗ್ರಾಮಕ್ಕೆ ನೈವೇದ್ಯವನ್ನು ತೋರಿಸಿ ಅದೇ ಶಿವಾಲಯದಲ್ಲಿ ತಾವು ಶಿವಪ್ರಸಾದವನ್ನು ಭುಂಜಿಸುತ್ತಿರುವುದು ಇತ್ಯಾದಿ ಇವರ ಕ್ರಮಗಳು ಮೇಲೆ ಹೇಳಲ್ಪಟ್ಟ ದೇವೀಭಾಗವತ ಮತ್ತು ಸೌರಪುರಾಣಾದಿ ಗ್ರಂಥಗಳ ಉಲ್ಲೇಖನಗಳಿಗೆ ಸಾಮ್ಯವನ್ನು ಕೊಡುವುದು ವ್ಯಕ್ತವಾಗುತ್ತದೆ.

ಒಂದು ವೇಳೆ ಈ ಮಾಧ್ವರ ದ್ವೇಶಿಗರು ಈ ಪುರಾಣಗಳಲ್ಲಿ ಮೇಲಿನ ವಿಷಯಗಳನ್ನು ಪ್ರಕ್ಷಿಪ್ತವಾಗಿ ಸೇರಿಸಿದ ಶ್ಲೋಕಗಳೆಂದು ಹೇಳಲೂಬಹುದು ಆದರೆ ಹಾಗೆ ಹೇಳಲು ಬರುವುದಿಲ್ಲ. ಏಕೆಂದರೆ ಒಂದೆರಡು ಪುಸ್ತಕಗಳಲ್ಲಿ ಹಾಗೆ ಹಾಕಿರಬಹದೆಂದು ಊಹಿಸಿದರೂ, ಅವರ ತತ್ವದ ವಿರುದ್ಧ ಅನೇಕ ಗ್ರಂಥಗಳಲ್ಲಿ ಕಾಣಲು ಸಿಕ್ಕುವುದರಿಂದ ಪ್ರಕ್ಷಿಪ್ತವೆಂದು ಹೇಳಲು ಸಾಧ್ಯವಾಗುವುದಿಲ್ಲ. ಈ ಮಾಧ್ವರ ತತ್ವದ ವಿರುದ್ಧ ಮೇಲೆ ಹೇಳಿದ ಗ್ರಂಥಗಳು ಮಾತ್ರವಲ್ಲದೆ ಇವರ ತಪ್ತಮುದ್ರಾಧಾರಣ ನಿಶೇಧದ ವಿಚಾರವು ಈ ಕೆಳಗೆ ನಿರೂಪಿಸಿದ ಅನೇಕ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ.

ತಪ್ತಮುದ್ರಾ ನಿಶೇಧ ಗ್ರಂಥಗಳು

1. ತಾಪಿತಾಃ ಶಂಕಚಕ್ರಾಭ್ಯಾಂ ಯಸ್ಯದೇಹ ಪ್ರದೃಶ್ಯತೆ ।
ಸಜೀವನ್ ಕುಣಪಸ್ತ್ಯಾಜ್ಯ: ಸರ್ವಧರ್ಮ ಬಹಿಷ್ಕೃತಃ ॥
ಇತಿ ಹೇಮಾದ್ರಿ ಪ್ರಾಯಶ್ಚಿತ್ತಖಂಡ (ಲಿಂಗಪುರಾಣ)

2. ವೇದೇಷು ಯಜ್ಞಭಾಗೇಷು ಯಸ್ಯನಾಸ್ತ್ಯಧಿಕಾರಿತಾ ।
ಸತಾಪಯಿತ್ವಾ ಚಕ್ರಾದೀನ್ ಧಾರಯೇತ್ ಸ್ವಭುಜದ್ವಯೆ ॥
ಬ್ರಹ್ಮಣೋಯದಿ ಮೋಹೇನ ಧಾರಯೇತ್ತಪ್ತ ಮುದ್ರಿಕಾಃ ।
ತಸ್ಯದರ್ಶನ ಮಾತ್ರೇಣ ಕುರ್ಯಾತ್ಸೂರ್ಯಾವ ಲೋಕನಂ ॥
ಬ್ರಾಹ್ಮಣೋಯದಿ ಮೋಹಾತ್ಮಾ ತಾಪಯೇದ್ ವಹ್ನಿಮುದ್ರಯಾ
ನರಕಮಾರ್ಹೋ ಭವೇದತ್ರ ಸವ್ವೈ ಷಂಖಂಡ ಸಂಜ್ಞಿತಃ ॥
(ಇತಿ ಆದಿತ್ಯಪುರಾಣ)

3. ಬ್ರಾಹ್ಮಣಸ್ಯ ತನುಜ್ಞೇಯಃ ಸರ್ವದೇವ ಮಯಿಕರಃ
ಸಾಚೇತ್ ಸಂತಾಪಿತಾತಸ್ಯಕಿಂ ವಕ್ಷ್ಯಾಮಿ ಮಹೇನಸ:॥
[ಇತಿ ನಾರದೀಯ ಪುರಾಣ]

4 ನದಾಹಯೇ ದ್ವಿಜಶ್ರೇಷ್ಟಂ ನದಹೇದ್ದೃಕ್ರ ಪೂರ್ವಕೈ: ।
ಅಂಕಿತೋಯಃ ಸ್ವದೇಶಾತ್ತಂ ರಾಜಾಶೀಘ್ರಂಪ್ರವಾಸಯೇತ್ ॥
ಅಧ್ಯಾಪನೇ ಚಾಧ್ಯಯನೆ ಶ್ರೌತಸ್ಮಾರ್ತೇಷು ಕರ್ಮಸು ।
ಸಂಭಾವಣೇಚ ಸಂಬಂಧೆ ನಾಧಿಕಾರೀ ಸಲಾಂಛಿತ: ॥

[ಇತಿ ಪಾರಾಶರೋಪ ಪುರಾಣೆ]

5. ಯಥಾ ಸ್ಮಶಾನಗಂ ಕಾಷ್ಟಂ ಅನರ್ಹಂ ಸರ್ವಕರ್ಮಸು ॥
ತಥಾ ಚಕ್ರಾಂಕಿತೋ ವಿಪ್ರಃ ಸರ್ವಕರ್ಮಸುಗರ್ಹಿತ: ॥
ಶಂಕಚಕ್ರಂ ಮೃದಾಯಸ್ತು ಕುರ್ಯಾತ್ತಪ್ತಾಯ ಸೇನವಾ ॥
ಸಶೂದ್ರವತ್ ಭಹಿಷ್ಕಾರ್ಯಃ ಸರ್ವಸ್ಮಾತ್ ದ್ವಿಜಕರ್ಮಣಿ ॥

[ಇತಿ ಅತ್ರೆಯ ದರ್ಮಶಾಸ್ತ್ರ]

6. ನಾಂಕಯೇತ್ ನದಹೇದ್ದೇಹಂ ದಹೇಚ್ಚೇತ್ ಕಾವ-ಚಾರತಃ॥
ನಸ್ವೀಕಃವೀರ್ತ ದಗ್ಧಾಂಗಂ ಶ್ರೌತಸ್ಮಾರ್ತೇಷುಕರ್ಮಸು ॥

[ಇತಿ ಭೂಧಾಯನಾ]

7 ಅಂಗೇಷು ನಾಂಕಯೇದ್ ವಿಪ್ರೋ! ದೇವತಾಯುಧ ಲಾಂಛನ್ನೈಃ॥
ಅಂಕಯೇತ್ ಯಃದಿವಾಮೋಹಾತ್ಪತಿತೋ ನಾತ್ರಸಂಶಯ: ॥
ಶಂಕಚಕ್ರಾದ್ಯಂಕನಂಚ ನೃತ್ಯ ಗೀತಾದಿಕಂ ತಥಾ ।
ಹೀನ ಜಾತೆರಯಂ ಧರ್ಮೋ ನಜಾತುಸ್ಯಾದ್ದ್ವಿ ಜನ್ಮನ: ॥
ಪಾಖಂಡಂ ಪತಿತಾಚಾರಂ ತಪ್ತಚಕ್ರಧರಂ ದ್ವಿಜಂ ॥
ಸಾತ್ರಿಕಾ ಮಗ್ನಿದಂ ದೃಷ್ಟ್ವಾ ಸಚೇಲೋಜಲಮಾವಿಶೇತ್ ॥
ತಪ್ತಚಕ್ರಧರಾಯೆಚಾ ತಾನ್ ದ್ವಿಜೋನಾವಲೋಕಯೇತ್ ॥

[ಇತಿ ಭಾಷ್ಕಲ ಸಂಹಿತೆ]

8. ಕುಕ್ಕುಟಶ್ಚ, ವರಾಹಶ್ಚ, ತಪ್ತಚಕ್ರಾಂಕಿತ ಸ್ತಥಾ ॥
ರಜಸ್ವಲಾಚ ಶಂಡತ್ವಂ ಪಂಚೈತೇ ಶ್ರಾದ್ಧದೂಷಕಾ:
ಯೋವೇಶ್ಯಾಪತಯೋ ವಿಪ್ರ: ತಪ್ತಚಕ್ರಧರಾಶ್ಚಯೇ ॥
ನಾಸ್ತಿಕಾ: ಶೂದ್ರದಾಸಾಶ್ಚ ತೇವೈ ಭಸ್ಮಾಂತ ಸೂತಕಾ: ॥
ತಪ್ತಚಕ್ರಾಂಕಿತಂ ವಿಪ್ರಂ ನಪಶ್ಯೇತ್ ಪುಣ್ಯಕರ್ಮಣಿ ॥
ತತ್ಸಂಪರ್ಕಾತ್ತಥಾಭೂಮಿ : ಸಹಸಾನ್ನೈವ ಶುಧ್ಯೈತಿ ॥

[ಇತಿ ಆಧ್ಯೋಕ್ತಿಗಳು]

9. ಪೂರ್ವಜಾಃಸ್ವತನುಂ ದಗ್ಧ್ವಾ ಶಂಖಚಕ್ರಾದಿಭಿಃ ಪೃಥಕ್ ॥
ಭವಂತಿ ಪತಿತಾಸ್ಸತ್ಯಂ ಸರ್ವಸ್ಮಾದ್ದ್ವಿಜ ಕರ್ಮಣಃ ॥
ತಸ್ಯವೈ ನಿಷ್ಕೃತಿರ್ನಾಸ್ತಿ ಸ್ನಾನ ದಾನ ಜಪಾದಿಭಿಃ ॥
ತಸ್ಯನಿಷ್ಕೃತಿರುತ್ಪನ್ನಾ ಪಾರಾಶರ್ಯೇಣ ಚೋದಿತಾ ॥
ವಿಶೇಶಂ ವಾಪಯಿತ್ವೈನಂ ಪುನಸ್ಸಂಸ್ಕಾರ ಮಾಚರೇತ್ ॥
ಗರ್ಭಗೋಲಾತ್ಸಮುದ್ಧೃತ್ಯ ಗರ್ಭಾದಾನಾದಿ ಪೂರ್ವಕಂ ।
ಶೋಧಾವೃತ್ತ್ಯೈವ ಕೃಚ್ಛ್ರಾಣಾಂ ಪ್ರಾಯಶ್ಚಿತ್ತ ಮುದೀರಿತಂ ॥
[ಇತಿ ವಹ್ನಿಪುರಾಣಂ]

10. ಅಜ್ಞಾತ್ವಾ ಮುಖಜೋಯತ್ರ ಮುದ್ರಾದಗ್ಧೇಭ್ಯ ಆದರಾತ್ ।
ಸುವರ್ಣ ಮಾತ್ರ ಸಂಗ್ರಾಹೀ ಪ್ರಾಜಾಪತ್ಯಂ ಸಮಾಚರೇತ್ ॥
ತದರ್ಧೇಽರ್ಧಂ ಪುನಃ ಕೃತ್ವಾಹ್ಯನ್ನಮಾತ್ರ ಮುಪೇಕ್ಷಣಂ ।
ಕೃತ್ವಾಶುದ್ಧಿ ಮವಾಪ್ನೋತಿ ಶುದ್ಧಿರ್ನಾನ್ಯತ್ರ ದೃಶ್ಯತೇ ॥
[ಇತಿ ಕೂರ್ಮ ಪುರಾಣಂ]

ಈ ಮೇಲೆ ಹೇಳಿದ ಅನೇಕ ಗ್ರಂಥಗಳಲ್ಲಿ ತಪ್ತಮುದ್ರಾವಿಚಾರವನ್ನು ನಿಶೇಧಿಸಿ ಬರೆದಿರುವುದರಿಂದ ಇವುಗಳನ್ನು ಪ್ರಕ್ಷಿಪ್ತಗಳೆಂದು ಹೇಳಲು ಸಾಧ್ಯವಾಗುವುದೆ ?

ಇನ್ನು ಈ ಮಾಧ್ವರನ್ನು ವೈಷ್ಣವರೆಂದೂ ಶ್ರೀ ಕೃಷ್ಣನ ಭಕ್ತರೆಂದೂ ಹೇಳಲುಬರುವುದಿಲ್ಲ. ಏಕೆಂದರೆ ಭಗವದವತಾರಮೂರ್ತಿಯಾದ ಶ್ರೀಕೃಷ್ಣನು ತನ್ನ ಗೀತೋಪದೇಶದಲ್ಲಿ ಆದಿಯಿಂದ ಅಂತ್ಯದವರೆಗೂ ಅದ್ವೈತದ ಅಥವಾ ಅಭೇದವಾದದ ಪರಮ ತತ್ವವನ್ನೇ ವಿವರಿಸಿರುವುದು ಸರ್ವರಿಗೂ ವೇದ್ಯವಾಗಿದೆ. ಅಂತಹ ಅಭೇದವಾದಿಯಾದ ಶ್ರೀ ಕೃಷ್ಣನನ್ನು ಭಜಿಸುವ ಈ ಮಾಧ್ವರು ದ್ವೈತಿಗಳು [ಭೇದವಾದಿಗಳು] ಆಗಲು ಸಾಧ್ಯವಿದೆಯೇ? ಅವರ ದ್ವೈತಿಗಳಾಗಿ ತಮ್ಮ ಆರಾಧ್ಯದೇವರಿಗೆ ವಿರೋಧ ಬಗೆದಂತೆ ಆಗುವುದಲ್ಲವೆ! ಇದನ್ನೆಲ್ಲ ಓದುಗರು ಸರಿಯಾಗಿ ವಿಮರ್ಶಿಸಿಕೊಂಡರೆ ಮೇಲೆ ವಿವರಿಸಲ್ಪಟ್ಟ ಎಲ್ಲಾ ವಿಷಯಗಳ ಸತ್ಯತೆಯು ವೇದ್ಯವಾಗಬಹುದು.

ಶ್ರೀ ಮಧ್ವಾಚಾರ್ಯರು ಸಹ ಮೊದಲು ತಮ್ಮ ಗುರುಗಳ ಅದ್ವೈತ ತತ್ವಕ್ಕೆ ವಿರೋಧವಾಗಿ ದ್ವೈತ ತತ್ವಪ್ರಚಾರ ಮಾಡಿದ್ದರೂ ಅಂತ್ಯದಲ್ಲಿ ಅವರು ಅವರ ತಪ್ಪನ್ನು ಅರಿತುಕೊಂಡ, ದ್ವೈತಭಾವನೆ ಬಿಟ್ಟು ಅದ್ವೈತ

ದಿಂದಲೇ ಮೋಕ್ಷವನ್ನು ಹೊಂದಿರಬೇಕು. ಎಂಬುದು ಅವರ ದ್ವೈತ ತತ್ವಕ್ಕೆ ಸಂಬಂಧಪಟ್ಟ ಈ ಕೆಳಗಿನ ಶ್ಲೋಕವನ್ನು ವಿಮರ್ಶೆಮಾಡಿ ಓದಿ ಅರ್ಥ ಮಾಡಿಕೊಂಡರೆ ತಿಳಿದುಕೊಳ್ಳಬಹುದು.

ಶ್ರೀಮನ್ಮಧ್ವಮತೆ ಹರಿಃಪರತರಸ್ಸತ್ಯಂ ಜಗತ್ತತ್ವತೋ ।
ಭೇದೋಜೀವಗಣಾಃ ಹರೇರನುಚರಾಃ ನೀಚೋಚ್ಚಭಾವಂಗತಾಃ ॥
ಮುಕ್ತಿರ್ನೈಜ ಸುಖಾನುಭೂತಿ ರಮಲಾ ಭಕ್ತಿಶ್ಚ ತತ್ಸಾಧನಂ |
ಹ್ಯಕ್ಷಾದಿ ತ್ರಿತಯಂಪ್ರಮಾಣ ಮಖಿಲಾಮ್ನಾಯೈಕವೇದ್ಯೋಹರಿಃ||

ಅರ್ಥ:—ಶ್ರೀ ಮಧ್ವಮತದಲ್ಲಿ "ಹರಿಃಪರತರಃ" ಎಂಬ ಪದದಿಂದ ಪಾರಮಾರ್ಥಿಕ ಸತ್ತೆಯಲ್ಲಿ, ಶ್ರೀ ಹರಿಃ ಅಂದರೆ ಪರಮಾತ್ಮನನ್ನು ಗೀತೋಕ್ತಿ ಪ್ರಕಾರದ ಕ್ಷರ, ಅಕ್ಷರ, ಪುರುಷರ ಸಾಲಿನಿಂದ ತೆಗೆದು ಉತ್ತಪುರುಷನ ಸಾಲಿನಲ್ಲಿ ಇರಿಸಲ್ಪಟ್ಟಿದೆ. ಇದೇ ನಿರ್ವಿಕಲ್ಪ, ನಿರ್ವಿಕಾರ, ತ್ರಿಗುಣಾತೀತ ಬ್ರಹ್ಮವು. ಇದಾದ ಮೇಲೆ "ತತ್ವತಃ" ಎಂಬ ಪದವನ್ನು ಉಲ್ಲೇಖಿಸಿ ಜಗತ್ ಮತ್ತು ಜೀವರ ವಿಚಾರ ಹೇಳಲ್ಪಟ್ಟಿದೆ. 'ತತ್ವತಃ' ಎಂಬ ಪದ ದಿಂದ ವ್ಯಾವಹಾರಿಕ ಸತ್ತೆಯಲ್ಲಿ ಜಗತ್ತು, ಸತ್ಯವೆಂತಲೂ, ಜೀವರುಗಳು ಬೇರೆ ಬೇರೆಯೆಂತಲೂ, ನೀಚೋಚ್ಚಭಾವವನ್ನು ಹೊಂದುವವರೆಂತಲೂ ಹರಿಯು ಅಂದರೆ ಪರಮಾತ್ಮನ ಅನುಚರರೆಂತಲೂ ಹೇಳಿದೆ. ಅಲ್ಲದೆ ಅಂತಹ ಶ್ರೀಹರಿಯು ಅಂದರೆ ಪರಮಾತ್ಮನು ವ ಬ್ರಹ್ಮವು ಮೂರು ಪ್ರಮಾಣಗಳಿಂದ ಕೂಡಿದ ವೇದೋಪನಿಷತ್‌ಗಳಿಗೆ ವೇದ್ಯನಾದವನು ಎಂದು ಇರುವುದ ರಿಂದ ರೂಪರಹಿತನು ಎಂದು ವ್ಯಕ್ತಪಡಿಸಿದೆ. ಮತ್ತು ಮುಕ್ತಿ ವಿಚಾರದಲ್ಲಿ "ಅಮಲಾಮುಕ್ತಿ"ಅಂದರೆ ಶುದ್ಧವಾದ ಮೋಕ್ಷವು 'ನೈಜಸುಖಾನುಭೂತಿಃ' ಅಂದರೆ 'ತನ್ನ ನಿಜಸ್ವರೂಪ ಸುಖದ ಅನುಭವ'ವೆಂದು ಸ್ಪಷ್ಟಪಡಿಸಿದ್ದರಿಂದ ಎರಡುಇಲ್ಲದೆ ಒಂದೇ ಆಗಿರುವ ತನ್ನ ಸ್ವರೂಪದ ಸುಖಮಯವಾದ ಆನಂದದ ಅನುಭವ ಶುದ್ಧಮುಕ್ತಿಎಂಬ ಅದ್ವೈತವು ಸರಿಯಾಗಿ ಇಲ್ಲಿ ವೇದ್ಯವಾಗುತ್ತದೆ "ಆನಂದಂ ಬ್ರಹ್ಮೇತಿವ್ಯಜಾನಾತ್" "ಆನಂದಾದ್ಯೇವ ಖಲ್ವಿಮಾನಿ ಭೂತಾನಿ ಜಾಯಂತೆ" [ತೈತ್ತಿರಿಯ ಉಪನಿಷತ್] ಈ ಶ್ಲೋಕದಿಂದ ಮಧ್ವಮತವು ಕೂಡ ಅದ್ವೈತವನ್ನೇ ಸಾರುತ್ತದೆ ಎಂಬುದಾಗಿ ನಿಶ್ಚಯಿಸಬಹುದಾಗಿದೆ.

ಅಲ್ಲದೆ ಶ್ರೀ ಮಧ್ವಾಚಾರ್ಯರು ಉಡುಪಿ ಶ್ರೀ ಮದನಂತೇಶ್ವರ ದೇವಳದ ಒಂದು ಬದಿಯಲ್ಲಿ ತನ್ನ ಶಿಷ್ಯರಿಗೆ ಐತರೇಯ ಉಪನಿಷತ್ ಪಾಠ

ಹೇಳುತ್ತಿರುವಾಗ ತನ್ನ ಅಂತ್ಯವನ್ನು ಹೊಂದಿದವರೆಂಬುದರಿಂದ ಅವರು ಅನಂತೇಶ್ವರ ದೇವಸ್ಥಾನದ ಆಗಿನ ಆಡಳಿತೆದಾರರು ಮತ್ತು ಅರ್ಚಕರಾದ ಸ್ಮಾರ್ತ ಸ್ಥಾನಿಕ ಬ್ರಾಹ್ಮಣರೊಡನೆ ವಿರೋಧಭಾವವನ್ನು ಇಟ್ಟುಕೊಳ್ಳದೆ ಐಕಮತ್ಯದಿಂದ ಇದ್ದರೆಂದೂ ಕೂಡ ತಿಳಿಯಬಹುದಾಗಿದೆ. ಈ ಎಲ್ಲಾ ಕಾರಣಗಳಿಂದ ಉಡುಪಿಯಲ್ಲಿ ನಡೆದಿರುವ ಅನ್ಯಾಯಗಳ ವಿಚಾರದಲ್ಲಿ ಶ್ರೀ ಮಧ್ವಾಚಾರ್ಯರು ನಿರ್ದೋಷಿಯೆಂದೂ ಶ್ರೀ ವಾದಿರಾಜಸ್ವಾಮಿಗಳೇ ಇವಕ್ಕೆಲ್ಲಾ ಕಾರಣರೆಂದು ನಿಶ್ಚಯಿಸಬಹುದಾಗಿದೆ. ಈ ವಿಷಯವನ್ನು Mis case 20/32 ತಾ. 20—5—1932ರ ಜಜ್‌ಮೆಂಟನಲ್ಲಿ ಶ್ರೀ ಎನ್.ಎಸ್. ಅರುಣಾಚಲಂ ಎಂ.ಎ.ಐ.ಸಿ ಯಸ್., ಜ್ಯೊಂಟು ಮೆಜಿಸ್ಟ್ರೇಟ ರವರು ಹೇಳಿದ Madhwacharya as not a reality and the founder of one of the Mutts, Vadiraja as being deficient in the grace of God. ಈಮಾತು ಪುಷ್ಟೀಕರಿಸುತ್ತದೆ.

ಈ ಪುಸ್ತಕದಲ್ಲಿ ಯಾವ ವಿಷಯವೂ ಒಂದು ಮತವನ್ನಾಗಲೀ ವ ವ್ಯಕ್ತಿಯನ್ನಾಗಲೀ ದೂಷಣೆಮಾಡಿ ಬರೆದದ್ದೆಂದು ಯಾರೂ ಭಾವಿಸ ಬಾರದು. ನನಗೆ ಯಾರಲ್ಲೂ ವೈಷಮ್ಯವಿಲ್ಲ. ಎಲ್ಲರೂ ಒಳ್ಳೆದಾಗಬೇ ಕೆಂಬುದೇ ನನ್ನ ಅಭಿಲಾಷೆ. ಒಬ್ಬನಲ್ಲಿ ಅಥವಾ ಒಂದುಮತದಲ್ಲಿ ಇರುವ ಕುಂದುಕೊರತೆಗಳನ್ನು ಇನ್ನೊಬ್ಬನು ತೋರಿಸಿಕೊಟ್ಟರೇನೇ ಅದನ್ನು ತಿಳಿದು ಕೊಂಡು ಸರಿಪಡಿಸಿಕೊಳ್ಳಬಹುದಾಗಿದೆ. ಬಲ್ಲವರು ಅದನ್ನು ದೋಷವಾಗಿ ಎಣಿಸುವುದಿಲ್ಲ. ನಾನು ಬ್ರಾಹ್ಮಣನಾಗಿ ಹುಟ್ಟಿ "ಕಾರ್ಯ ಮಿತ್ಯೇವ ಯತ್ಕರ್ಮನಿಯತಂ ಕುರುತೇರ್ಜುನ'' ಎಂಬ ಗೀತೋಕ್ತಿಯಂತೆ ನನ್ನ ಕರ್ತವ್ಯವೆಂದು ಬ್ರಾಹ್ಮಣರ ಪಂಗಡ ಒಂದು ತಪ್ಪುದಾರಿಯಲ್ಲಿ ಹೋಗು ತ್ತಿರುವುದು ನನ್ನ ಮನಸ್ಸಿಗೆ ವ್ಯಸನವನ್ನುಂಟುಮಾಡಿದ್ದರಿಂದ ಬಲ್ಲ ಆ ಪಂಗಡದ ಹೊಸ ಜನಾಂಗವು ತಮ್ಮ ಲೋಪದೋಷಗಳನ್ನು ಸರಿಪಡಿಸಿ ನಮ್ಮ ಹಿಂದೂ ಸನಾತನಧರ್ಮದ ಸೇವೆಗೈಯ್ಯುವರೆಂಬ ಮಹತ್ವಾಕಾಂಕ್ಷೆ ಯಿಂದ ಇದರಲ್ಲಿ ಅನೇಕ ವಿಷಯಗಳನ್ನು ಪ್ರಕಟಿಸಿದ್ದಾಗಿದೆ. ಹಂಸಕ್ಷೀರ ನ್ಯಾಯವರಿತು ಓದುಗರು ಸ್ವೀಕರಿಸಬೇಕಾಗಿ ಕೇಳಿಕೊಂಡು ಇದನ್ನು ಮಂಗಳಮಾಡುತ್ತೇನೆ.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣ ಮುದಚ್ಯತೆ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ ॥
|| ಓಂ ಶಾಂತಿಃ ಶಾಂತಿಃ ಶಾಂತಿಃ ||

ದ್ವೈತ—ಅದ್ವೈತ ವಿಚಾರಶಾಸ್ತ್ರಾರ್ಥ

ದ್ವೈತಪರಾಜಯ! ಅದ್ವೈತವಿಜಯ!!

ದಿ. 5—7—1965ರಲ್ಲಿ ಹರಿದ್ವಾರದಲ್ಲಿ ಭಂಡಾರಕೆರೆ ಮಠದ ಶ್ರೀ ವಿದ್ಯಾಮಾನ್ಯತೀರ್ಥಸ್ವಾಮಿ ಮತ್ತು ವಾರಣಾಸಿಯ ಕರಪಾತ್ರೀಜಿಯವ ರೊಳಗೆ ನಡೆದ ಶಾಸ್ತ್ರಾರ್ಥದ ವಿವರ —

(ಮಧ್ವತಿಮಿರ ಭಾಸ್ಕರದ ಆಧಾರದಿಂದ)

[ಸಂಗ್ರಾಹಕ: ಡಾ॥ ಐ. ಕೆ. ಪಿ. ಶರ್ಮಾ]

ವಿಶ್ವಾವಸು ಸಂ| ಆಷಾಢ ಶುಕ್ಲ ಸಪ್ತಮೀ ಸೋಮವಾರ ಪುಣ್ಯ ದಿನಕ್ಕೆ ಸರಿಯಾದ ದಿ. 5—7—1965ರಲ್ಲಿ ಪವಿತ್ರ ಹರಿದ್ವಾರ ಕ್ಷೇತ್ರದ ಕನಖಲ ಎಂಬಲ್ಲಿ ಶ್ರೀ ಸ್ವಾಮೀ ಭಾಗವತಾನಂದಜೀ ಮಹಾರಾಜ ಶ್ರೋತ್ರೀಯಬ್ರಹ್ಮನಿಷ್ಠ, ಮಹಾಮಂಡಲೇಶ್ವರ, ಕಾವ್ಯ-ಸಾಂಖ್ಯ-ಯೋಗ-ನ್ಯಾಯ—ವೇದ—ವೇದಾಂತತೀರ್ಥ—ವೇದಾಂತವಾಗೀಶ—ಮೀಮಾಂಸ ಭೂಷಣ-ವೇದರತ್ನ-ದರ್ಶನಾಚಾರ್ಯ ಮಹಾನುಭಾವರ ಮಧ್ಯಸ್ಥಿಕೆ ಯಲ್ಲಿ ಮೇಲಿನ ಶಾಸ್ತ್ರಾರ್ಥವಾದವು ನಡೆಯಿತು. ಈ ಶಾಸ್ತ್ರಾರ್ಥವಾದ ನಡೆಯುವಾಗ ಸಂಸದಿಯಲ್ಲಿ ಋಷಿಕೇಶದ ಕೈಲಾಸಾಶ್ರಮ ಶ್ರೀ ಸ್ವಾಮೀ ಚೈತನ್ಯಗಿರಿಜೀ ಮಹಾರಾಜ, ಶ್ರೀ ಸ್ವಾಮೀ ರಾಮೇಶ್ವರಾನಂದಜೀ ಮಹಾ ರಾಜ, ಶ್ರೀ ಸ್ವಾಮೀ ಪೂರ್ಣಾನಂದಜೀ ಮಹಾರಾಜ ಮೊದಲಾದ 12 ಮಂದಿ ವಿಭಿನ್ನಮಠಾಧಿಪತಿಗಳವರು, ವಿದ್ವಾಂಸರುಗಳು, ಆಚಾರ್ಯರು, ಸಂತರೇ ಆದಿಯಾಗಿ ಸಹಸ್ರಾರು ಜನ ಉಪಸ್ಥಿತರಿದ್ದರು.

ಇದೊಂದು ಸ್ಮರಣೀಯ ದಿವಸ-ಅದ್ವೈತ ತತ್ವದಮೇಲೆ ದ್ವೈತ ತತ್ವವು ಸಮುದ್ರದ ಮೇಲೆ ಒಂದು ಹಳ್ಳವು ತನ್ನ ಅಹಂಭಾವವನ್ನು ತೋರಿಸಿ ತನ್ನ ಅಸ್ತಿತ್ವವನ್ನು ಕಳೆದುಕೊಂಡ ದಿನ. ಉಡುಪಿಯ ಹತ್ತಿರವಿರುವ ಭಂಡಾರ ಕೆರೆ ಮಠದ ಶ್ರೀ ವಿದ್ಯಾಮಾನ್ಯ ತೀರ್ಥಸ್ವಾಮಿಗಳೊಬ್ಬರು ಅದ್ವೈತದ ಮೇಲೆ ಮತ್ಸರ ಕಾರುತ್ತಾ ದ್ವೈತ ತತ್ವದ ವಿಚಾರವನ್ನು ಪ್ರಚಾರ ಮಾಡುತ್ತಾ ಹರಿದ್ವಾರದಲ್ಲಿ ತನ್ನ ವಾದವನ್ನು ಕೈಕೊಳ್ಳಲು ನಿರ್ಧರಿಸಿ

ಸ್ವಾಮೀ ಕರಪಾತ್ರೀಜಿಯವರೊಂದಿಗೆ ವಾದಮಾಡಿ ಸೋತು ಪಲಾಯನಗೈದ ದಿವಸ. ಸೋತವರು ಗೆದ್ದವರಿಗೆ ರೂಪಾಯಿ 5000 ಕೊಡಬೇಕೆಂಬ ನಿರ್ಧಾರವನ್ನು ಈ ಮಾಧ್ವಸ್ವಾಮಿಗಳೇ ಮಾಡಿಕೊಂಡರೂ ಹರಿದ್ವಾರದ ಶಾಸ್ತ್ರಾರ್ಥದಲ್ಲಿ ಸೋತು ಹಣಕೊಡದೆ ಓಡಿಬಂದುದು ಮಾತ್ರವಲ್ಲದೆ ತನ್ನೂರಿಗೆ ಬಂದು ತಾನೇ ಗೆದ್ದೆನೆಂದು ಅಪಪ್ರಚಾರ ಮಾಡುತ್ತಿರುವುದು ಆ ಮಠದ ಸ್ವಾಮಿಗಳಿಗಲ್ಲದೆ ದ್ವೈತವಾದಿಗಳಾದ ಉಡುಪಿ ವಗೈರೆ ಎಲ್ಲಾ ಸ್ವಾಮಿಗಳಿಗೂ ಮಾಸಲಾರದ ಕಲಂಕವಾಗಿದೆ. ಮಿಥ್ಯಾವಾದ ದ್ವೈತವನ್ನು ಮಿಥ್ಯಾವಾದ–ಸುಳ್ಳಿನ ಕಂತೆಗಳಿಂದಲೇ ಇವರು ಪೋಷಿಸುತ್ತಿರುವುದು ಅವರ ತತ್ವಕ್ಕೆ ಸರಿಯಾಗಿದೆಯೆಂದು ಹೇಳಬಹುದು.

ಶಾಸ್ತ್ರಾರ್ಥವು ಮೇಲೆ ಹೇಳಿದ ಸ್ಥಳದಲ್ಲಿ ವಿಶೇಷ ಅಲಂಕಾರದೊಡನೆ ಸಜ್ಜೀಕೃತ ಸಭಾಮಂಟಪದಲ್ಲಿ ಜರುಗಿತ್ತು. ಪ್ರಥಮ ದಿವಸದ ಶಾಸ್ತ್ರಾರ್ಥವಾದ ನಡೆಯುವಾಗ ಧ್ವನಿಮುದ್ರಕ ಯಂತ್ರ (tape record) ಸರಿಯಾದ ವ್ಯವಸ್ಥೆಯಲ್ಲಿ ಇಲ್ಲದ್ದರಿಂದ ತೆಗೆಯಲಾಗಲಿಲ್ಲ. ಎರಡನೇ ದಿನದ ಅಧಿವೇಶನದ ಕಾರ್ಯಕಲಾಪಗಳನ್ನು ಸಂಪೂರ್ಣ ಟೇಪುರಿಕಾರ್ಡು ತೆಗೆಯಲಾಗಿದ್ದು ಈವಾಗಲೂ ಸುರಕ್ಷಿತವಾಗಿ ಇಟ್ಟುಕೊಳ್ಳಲಾಗಿದೆ. ಸಭೆಯು 5—7—65 ಮತ್ತು 6—7—65ರ ಸಾಯಂಕಾಲ ಘಂಟೆ 5ಕ್ಕೆ ಪ್ರಾರಂಭವಾಗಿತ್ತು. ಶಾಸ್ತ್ರಾರ್ಥವು ಸಂಸ್ಕೃತದಲ್ಲೇ ನಡೆದಿತ್ತು. ಆದರೆ ಜನಸಾಮಾನ್ಯರಿಗೂ ಅರ್ಥವಾಗುವಂತೆ ವಾದದ ಸಾರಾಂಶವನ್ನು ಹಿಂದಿಯಲ್ಲಿ ಹೇಳಲಾಗಿತ್ತು. ಶ್ರೀ ವಿದ್ಯಾಮಾನ್ಯತೀರ್ಥಜೀಯವರ ಸಮ್ಮತಿಯ ಮೇರೆಗೆ ಮೇಲೆ ಹೇಳಿದ ಶ್ರೀ ಭಾಗವತಾನಂದ ಮಹಾರಾಜರನ್ನು ಮಧ್ಯಸ್ಥರನ್ನಾಗಿ ಚುನಾಯಿಸಲಾಯಿತು. ಸ್ವನಾಮಧನ್ಯ ಅನಂತಶ್ರೀವಿಭೂಷಿತ ಪೂಜ್ಯಪಾದಪ್ರಾತಃ ಸ್ಮರಣೀಯ ಕರಪಾತ್ರೀಜೀ ಮಹಾರಾಜರು ಪ್ರಧಾನ ಪ್ರವಕ್ತಾರರಾಗಿ ನಿರ್ಣಯಿಸಲಾಯಿತು. ಮತ್ತು ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೋತ್ರಿಯ ಬ್ರಹ್ಮನಿಷ್ಠ ಶ್ರೀ ೧೦೮ ಸ್ವಾಮಿರಾಮೇಶ್ವರಾನಂದಜೀ ಮಹಾರಾಜ, ಮಹಾಮಂಡಲೇಶ್ವರ ಜೂನಾಪೀಠಾಧಿಪತಿ, ವೇದಾಂತಾಚಾರ್ಯ, ದಾರ್ಶನಿಕ ಸಾರ್ವಭೌಮ ಮತ್ತು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೋತ್ರಿಯಬ್ರಹ್ಮನಿಷ್ಠ ಶ್ರೀ ೧೦೮ ಸ್ವಾಮಿಚೈತನ್ಯಗಿರಿಜೀ ಮಹಾಮಂಡಲೇಶ್ವರ ಸರ್ವತಂತ್ರ

ಸ್ವತಂತ್ರವಿದ್ಯಾವಾಚಸ್ಪತಿ ಕೈಲಾಸಾಶ್ರಮ, ಹೃಷಿಕೇಶ- ಇವರಿಬ್ಬರು ಮಹಾನುಭಾವರು ಉಪಪ್ರವಕ್ತಾರರಾಗಿದ್ದರು.

ಸಭಾಸ್ಥಳ: ಮೇಲೆ ಹೇಳಿದ ಗೋಘಾಟಿಗೆ ಎದುರು ಗಂಗಾಪಾರ. ವ್ಯವಸ್ಥೆಯು ಬಹಳ ರಮಣೀಯವಾಗಿಯೂ ಸೊಗಸಾಗಿಯೂ ಮಾಡಲಾಗಿತ್ತು. ಪ್ರತಿಜ್ಞಾಪತ್ರವನ್ನು ತಯಾರಿಸಲಾಯಿತು. ಪ್ರತಿಜ್ಞಾಪತ್ರದಲ್ಲಿ ಉಭಯತರು ಅವರವರ ಆಚಾರ್ಯಗ್ರಥಿತ ಗ್ರಂಥಗಳನ್ನೇ ಆಧಾರವಾಗಿರಿಸಿ ವಾದವನ್ನು ಮಂಡಿಸಬೇಕೆಂದೂ ಹಾಗೂ ಇವುಗಳನ್ನು ಬಿಟ್ಟು ಗ್ರಂಥಾಂತರ ಪ್ರಮಾಣವನ್ನು ಆಧರಿಸಿದಲ್ಲಿ ಅಲ್ಲದೆ ವ್ಯಕ್ತಿಗತ ನಿಂದೆಮಾಡಿದ್ದಲ್ಲಿ ಅಂಥವರು ಸೋತವರೆಂಬುದಾಗಿ ಪರಿಗಣಿಸಲ್ಪಡಲಾಗುವುದೆಂದು ಉಭಯತರು ಒಪ್ಪಿರುವ ವಿಷಯವನ್ನು ಸೇರಿಸಲಾಗಿತ್ತು.

ಶ್ರೀ ಸ್ವಾಮಿ ವಿದ್ಯಾಮಾನ್ಯತೀರ್ಥರು ಈ ಶಾಸ್ತ್ರಾರ್ಥ ಯುದ್ಧದಲ್ಲಿ ಗೆದ್ದವರಿಗೆ 5000 ರೂಪಾಯಿಯ ಪುರಸ್ಕಾರವನ್ನು ತಾನು ಕೊಡುವುದಾಗಿ ಬಹಿರಂಗಪಡಿಸಿದ್ದರು. ಪ್ರಥಮವಾಗಿ ಬ್ರಹ್ಮಚಾರೀ ಮಾರ್ಕಾಂಡೇಯ ಮಹೋದಯರು ಉಪೋದ್ಘಾತ(ಪೂರ್ವಕಥನ)ವನ್ನು ಶಾಸ್ತ್ರಾರ್ಥದ ಕುರಿತು ಮಾತಾಡಿದರು. "ಬ್ರಹ್ಮ ಸತ್ಯಂ ಜಗನ್ಮಿಥ್ಯಾ"ಎಂಬ ವಿಷಯವು ಶಾಸ್ತ್ರಾರ್ಥ ವಾದದ ಮುಖ್ಯವಿಷಯವಾಗಿತ್ತು. ಇದನ್ನು ಸಿದ್ಧಮಾಡುವುದರಲ್ಲಿ ತತ್ಪರರಾದವರು ವಾದಿಯಾಗಿಯೂ ಇದನ್ನು ನಿರಾಕರಣೆ ಮಾಡುವವರು ಪ್ರತಿವಾದಿಯೆಂದು ನಿರ್ಣಯಿಸಲ್ಪಟ್ಟಿತ್ತು. ಈ ವಿಷಯದ ಸಿದ್ಧಿ ಮತ್ತು ಅಸಿದ್ಧಿಯಲ್ಲಿ ೧೦ ಉಪನಿಷತ್ತುಗಳು, ಗೀತಾ ಮತ್ತು ಬ್ರಹ್ಮಸೂತ್ರಗಳು ಪ್ರಮಾಣವಾದ ಗ್ರಂಥಗಳು. ಅದನ್ನನುಸರಿಸಿ ಪ್ರತ್ಯಕ್ಷ ಹಾಗೂ ಅನುಮಾನ ಪ್ರಮಾಣಗಳಿಂದ ವಾದಿಸತಕ್ಕದ್ದು. ಅವರವರ ಆಚಾರ್ಯರು ವಹಿಸಿದ ವಾದದ ಉಪಕ್ರಮ ಮತ್ತು ಉಪಸಂಹಾರಾದಿ ಉದಾಹರಣೆ ಸಹಿತ ಭಿನ್ನ ಭಿನ್ನರೂಪದಿಂದ ತೋರಿಸತಕ್ಕದ್ದು ಎಂದು ನಿಶ್ಚಯಿಸಲ್ಪಟ್ಟಿತ್ತು.

ಶಾಸ್ತ್ರಾರ್ಥವು ಈ ಕೆಳಗಿನ ವಿಷಯಗಳಿಂದ ಪ್ರಾರಂಭವಾಯಿತು.

ಶ್ರೀ ಸ್ವಾಮಿ ವಿದ್ಯಾಮಾನ್ಯತೀರ್ಥರ ದ್ವಾರಾಪ್ರಕಾಶಿತ ವಿಜ್ಞಪ್ತಿ ಪತ್ರದಲ್ಲಿ ಪ್ರಕಟಿಸಿದ "ಅಸತ್ಯಂ ಅಪ್ರತಿಷ್ಠಂ";"ಈಶ್ವರೋಹಮಹಂಭೋಗೀ ಇತ್ಯಾದಿ ಭಗವದ್ವಾಕ್ಯಗಳನ್ನು ಅದ್ವೈತಿಗಳ ಲಕ್ಷ ಎಳೆಯಲು — ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಈ ಸಿದ್ಧಾಂತವು ಆಸುರರದ್ದಾಗಿರುತ್ತದೆ ಎಂಬುದಾಗಿ

ಹೇಳಲಾಗಿತ್ತು. ಇದು ಕೇವಲ ಅಸತ್ಯವಾಗಿದೆ-ಯಾವ ಯುಕ್ತಿಯಿಂದಲೂ ಸಿದ್ಧಪಡಿಸಲಸಾಧ್ಯ. ಯಾಕಂದರೆ ಶ್ರೀ ರಾಮಾನುಜಾಚಾರ್ಯರಾಗಲೀ ಶ್ರೀ ಮಧ್ವಾಚಾರ್ಯರಾಗಲೀ ಯಾರೂ ಈ ಪ್ರಕಾರ ಅರ್ಥಮಾಡಿಲ್ಲ— ಮಾತ್ರವಲ್ಲ ಭಗವದ್ಭಕ್ತಿಗೂ ವಿರೋಧವಾಗುವುದು. "ಕ್ಷೇತ್ರಜ್ಞಂ ಚಾಪಿ ಮಾಂವಿದ್ಧಿ'' ಎಂಬ ಭಗವದ್ವಾಕ್ಯದಿಂದ ಕ್ಷೇತ್ರಜ್ಞ (ಜೀವ) ಮತ್ತು ಪರಮಾತ್ಮನ ಏಕತ್ವದ ಜ್ಞಾಪನೆಯಾಗುವುದರಿಂದ ಹಾಗೂ ಭೂತ ಮತ್ತು ಪ್ರಕೃತಿಗಳ ನಿವೃತ್ತಿಯ ವರ್ಣನೆಯಾಗುವುದರಿಂದಲೂ ಪ ಬ್ರಹ್ಮನ ಅದ್ವಿತೀಯತ್ವವು ಈ ರೀತಿ ಜಗತ್ತಿನ ಮಿಥ್ಯಾತ್ವವನ್ನು ಭಗವಾನ್ ಶ್ರೀ ಕೃಷ್ಣನೇ ಸ್ಪಷ್ಟರೂಪದಿಂದ ತೋರಿಸಿದ್ದಾನೆ. "ಭೂತಪ್ರಕೃತಿ ಮೋಕ್ಷಂಚ" ಎಂಬಲ್ಲಿ ಭೂತಗಳ ಮತ್ತು ಪ್ರಕೃತಿಯ ಮೋಕ್ಷ ಹೇಳಿರುವುದರಿಂದ ಬಾಧೆ ಇಲ್ಲ ಎಂಬ ಪ್ರತಿವಾದಿಯ ವಾದಕ್ಕೆ ವಾದಿಯು-ಕಾರಾಗೃಹದಿಂದ ಜೇತನದ ಮುಕ್ತಿಯೇ ತೋರಿಸುವುದರಿಂದ ಭೂತ ಮತ್ತು ಪ್ರಕೃತಿಗಳ ಜಡಸ್ವಭಾವ ದಿಂದ ಮೋಕ್ಷವು ಅಸಂಭವವು ಎಂದು ಉತ್ತರಿಸಿದರು. ಅದಕ್ಕೂ ಪ್ರತ್ಯು ತ್ತರವಾಗಿ ಪ್ರತಿಪಾದಿಸಲು ಭೂತ ಪ್ರಕೃತಿ-ಈ ವಾಕ್ಯದಲ್ಲಿ ಭೂತ ಶಬ್ದಕ್ಕೆ ಜಡ ಎಂದು ಅರ್ಥವಾಗುವುದಿಲ್ಲ ಆದರೆ ಜೀವ ಎಂಬ ಅರ್ಥಗ್ರಹಣ ವಾಗುವುದು. ಯಾಕೆಂದರೆ—''ಈಶ್ವರಃ ಸರ್ವಭೂತಾನಾಂ ಹೃದ್ದೇಶೆ"- ಇತ್ಯಾದಿ ಸ್ಥಳಗಳಲ್ಲಿ ಭೂತ ಶಬ್ದಕ್ಕೆಜೀವವೆಂದು ಅರ್ಥವನ್ನು ಗ್ರಹಿಸಲಾಗು ತ್ತದೆ. ಕಾರಾಗಾರದಿಂದ ಚೇತನದ ಮುಕ್ತಿಯೇ ಸಿದ್ಧವಾಗುವುದೆಂದರು. ಇದಕ್ಕೆ ವಾದಿಯು ಉತ್ತರಿಸುತ್ತಾ ಭೂತ ಮತ್ತು ಪ್ರಕೃತಿ ಎರಡು ಜಡ ಪದಾರ್ಥಗಳು. ಎರಡರಲ್ಲಿಯೂ ಯಾವ ಮೋಕ್ಷವು ಸಿದ್ಧವಾಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಭೂತ ಪ್ರಕೃತಿಗಳ ಅಭಾವವೇ ಮೋಕ್ಷಶಬ್ದದ ಅರ್ಥವಾಗುವುದೆಂದು ವಾದಿಸಿದರು.

"ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ವೇದವಾಕ್ಯದಿಂದ ಬ್ರಹ್ಮದ ಸತ್ಯತ್ವವು ಪ್ರತಿಪಾದಿತ ಹಾಗೆ "ವಿಶ್ವಂ ಸತ್ಯಂ ಮಘವಾನ್" ಎಂಬ ವೇದ ವಾಕ್ಯದಿಂದಲೇ ಜಗತ್ತಿನ ಸತ್ಯತ್ವವು ಕೂಡ ಪ್ರತಿಪಾದಿಸಿದಂತಾಗುವುದೆಂದೂ ಬ್ರಹ್ಮದ ಸತ್ಯತ್ವ ಖಂಡನೆ ಎಲ್ಲಿದೆ? ಪ್ರತಿಪಾದನೆ ಒಂದೇ ಭಾವಾಕ್ಯದಿಂದ ಜಗತ್ ಸತ್ಯವಲ್ಲ ಎಂಬುದಕ್ಕೆ ಪ್ರಮಾಣ ಏನೂ ಇಲ್ಲ. ಆದ್ದರಿಂದ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎಂಬ ವಾದವು ದುರುಕ್ತೀ (ಪಂಧ್ಯಾ) ಎಂಬುದಾಗಿ

ಪ್ರತಿವಾದಿಯಾದ ಶ್ರೀ ವಿದ್ಯಾಮಾನ್ಯತೀರ್ಥಸ್ವಾಮೀಜಿಯವರು ವಾದಿಸಿದರು. ಅದಕ್ಕುತ್ತರವಾಗಿ ವಾದಿಯಾದ ಸ್ವಾಮೀಕರಪಾತ್ರೀಜೀ ಮಹಾರಾಜರು ವಿಶ್ವದ ಪರಮಾರ್ಥ ಸತ್ಯತ್ವ ವಾದಿಸಿದ್ದಲ್ಲಿ ''ಏಕಮೇವ ಅದ್ವಿತೀಯಂ ಬ್ರಹ್ಮ''ಎಂಬ ವೇದವಾಕ್ಯದಿಂದ ಬ್ರಹ್ಮದ ಅದ್ವಿತೀಯ ಬೋಧಕ ಶ್ರುತಿಗೆ ವಿರೋಧ ಸಂಘಟಿಸೀತು. ಬ್ರಹ್ಮಜ್ಞಾನದಿಂದ ಮೋಕ್ಷ ಹೊಂದಬಹುದೆಂಬ ಅದರ ಅರ್ಥ ಬ್ರಹ್ಮದ ಯಥಾರ್ಥ ಜ್ಞಾನದಿಂದಲೇ ಮೋಕ್ಷ ಹೊಂದುತ್ತದೆಂದರ್ಥ. ಬ್ರಹ್ಮದ ಯಥಾರ್ಥ ಸ್ವರೂಪವು ಅದ್ವಿತೀಯ—ಆದ್ದರಿಂದ ಎರಡು ಸಮಾನ ರೀತಿಯಲ್ಲಿ ಸತ್ಯವು ಇರಲಿಕ್ಕೆ ಸಾಧ್ಯವಾಗಲಾರದು. ಷಷ್ಠಿವಿಭಕ್ತ್ಯಂತ ಸತ್ಯಶಬ್ದದ ಹಾಗೂ ಪ್ರಥಮ ವಿಭಕ್ತ್ಯಂತ ಸತ್ಯಶಬ್ದದ ಅರ್ಥವು ಭಿನ್ನಭಿನ್ನವಾಗುವುದು. ಯಥಾ ರೀತಿ ರಾಜರ ರಾಜನು ರಾಜರಾಜನಾಗುತ್ತಾನೆಯಷ್ಟೆ! ಈ ವಾಕ್ಯದಲ್ಲಿ ಎರಡು ರಾಜ ಶಬ್ದಗಳಿವೆ. ಆದರೆ ಇವೆರಡರ ಅರ್ಥವು ಸಮಾನವಲ್ಲ. ಈ ಕಾರಣದಿಂದಾಗಿ ವಿಶ್ವದ ವ್ಯಾವಹಾರಿಕ ಸತ್ಯತ್ವ ಎಂಬುದಾಗಿ ತಿಳಿಯಬೇಕು. ಅದೇ ರೀತಿ ಬ್ರಹ್ಮನ ಪಾರಮಾರ್ಥಿಕ ಸತ್ಯತ್ವವನ್ನು ತಿಳಿಯತಕ್ಕದ್ದು.

ಪ್ರತಿವಾದಿಯು ಈ ರೀತಿಯಾದರೆ ಬ್ರಹ್ಮದ ವ್ಯಾವಹಾರಿಕ ಸತ್ಯತ್ವ ಹೇಳುವುದು ಸರಳವಾಗಿದೆ. ವಿಶ್ವದ ಪಾರಮಾರ್ಥಿಕ ಸತ್ಯತ್ವವು ಅದೇ ಪ್ರಕಾರ ಸಿದ್ಧವಾಗುವುದೆಂದು ಪ್ರತಿಪಾದಿಸಿದರು. ಇದನ್ನು ಉತ್ತರಿಸುತ್ತಾ ವಾದಿಯು ಯಾವ ದಾರ್ಶನಿಕನು ಜಗತ್ತಿನ ಪಾರಮಾರ್ಥಿಕ ಸತ್ಯತ್ವವನ್ನು ಸ್ವೀಕರಿಸಲಿಲ್ಲ. ಎಲ್ಲಾ ವಾದಿಗಳು ಜಗತ್ತಿನ ವ್ಯಾವಹಾರಿಕ ಸತ್ಯತ್ವನ್ನು ಮಾನಿಸುವರು. ಎಲ್ಲಕ್ಕಿಂತಲೂ ಬ್ರಹ್ಮವು ದೊಡ್ಡದೆಂದು ಈ ಶಬ್ದದಿಂದಲೇ ಅರ್ಥ ದೊರಕುವುದು. ಇನ್ನೊಂದು ಮಾತೆಂದರೆ ಶಾಸ್ತ್ರಾರ್ಥದ ನಿಯಮಾವಳಿಯಲ್ಲಿ ಪೂರ್ವಾಚಾರ್ಯರ ಸಿದ್ಧಾಂತಕ್ಕೆ ವಿರುದ್ಧವಾಗಿ ವಾದಿಸಬಾರದೆಂಬ ನಿಯಮವು ಸ್ವೀಕೃತವಾಗಿದೆ. ಜಗತ್ ಸತ್ಯ ಬ್ರಹ್ಮ ಮಿಥ್ಯಾ ಎಂಬ ತಮ್ಮ ಹೇಳಿಕೆಯು ತಮ್ಮ ಆಚಾರ್ಯರ ಸಿದ್ಧಾಂತಕ್ಕೆ ವಿರೋಧವಾಗಿದೆ. ಯಾಕಂದರೆ ಶ್ರೀ ಮನ್ಮಧ್ವಾಚಾರ್ಯರು ಬ್ರಹ್ಮದ ಮಿಥ್ಯಾತ್ವವನ್ನು ಹಾಗೂ ಬಾಧ್ಯತ್ವವನ್ನು ಮಾನಿಸಿಲ್ಲ. ಜ್ಞಾನದಿಂದ ಜೀವಕ್ಕೆ ಮೋಕ್ಷವೆಂಬುದನ್ನು ತಮ್ಮ ಆಚಾರ್ಯರು ಮಾನಿಸುವುದಿಲ್ಲ. ಬ್ರಹ್ಮಜ್ಞಾನದಿಂದಲೇ ಮೃತ್ಯುವನ್ನು ಅತಿಕ್ರಮಿಸಲಾಗುವುದು. ಇದರಿಂದ

ಅತಿರಿಕ್ತ ಮೋಕ್ಷದದಾರಿ ಬೇರೆ ಇಲ್ಲ. ಈ ಶ್ರುತಿಯ ದ್ವಾರಾಬ್ರಹ್ಮನ ತಿಳುವಳಿಕೆಯೇ ಮೋಕ್ಷದ ಕಾರಣ ಎಂಬುದಾಗಿ ಕೇಳಿಬರುತ್ತದೆ. ಶ್ರುತಿಯ ಮೂಲಕ ಧರ್ಮಾದಿಗಳ ಸ್ವರೂಪ ತಿಳಿದು ಧರ್ಮದ ಆಚರಣೆ ಹಾಗೂ ಅಧರ್ಮದ ಪರಿತ್ಯಾಗ ಆಗಿಹೋಗುವುದು. ಇದನ್ನು ಉತ್ತರಿಸುತ್ತಾ ಪ್ರತಿವಾದಿಯು ಹೇಳುತ್ತಾರೆ—ನಾವು ನಮ್ಮ ಆಚಾರ್ಯರ ಸಿದ್ಧಾಂತಕ್ಕೆ ವಿರೋಧವಾಗಿ ಹೋಗಿಲ್ಲ. ಆದರೆ ಈ ಪ್ರಕಾರ ಬ್ರಹ್ಮವು ಕೂಡಾ ಮಿಥ್ಯವಾಗುವುದೆಂಬ ಹೇಳಿಕೆ ಮಾತ್ರ ನಮ್ಮದು.

ಇಷ್ಟು ಶಾಸ್ತ್ರಾರ್ಥವಾಗುವಾಗ ರಾತ್ರಿ 9 ಗಂಟೆ ಆಗಿಹೋಯಿತು. ಈ ಸಭೆಯಲ್ಲಿ ಈ ದಿನ ಶ್ರೀ ಕರಪಾತ್ರೀಜಿ ಮಹಾರಾಜರು ವಾದಿಯಾಗಿ ಶ್ರೀ ವಿದ್ಯಾಮಾನ್ಯ ತೀರ್ಥಸ್ವಾಮೀಜಿಯವರು ಪ್ರತಿವಾದಿಯಾಗಿ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ವಿಷಯ ವಾದ ನಡೆಯಿತು.

ಮರುದಿನ ಪುನಃ ಸಾಯಂಕಾಲ 6 ಗಂಟೆಗೆ ಅದೇ ಸ್ಥಳದಲ್ಲಿ ಶಾಸ್ತ್ರಾರ್ಥ ನಡೆಯಿತು. ವಾದಿಯು ಪ್ರತಿವಾದಿಗೆ ಹೇಳಿದ್ದೇನೆಂದರೆ— ತಾವಾದರೋ ತಮ್ಮ ಆಚಾರ್ಯರಿಗೆ ವಿರುದ್ಧ ಮಾತನ್ನು ಆಡಿದ್ದೀರಿ. ಶ್ರೀ ಮಧ್ವಾಚಾರ್ಯರು ತನ್ನ ಗೀತಾಭಾಷ್ಯದಲ್ಲಿ ಭೂತಗಳ ಮತ್ತು ಪ್ರಕೃತಿ ಮೋಕ್ಷ ಹಾಗು ಅಮಾನಿತ್ವ ಆದಿ ಹೇಳಿದ್ದರು. ತಾವಾದರೋ ಆದರ ಉಲ್ಟಾ ಅರ್ಥ ಅಂದರೆ ಭೂತಗಳ ಪ್ರಕೃತಿಯಿಂದ ಮೋಕ್ಷವಾಗುವುದೆಂಬ ಅರ್ಥವನ್ನು ಮಾಡುತ್ತೀರಿ.

ತಮ್ಮಗಳ ಆಚಾರ್ಯರು ಭಾಷ್ಯಕ್ಕೆ ಟೀಕೆಮಾಡುತ್ತಾ ಶ್ಲೋಕದಲ್ಲಿ ಭೂತ ಪ್ರಕೃತಿ ಮೋಕ್ಷಂಚ) ಭೂತಗಳಿಂದ ಅರ್ಥಾತ್ ಪೃಥ್ವಿವ್ಯಾದಿಗಳಿಂದ, ಎಂದು ದ್ವಂದ್ವಸಮಾಸ ಮಾಡಿರುವರು. ತಾವಾದರೋ ಭೂತಗಳು ಚೇತನದ, ಅಪರಾಧಿಗಳ ಕಾರಾಗೃಹದಿಂದ ಮುಕ್ತಿಯ ಸಮಾನ ಪ್ರಕೃತಿಯಲ್ಲಿ ಮೋಕ್ಷವಾಗುವುದೆಂದು ಹೇಳುತ್ತೀರಿ. ಹಿಂದೆ ಹೇಳಿದುದರಿಂದ ತಮ್ಮ ಆಚಾರ್ಯರ ವಿರುದ್ಧ ಭಾಷಣ ಮಾಡಿದಂತಾಗಿ ತಮ್ಮ ಪರಾಜಯವಾಯಿತು. ಈಗ ಇದರ ನಂತರ ಈ ಶಾಸ್ತ್ರಾರ್ಥದ ಸಮಾಪ್ತಿಯಾಗುವುದು ನ್ಯಾಯಸಂಗತವಾಗುವುದು.

ತಿರುಗಿ ವಾದಿಯು ಈ ರೀತಿ ಪ್ರತಿಪಾದಿಸಿದರು—ತಮ್ಮ ಆಚಾರ್ಯರು ಭೂತ ಶಬ್ದದಿಂದ ಜಡ, ಪೃಥ್ವೀ ಆದಿಗ್ರಹಣ ಮಾಡುತ್ತಾರೆ, ತಾವಾದರೋ

ಭೂತಶಬ್ದದಿಂದ ಚೇತನ ಜೀವ, ಗ್ರಹಣಮಾಡುತ್ತೀರಿ ತಮ್ಮ ಆಚಾರ್ಯರು ಮೋಕ್ಷಶಬ್ದದಿಂದ ಮೋಕ್ಷದ ಸಾಧನ, ಅಮಾನಿತ್ವ ಆದಿ ಸ್ವೀಕಾರ ಮಾಡುತ್ತಾರೆ. ಹಾಗೆಯೇ ತಾವು ಮೋಕ್ಷ (ಶಬ್ದದಿಂದಲೇ ಮೋಕ್ಷ) ಸ್ವೀಕಾರ ಮಾಡುತ್ತೀರಿ. ಜಡತ್ವವು ಚೈತನ್ಯದಿಂದ ವಿರುದ್ಧ ವಾಗಿದೆ, ಚೈತನ್ಯವಾದರೂ ಜಡತ್ವದಿಂದ ವಿರುದ್ಧವಾಗಿದೆ. ಒಂದು ವೇಳೆ ಜಡತಾ ಮತ್ತು ಚೇತನತಾ ಮಧ್ಯೆ ಪರಸ್ಪರ ವಿರುದ್ಧ,ವಿಲ್ಲದಿದ್ದರೆ ತಿರಿಗಿ ವಿರೋಧ ಎಂಬುದೇ ಎಲ್ಲಿ ಇರುತ್ತದೆ.

ಆದ್ದರಿಂದ ಈ ತಮ್ಮ ಹೇಳಿಕೆಯು ತಮ್ಮ ಆಚಾರ್ಯರಿಗಿಂತ ವಿರುದ್ಧ ರೂಪೇ ಆಗುವುದೆಂದು ಹೇಳಿದರು. ನಿಮ್ಮ ಆಚಾರ್ಯರ ಗ್ರಂಥ ವನ್ನು ಇಲ್ಲಿಯೇ ನೋಡಬಹುದು. ಇದರ ನಂತರ ಸಮಯಬಂಧ(ಶರ್ತ) ಕ್ಕನುಸಾರ ಸಭೆಯ ಮಧ್ಯೆಮಧ್ಯಸ್ಥರು ಪ್ರತಿವಾದೀ ವಿದ್ಯಾಮಾನ್ಯತೀರ್ಥರ ಪರಾಜಯ ಘೋಷಣೆ ಮಾಡಿದರು. ಮಧ್ಯಸ್ಥರ ಭಾಷಣದ ಮಧ್ಯದಲ್ಲೇ ಪ್ರತಿವಾದಿ ಮಹೋದಯರು ಎದ್ದು ಲಜ್ಜಾವನತಮುಖಸ್ಥರಾಗಿ ಸಭೆಯಿಂದ ಹೊರಗೆ ಹೋದರು.

ಮಧ್ಯಸ್ಥರು ಹಿಂದಿಯಲ್ಲೇ ಮಾತಾಡಬೇಕೆಂಬ ಸಭಿಕರ ಆಗ್ರಹದ ಮೇರೆಗೆ ಮೊದಲು ಹಿಂದಿಯಲ್ಲೇ ಭಾಷಣ ಪ್ರಾರಂಭಿಸಿದರು. ಪ್ರತಿಜ್ಞಾ ನಿಯಮದಂತೆ ಪ್ರತಿವಾದಿಯು ಸೋತ ವಿಷಯವನ್ನು ಶಾಸ್ತ್ರಬದ್ಧವಾಗಿ ಪೂರ್ವ ನಿಯಮದಂತೆ ತೀರ್ಮಾನಿಸಿದರೆಂದರು. ಅನಂತರ ಸಭಿಕರು ಅದ್ವೈತ ಸಿದ್ಧಾಂತದ ಜಯಕಾರವನ್ನು ಬಹಳ ಸಂತೋಷದಿಂದ ಮಾಡಿದ ನಂತರ ಸಭೆಯು ವಿಸರ್ಜಿತವಾಯಿತು. ಈ ಜಯಘೋಷಣೆಯ ಮಧ್ಯ ದಲ್ಲಿ ಧನ್ಯವಾದಾರ್ಪಣೆಯು ಕೂಡ ಸಭಿಕರಿಗೆ ಕೇಳದೆಹೋಯಿತು. ಮಧ್ಯಸ್ಥರ ಉಪಸಂಹಾರ ಭಾಷಣದ ವಿವರವನ್ನು ಲೇಖನ ವಿಸ್ತಾರ ಭಯದಿಂದ ಇಲ್ಲಿ ಕೊಡಲಾಗಲಿಲ್ಲ.

ಪತ್ರಿಕೆಗಳ ವರದಿಯ ಸಾರಾಂಶ

'ಪುರೋಹಿತ'—ಸಾಪ್ತಾಹಿಕ, ಜ್ವಾಲಾಪುರ, ೧೫ ಜುಲಾಯಿ ೧೯೬೫ ಹರಿದ್ವಾರದಲ್ಲಿ ದ್ವೈತ—ಅದ್ವೈತಮತಗಳೊಳಗೆ ಶಾಸ್ತ್ರಾರ್ಥ— ಸ್ವಾಮಿ ಕರಪಾತ್ರೀಜೀ ಮಹಾರಾಜರ ಸಮಕ್ಷಮದಲ್ಲಿ ದ್ವೈತವಾದದ ಸಮರ್ಥಕ ವಿದ್ಯಾಮಾನ್ಯತೀರ್ಥರ ಪಲಾಯನ.

ಹರಿದ್ವಾರ: ದಕ್ಷಿಣಭಾರತ, ಉಡುಪಿ ನಿವಾಸಿಯಾದ ಭಂಡಾರಕೆರೆ ಮಠಾಧೀಶ ಶ್ರೀ ವಿದ್ಯಾಮಾನ್ಯತೀರ್ಥಜೀಯವರು ಹರಿದ್ವಾರಕ್ಕೆ ಬಂದು ಮಧ್ವಮತ (ದ್ವೈತಮತವಾದ) ಪ್ರಚಾರಮಾಡಲು ಅದ್ವೈತ ಸಿದ್ಧಾಂತದ ಮೇಲೆ ಆಕ್ಷೇಪ ಮಾಡುತ್ತಾ ಶಾಸ್ತ್ರಾರ್ಥದ ಆಮಂತ್ರಣವನ್ನು ಕೊಟ್ಟಿದ್ದರು. ಇದನ್ನು ಸ್ವೀಕರಿಸಿದ ಪರಿವ್ರಾಜಕ ಮಂಡಲವು ಒಂದು ವಿಶಾಲವಾದ ಭವ್ಯ ಸಭೆಯ ಆ ಯೋಜನೆಯನ್ನು ಮಾಡಿದರು.

ಇದರಲ್ಲಿ ಎಲ್ಲಾ ಸಂಪ್ರದಾಯದ ಮಹಾತ್ಮರು ಹಾಗೂ ವಿಚಾರಶೀಲ ಸದ್ಗೃಹಸ್ಥ ವ್ಯಕ್ತಿಗಳು ಉಪಸ್ಥಿತರಾಗಿದ್ದರು. ಶ್ರೀ ಸ್ವಾಮೀ ಕರಪಾತ್ರೀಜೀ ಮಹಾರಾಜರು ಅದ್ವೈತ ಸಿದ್ಧಾಂತದ ಸಮರ್ಥನಮಾಡುವಲ್ಲಿ ಶ್ರೀ ವಿದ್ಯಾಮಾನ್ಯತೀರ್ಥಜೀಯವರ ಎಲ್ಲಾ ಆಕ್ಷೇಪಗಳಿಗೆ ಯುಕ್ತಿತರ್ಕಪೂರ್ಣ ಸಮಾಧಾನ ಮಾಡಿದರು.

ಶಾಸ್ತ್ರಾರ್ಥದಪೂರ್ಣ, ಪ್ರತಿಜ್ಞಾಪತ್ರದಲ್ಲಿ ಅವರವರ ಪೂರ್ವಾಚಾರ್ಯರುಗಳ ವಿರುದ್ಧ ಯಾರು ಮಾತು ಆಡುತ್ತಾರೋ ಅವರು ಪರಾಜಿತರಾಗುವರೆಂದು ಮಾಡಿಕೊಂಡ ಪ್ರತಿಜ್ಞೆಯ ನಿಯಮವನ್ನು ಎರಡು ಪಕ್ಷದವರು ಒಪ್ಪಿರುವರು. ಶ್ರೀ ವಿದ್ಯಾಮಾನ್ಯತೀರ್ಥಜೀಯವರು ಭೂತ ಪ್ರಕೃತಿ ಮೋಕ್ಷಂಚಯೆ ವಿದುರ್ಯಾಂತಿತೆಪರಮ್" ಎಂಬ ಗೀತಾವಾಕ್ಯದ ಭೂತಶಬ್ದದ ಅರ್ಥ—ಚೇತನ ಎಂಬುದಾಗಿ ಮಾಡಿದರು. ಆದರೆ ಮಧ್ವಮತದ ಆಚಾರ್ಯಜಯತೀರ್ಥರು ಭೂತಶಬ್ದದ ಅರ್ಥ ಈ ರೀತಿ ಮಾಡಿರುವರು-ಭೂತೇಭ್ಯಃಪೃಥಿವ್ಯಾದಿಭ್ಯಃಎಂದುಶ್ರೀಕರಪಾತ್ರೀಜಿಯವರು ಯಾವ ಸಂಪ್ರದಾಯದ ಆಚಾರ್ಯರೂ ಈ ಭೂತಶಬ್ದದ ಅರ್ಥ-ಚೇತನ ಎರಡು ಅತ್ಯಂತ ವಿರುದ್ಧವಾಗಿದೆಯೆಂದು ಪ್ರತಿಪಾದಿಸಿದರು. ಆದಕಾರಣ ತಾವು ಶಾಸ್ತ್ರಾರ್ಥವಾದದಲ್ಲಿ ಪೂರ್ವಾಚಾರ್ಯರ ವ್ಯಾಖ್ಯಾನಕ್ಕೆವಿರುದ್ಧಹೇಳುತ್ತೀರಿ ಅಂತ್ಯದಲ್ಲಿ ಮಧ್ಯಸ್ಥ ಸ್ಥಾನದಿಂದ ಸ್ವಾಮೀಭಾಗವತಾನಂದಜೀಮಹಾರಾಜ ಮಹಾಮಂಡಲೇಶ್ವರರು ತನ್ನ ನಿರ್ಣಯವನ್ನು ಸಾರಿದರು. ನಿರ್ಣಯದಲ್ಲಿ ಅವರು ಹೇಳಿದರು—ಶ್ರೀ ವಿದ್ಯಾಮಾನ್ಯಜೀಯವರು ಭೂತಾನಾಂ ಪ್ರಕೃತೇ ಎಂಬಂತೆ ವ್ಯತಿರಿಕ್ತ ಸಮಾಸಮಾಡುತ್ತಾರೆ ಮತ್ತು ಭೂತ ಶಬ್ದದ ಅರ್ಥ ಚೇತನ ಎಂದು ಹೇಳುತ್ತಾರೆ. ಇದೆಲ್ಲಾ ಪೂರ್ವಾಚಾರ್ಯರ ವಿರುದ್ಧವಾಗಿದೆ. ಆದ್ದರಿಂದ ಶಾಸ್ತ್ರಾರ್ಥದಲ್ಲಿ ವಿದ್ಯಾಮಾನ್ಯತೀರ್ಥರು ಪರಾಸ್ತರಾದ

ರೆಂದರು. ಇದರ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಶಾಸ್ತ್ರಾರ್ಥವು ನಾಲ್ಕನೇ ತಾರೀಕಿನಿಂದ ಜುಲಾಯಿ ೬ನೇ ತಾರೀಕಿನವರೆಗೆ ಆಗಿತ್ತು.

ಮೇಲಿನ ಆ ಯೋಜನೆಯು ಭಗವತೀ ಗಂಗೆಯ ಪುಣ್ಯ ಮತ್ತು ರಮಣೀಯ ತಟದಲ್ಲಿ ಶತಾಬ್ದಿಪುಲ್ ಹತ್ತಿರ ರೋಡಿನ ಮೈದಾನದಲ್ಲಿ ನಿರ್ಮಿಸಲ್ಪಟ್ಟ ಚಪ್ಪರದಲ್ಲಿ ಜರುಗಿತ್ತು. ಸಭೆಯಲ್ಲಿ ಸಾವಿರಾರು ಸಂಖ್ಯೆ ಧಾರ್ಮಿಕ ಜನತೆಯು ಉಪಸ್ಥಿತವಿದ್ದು ಶಾಸ್ತ್ರಾರ್ಥದ ಶ್ರವಣಮಾಡಿತ್ತು. ಹಾಗೂ ಪರಾಜಿತರಾಗಿ ಮುಖವನ್ನು ಕೆಳಕ್ಕೆ ಬಗ್ಗಿಸಿ ಸಭೆಯಿಂದ ಹೊರಟು ಹೋಗುತ್ತಿದ್ದ ವಿದ್ಯಾಮಾನ್ಯ ತೀರ್ಥರ ದೃಶ್ಯವನ್ನು ಎಲ್ಲರೂ ನೋಡಿದರು.

ಶಾಸ್ತ್ರಾರ್ಥದ ಎರಡನೇ ದಿವಸದ ಪೂರ್ತಿ ಕಾರ್ಯಕ್ರಮವನ್ನು ಪರಿವ್ರಾಜಕ ಮಂಡಲವು ಟೇಪ್‌ರಿಕಾರ್ಡು ಮೂಲಕ ಸಂಗ್ರಹಿಸಿಯದೆ. ಹಾಗೂ ಪ್ರಥಮದಿನದ ಕಾರ್ಯಕಲಾಪವನ್ನು ಬರೆದು ಪ್ರಮಾಣಾರ್ಥ ಸುರಕ್ಷಿಸಲ್ಪಟ್ಟಿರುವುದು. ಶ್ರೀ ವಿದ್ಯಾಮಾನ್ಯತೀರ್ಥಜೀಯವರು ಮೊದಲು ಘೋಷಿಸಿದ ಪ್ರಕಾರ 5000 ರೂಪಾಯಿ ವಿಜಯಿಗಳಾದ ಪರಿವ್ರಾಜಕ ಮಂಡಲಕ್ಕೆ ಹಣ ಕೊಡದೇನೇ ಹರಿದ್ವಾರದಿಂದ ಹೊರಟು ಹೋಗಿರುವರು.

"ನವಭಾರತ ಟೈಮ್ಸ್''—೧೫ ಜುಲಾಯಿ ೧೯೬೫.

ದ್ವೈತ ಅದ್ವೈತಗಳ ಮೇಲೆ ಎರಡು ದಿನದ ಶಾಸ್ತ್ರಾರ್ಥವು ಹರಿದ್ವಾರ (ಎಸ್) ಗೌಘಾಟಿಪುಲ್‌ನ ಹತ್ತಿರದ ರೋಡು ಮೈದಾನಿನಲ್ಲಿ ಪರಿವ್ರಾಜಕ ಮಂಡಲದ ತರ್ಫಿನಲ್ಲಿ ಒಂದು ವಿರಾಟ್‌ಸಭೆಯು ಏರ್ಪಡಿಸಲಾಗಿತ್ತು. ದಕ್ಷಿಣಭಾರತದ ಉಡುಪಿ ನಿವಾಸಿ ಭಂಡಾರಕೆರೆ ಮಠದ ಶ್ರೀ ವಿದ್ಯಾಮಾನ್ಯತೀರ್ಥರು ಸ್ವಾಮಿ ಶ್ರೀ ಕರಪಾತ್ರೀಜಿಯರೊಡನೆ ದ್ವೈತ ಪಕ್ಷದಿಂದ ಅದ್ವೈತ ಸಿದ್ಧಾಂತದ ಮೇಲೆ ಅನೇಕ ಆಕ್ಷೇಪ ಮಾಡುತ್ತಾ ಜಗತ್‌ಸತ್ಯ ಎಂಬುದಾಗಿ ಸಿದ್ಧಮಾಡುವ ಪ್ರಯಾಸ ಮಾಡಿದರು. ಸ್ವಾಮಿ ಕರಪಾತ್ರೀಜಿಯವರು ಎಲ್ಲಾ ಆಕ್ಷೇಪಗಳನ್ನೂ ನಿರಾಕರಿಸಿ ಜಗತ್ ಮಿಥ್ಯಾ ಎಂಬುದಾಗಿ ಸಿದ್ಧಮಾಡಿದರು.

ಶಾಸ್ತ್ರಾರ್ಥದ ನಿರ್ಣಾಯಕ ಸ್ವಾಮಿ ಭಾಗವತಾನಂದರು ಶ್ರೀ ವಿದ್ಯಾಮಾನ್ಯತೀರ್ಥರನ್ನು ಪರಾಜಿತರನ್ನಾಗಿ, ಹಾಗೂ ಶ್ರೀ ಕರಪಾತ್ರೀಜಿಯವರನ್ನು ವಿಜಯಿ ಎಂಬುದಾಗಿ ಘೋಷಿಸಿದರು. ಶಾಸ್ತ್ರಾರ್ಥವು ಎರಡು ದಿವಸಗಳವರೆಗೆ ನಡೆದಿತ್ತು. ಇದರಲ್ಲಿ ಸಾವಿರಾರು ಜನರು ಉಪಸ್ಥಿತರಾಗಿದ್ದರು.

ಆಧಾರ ದಾಖಲೆಗಳು ಮತ್ತು ಗ್ರಂಥಗಳು

1. The Stanikas and their Historical importance by Dr. B. A. Saletore M.A., Phd.,(London) D. Phil (Giesson). Represented from the journal of the Bombay University Volume VII Part Pages 1—65. (Director of Archives Govt. of India).

2. 'ಸ್ವಾತಂತ್ರ್ಯ ಸಮರ' ತಾ. 15—4—1965ರ ವೀರಭೂಮಿ ಪತ್ರಿಕೆಯಲ್ಲಿ ಪ್ರಕಟವಾದುದು. ಬರೆದವರು ಶ್ರೀ ಪಿ ದೇವರಾವ್ M.Sc., B.T.,Dip.,B.ED., ಶ್ರೀನಿವಾಸ ನಗರ.

3. 'ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ ಅಮರಸುಳ್ಯದ ಕಾಟುಕಾಯಿ' ಬರೆದವರು ಡಿ ಎಸ್. ಕೃಷ್ಣಯ್ಯ M.A., B.ED.

4. 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ', 1800 & 1857 ತಿರುಮಲೆ ತಾತಾಚಾರ್ಯ ಶರ್ಮಾ, ಮೈಸೂರು ಸರಕಾರ 1957.

5. 'ತುಳುನಾಡು' ಬರೆದವರು ಶ್ರೀ ಪಿ. ಗುರುರಾಜಭಟ್. M.A. B.T., Phd., 1963.

6. 'ಪ್ರಾಚೀನ ತುಳುನಾಡು' ದಿವಂಗತ ಶ್ರೀ ಶೀನಪ್ಪ ಹೆಗ್ಗಡೆ ಮತ್ತು ಶ್ರೀ ನಾರಾಯಣಕಿಲ್ಲೆ. [ಬರೆದವರು] ಪ್ರಕಾಶಕರು: ಶ್ರೀಮತಿ ಇಂದಿರಾಕಿಲ್ಲೆ ಮಂಗಳೂರು 1954.

7. 'ದ್ವೈತಮತ ಖಂಡನೆ' ಮತ್ತು 'ನಿಶ್ಚಯಜ್ಞಾನ' ಲೇಖಕ ಶ್ರೀ ಮದ್ದಣ್ಣಬಲ್ಲಾಳ್ ಪಕ್ಷನಾಥ ಪೂರ್ವಾಲಯ ಉಡುಪಿ 1938.

8. ಮೂರನೆ ದರ್ಜೆಯ ದಕ್ಷಿಣಕನ್ನಡ ಜಿಲ್ಲೆಯ ಭೂಗೋಳಶಾಸ್ತ್ರ 2ನೇ ಭಾಗ ಬರೆದವರು ಡಿ. ಲಕ್ಷ್ಮಣರಾವ್, 1913.

9. 'ಭೂತಾಳಪಾಂಡ್ಯನ ಅಳಿಯ ಸಂತಾನದ ಕಟ್ಟುಕಟ್ಟಳೆ' ಮಂಗಳೂರು ಜರ್ಮನ್ ಮಿಶ್ಯನ್ ಪ್ರೆಸ್ 1857.

10. Judgement of High Court judicature Madras in Appeal Suit No. 66 of 1681 in O.S. 3

of 1879 ಉಡುಪಿ ಅಷ್ಟಮಠದ ಪೈಕಿ ಪುತ್ತಿಗೆ ಮಠದ ಪ್ರಸಿದ್ಧ ಅಕ್ಕಯ್ಯನ ನಂಬ್ರ ತೀರ್ಪು 26—10—1883.

11. Selections from the records of Shri Shringeri Mutt, Volume I Mysore, Printed at the Government Branch Press 1927. ಜಗದ್ಗುರು ಶೃಂಗೇರಿ ಮಠಿಯ ಪ್ರಾಕ್ತನಲೇಖನ ಮೂಲಸಂಗ್ರಹ.

12. ‘ನವಯುಗ ಪರ್ಯಾಯ ಸಂಚಿಕೆ’ ತಾ 11-1—1934 ಬರೆದವರು ಯುಸ್. ಯು. ಪಣಿಯಾಡಿ.

13 A brief history of Sharma's Mutt case Ankuraja Subraya Sharma—Appallent Agent Soda Mutt Respondents. Printed and Puplished by the Udipi Public.)

14. O.S. 27/1886 ವಾದಿ ವ್ಯಾಸತೀರ್ಥಸ್ವಾಮಿ, ಪ್ರತಿವಾದಿರು ಶ್ರೀನಿವಾಸಚೆಟ್ಟಿ ಇತರರು. ಜಜ್‌ಮೆಂಟ್ 27—9—1887.

15. A.I.R. 1966 December Supreme Court, Page 1882 (V. 53 C-381) from Madras A.I.R. 1956 Mad 541. H. H. Vishwothama Thirtha Swamiyar Sode Mutt—Appellent State of Mysore and others-respondents

16. O. S. 145/1913 Vishwajna Thirtha Swamy plaintiff, Bhoja Rao respondent.

17. ‘ಜನಜಾಗೃತಿ’ ವಾರಪತ್ರಿಕೆ ಬೆಂಗಳೂರು-2. ತಾರೀಖು 19—8—1964 ಸಂಪಾದಕ ಶ್ರೀ ಕೆ. ಎಲ್. ರಾಮಕೃಷ್ಣರಾವ್.

18. ‘ಉಡುಪಿಕ್ಷೇತ್ರ’ ಲೇಖಕ ಬಿ. ರಾಮಕೃಷ್ಣ ಆಚಾರ್ B.A. ವಿದ್ವಾನ್ 1956 (ನಾಲ್ಕನೆ ಮುದ್ರಣ)

19. Dictionary Canarese and English By Rev. W. Reave, Printed and corrected and abridged by Danial Sanderson Weslayan Mission Bangalore 1858.

20. 'ವಾಸುಕೀ ಕ್ಷೇತ್ರ ಮಹಾತ್ಮೆ' [ಶ್ರೀ ಸುಬ್ರಹ್ಮಣ್ಯಕ್ಷೇತ್ರ] ಬರೆದವರು ದಿವಂಗತ ಶ್ರೀ ಎನ್.ಎಸ್. ಶಿವರಾವ್, 1958.

21. 'ಸ್ಥಾನಿಕ ಬ್ರಾಹ್ಮಣರು' ಸಂಗ್ರಹಕರ್ತ ದಿವಂಗತ ಐ. ಕೆ. ಶ್ರೀನಿವಾಸರಾವ್ 1957.

22. ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣರು ಸಂಗ್ರಹಕರ್ತ ಬರೆದವರು ದಿವಂಗತ ಐ. ಕೆ. ಶ್ರೀನಿವಾಸರಾವ್, [ಹಸ್ತಪ್ರತಿ] 1957.

23. History of Parasurama Kshethra ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಚರಿತ್ರೆ ಬರೆದವರು ದಿವಂಗತ ಶ್ರೀ ಎನ್. ಯಸ್. ಶಿವರಾವ್, ಇದು ತಾ. 8—5—1924ರಲ್ಲಿ ಬರೆದು ಮಹಾಸಭೆಯಲ್ಲಿ ಮಂಜೂರಾತಿ ಪಡೆದುದು. ಅಧ್ಯಕ್ಷ ಯನ್. ಯಸ್. ಅಪ್ಪಾಜಿ ರಾವ್, ಕಾರ್ಯದರ್ಶಿ. ದಸ್ಕತುಗಳು ಇವೆ.

24. ಆನಂದಗಿರಿ ವಿರಚಿತ ಶ್ರೀ ಶಂಕರವಿಜಯ 1881ನೇ ಇಸವಿ ಕಲ್ಕತ್ತಪ್ರಿಂಟ್.

25. ಬ್ರಾಹ್ಮಣ ಧರ್ಮ ಮತ್ತು ಗಾಯತ್ರೀ ತತ್ವವನ್ನು ವಿಶದೀಕರಿಸುವ ವ್ಯಾಸಪ್ರಣೀತ ಹದಿನೆಂಟು ಮಹಾಪುರಾಣಗಳಲ್ಲಿ ಒಂದಾದ ದೇವೀಭಾಗವತ.

26. ಸೌರಪುರಾಣ [ವ್ಯಾಸಪ್ರಣೀತ].

27. Thurstons castes and tribes of S.India. 1909.

28. Stuvarts South Kanara District Manual

29. Sturocks South Kanara Mannual, 1894.

30. 'ಗ್ರಾಮಪದ್ಧತಿ' ಪ್ರಕಾಶಕರು ಹೊಳ್ಳಕೃಷ್ಣಯ್ಯ ಮಂಗಳೂರು

31. ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯ ರಾಯನಕಟ್ಟು ಬರೆದವರು ದಿವಂಗತ ಅಮುಣಿಂಜೆಗುತ್ತು ಶ್ರೀ ಎಸ್. ಎ. ಶ್ರೀನಿವಾಸ ಹೆಗ್ಗಡೆ 1915.

ಶುದ್ಧಾ—ಅಶುದ್ಧ ಪ್ರಕರಣ

ಶುದ್ಧ	ಅಶುದ್ಧ	ಪುಟ	ಪಂಕ್ತಿ
ಶ್ರೀಮದನಂತೇಶ್ವರ	ಶ್ರೀ ಮದನಂತೇಶ್ವರ	1	2
ಜನಾರ್ದನ	ಜನಾರ್ಧನ	2	19
ಕಾಳಿಂಗಮರ್ದನ	ಕಾಳಿಂಗಮರ್ಧನ	3	1
ಸೇರಿದ	ಸೇರಿವ	3	8
ಸ್ಥಾನಿಕ	ಸ್ಥಾನೀಕ	3	8
ಪಡುದಿಕ್ಕಿನ	ಪಡುಕ್ಕಿನ	4	20
ಶ್ರೀಮದನಂತೇಶ್ವರ	ಶ್ರೀ ಮದನಂತೇಶ್ವರ	5	23
ಸ್ತಂಭ	ಸ್ಥಂಭ	6	1
ಮೇಲ್ಭಾಗದ	ಮೇಲ್ಬಾಗದ	6	3
ಅತಿ	ಅತೀ	6	5
ಸಂಬಂಧಪಟ್ಟ	ಸಮ್ಭಂಧಪಟ್ಟ	6	15
ವಿಚಾರ	ವಿಜಾರ	6	16
(ಲುಪ್ತ) ತಿಳಿದು ಬರುತ್ತದೆ	ಬರುತ್ತದೆ	6	26
ಮಾಡಲು	ಮಾಡಲುು	7	1
ಬಾರಕನ್ಯಾಪುರ	ಬಾರಿಕನ್ಯಾಪುರ	9	28
ವಿನಾಹ	ವಿನೆಹ	10	12
ಮಂದಿರವು	ಮಂದಿವು	11	8
ವಾಯುವ್ಯ	ವಾಯುುವ್ಯ	12	14
(ಲುಪ್ತ) 'ಇದೆ' ಎಂಬ ಶಬ್ದವನ್ನು "ಮಾಡಿಕೊಂಡು" ಎಂಬ ಪದದ ನಂತ್ರ ಸೇರಿಸಬೇಕು.		13	19
ಪ್ರತಿಷ್ಠಿಸಲ್ಪಟ್ಟದ್ದೆಂದು	ಪ್ರತಿಷ್ಟಿಸಲ್ಪಟ್ಟದ್ದೆಂದು	13	22
ಶ್ರೀಮದನಂತೇಶ್ವರ	ಶ್ರೀಮದನಂತೇಶ್ರರ	14	6
ಉಪದ್ರವಗಳು	ಉಪದ್ರಗಳು	15	11
ಮಧ್ವಾಚಾರ್ಯರಿಗೆ	ಮಧ್ವಚಾರ್ಯರಿಗೆ	15	15
ನಿಬಂಧನೆ	ನಿಬಂದನೆ	16	9
ದಿಗ್ಬಂಧನೆ	ದಿಗ್ಬಂದನೆ	16	9
ಮುದ್ರಾಧಾರಣ	ಮುಧ್ರಧಾರಣ	16	17

ಶುದ್ಧ	ಅಶುದ್ಧ	ಪುಟ	ಪಂಕ್ತಿ
ಹತ್ಯೆ	ಹತ್ಯ	17	14
ಚೋದ್ಯ	ಚ್ಯೊದ್ಯ	18	6
ವೈಷ್ಣವ	ವೈಶ್ಣವ	18	24
ಅಭಿಷೇಕ	ಅಭಿಶೇಕ	19	6
ದರ್ಶನಕ್ಕೆ	ದರ್ಶಣಕ್ಕೆ	19	16
ಗತಾನುಗತಿಕೋ	ಗತಾನು ಗತಿಕೋ	19	17
ಸ್ವಾತಂತ್ರವನ್ನು	ಸ್ವಾತಂತ್ರ್ಯತೆಯನ್ನು	20	14
ಎಂಜಲೆಲೆ	ಎಚ್ಚಲೆಲೆ	23	4, 6, 10, 19, 22.
ಮಧ್ಯದ	ಮದ್ಯದ	24	19
ಆದಕ್ಕೆ	ಆದಕ್ಕೆ	24	27
ಭಗವದ್ಭಕ್ತನಾಗಿಯೂ	ಭಗವದ್ಭಕ್ತನಾನಾಗಿಯೂ	25	27
illegitimate	ellegitimate	29	20
do	do	30	2
Sphere	Spare	32	12
pictatorial	piscatorial	32	9
ದ್ವೈತಮತ	ಧ್ವೈತಮತ	34	13
ದ್ವೈತ	ಧ್ವೈತ	35	4
ಅದ್ವೈತ	ಅಧ್ವೈತ	36	5
ಶ್ರುತ	ಶೃತ	36	8
ಅಸ್ತಿತ್ವ	ಅಸ್ಥಿತ್ವ	37	15-23
ಗರ್ಭಗೃಹದ	ಗರ್ಭಗ್ರಹದ	37	2
with	wlth	43	8
Brahmin's	Brahmins	43	10
forcibly	forciadly	46	5
" the reign "ಎಂಬ ನಂತರ 'Point'ಎಂಬುದನ್ನು ತೆಗೆದು "of Tippu Sulthan"ಎಂದು ಸೇರಿಸುವುದು		46	25

ಶುದ್ಧ	ಅಶುದ್ಧ	ಪುಟ	ಪಂಕ್ತಿ
ರವಾನೆಯಲ್ಲಿ	ರವಾಯನೆಲ್ಲಿ	54	27
ಭೇದಭಾವನೆಗಳು	ಬೇದಭಾವನೆಗಳು	69	1
ಭೇದಭಾವನೆಯು	ಬೇದಭಾವನೆಯು	69	3
ನಿಷ್ಠೆ	ನಿಷ್ಟೆ	69	11
ಶ್ರದ್ಧೆ	ಶೃದ್ಧೆ	69	11
ಭೇದವಾದಿಗಳಾದಾಗ	ಬೇಧವಾದಿಗಳಾದ	69	28
ಶ್ರದ್ಧೆ	ಶೃದ್ಧೆ	70	10
ಶ್ರೀ ವಿದ್ಯಾರಣ್ಯರ	ಶ್ರೀ ವಿದ್ಯಾರಣ್ಯ	70	11
ತ್ರಿಕಾಲನಿಷ್ಠೆಯಿಂದ	ತ್ರಿಕಾಲಸಿಷ್ಟೆಯಿಂದ	71	3
ಶ್ರುತಮಾಡಿದ್ದರಿಂದ	ಶೃತಮಾಡಿದ್ದರಿಂದ	71	6
ಶಾಲು ಜೋಡಿ	ಜೋಡಿ	71	16
ಮೋಕ್ಷದಾಯಕಾಃ	ಮೋಕ್ಷದಾಯಕಃ	72	7
ಸಂಬೋಧಿಸಿ	ಸಂಭೋಧಿಸಿ	72	13
ಕೃತ್ವಾ	ಕೃತ್ಪಾ	72	15
ಪ್ರತಿಷ್ಠಿಸಿದರೆಂದೂ	ಪ್ರತಿಷ್ಟಿಸಿದರೆಂದೂ	76	9
ಪ್ರತಿಷ್ಠಿಸಿರಬಹುದೆಂಬುದನ್ನು	ಪ್ರತಿಷ್ಟಿಸಿರಬಹುದೆಂಬುದನ್ನು	76	22
ಬೋಧಿಸಿದ್ದನ್ನು	ಭೋದಿಸಿದ್ದನ್ನು	77	24
ವ್ರತವನ್ನು	ವೃತವನ್ನು	77	14
ವರಮಹಾಲಕ್ಷ್ಮೀವ್ರತ	ವರಮಹಾಲಕ್ಷ್ಮೀವೃತ	77	27
ವ್ರತಗಳನ್ನು	ವೃತಗಳನ್ನು	77	27
ವ್ರತವನ್ನು	ವೃತಪನ್ನು	78	2
ಅಲ್ಲವೋ	ಅಲ್ಲವೊ	78	17
ವ್ರತವನ್ನು	ವೃತವನ್ನು	78	9
ವ್ರತವೆಂದು	ವೃತವೆಂದು	78	18
ವ್ರತವೆಂದು	ವೃತವೆಂದು	78	20
ವ್ರತವನ್ನು	ವೃತವನ್ನು	78	21
ವ್ರತ	ವೃತ	79	4
ವ್ರತಗಳನ್ನು	ವೃತಗಳನ್ನು	79	7
ಸೌರವ್ರತಗಳನ್ನು	ಸೌರವೃತಗಳನ್ನು	79	7

ಶುದ್ಧ	ಅಶುದ್ಧ	ಪುಟ	ಪಂಕ್ತಿ
ನಡ್ಡಂತ್ತಿಲ್ಲಾಯರೆಂಬ	ವಡ್ಡಂತ್ತಿಲ್ಲಾಯರೆಂಬ	79	21
ಉಪಾಕರ್ಮವನ್ನೂ	ಉಪಕರ್ಮವನ್ನೂ	84	10
ವ್ರತವನ್ನೂ	ವೃತವನ್ನೂ	84	11
ಶ್ರಾವಣಮಾಸವನ್ನು	ಶ್ರಾಣಮಾಸವನ್ನು	84	13
ಭುಂಜಿಸುತ್ತಿರುವುದು	ಬುಂಜಿಸುತ್ತಿರುವುದು	85	4
ನಿಷೇಧದ	ನಿಶೇಧದ	85	13
ನಿಷೇಧ	ನಿಶೇಧ	85	15
ದ್ವಿಜಶ್ರೇಷ್ಠಂ	ದ್ವಿಜಶ್ರೇಷ್ಟಂ	86	1
ಕಾಷ್ಠಂ	ಕಾಷ್ಟಂ	86	6
ಧರ್ಮಶಾಸ್ತ್ರ	ದರ್ಮಶಾಸ್ತ್ರ	86	10
ಬೋಧಾಯನಾ	ಭೂದಾಯನ	86	13
ಶುಧ್ಯತಿ	ಶುಧ್ಯೈತಿ	86	27
ಕರ್ಮಣಿ	ಕರ್ಮಣಿಃ	87	2
ನಿಷ್ಕೃತಿರ್ನಾಸ್ತಿ	ನಿಶ್ಕೃತಿರ್ನಾಸ್ತಿ	87	3
ನಿಷ್ಕೃತಿರುತ್ಪನ್ನಾ	ನಿಶ್ಕೃತಿರುತ್ಪನ್ನಾ	87	4
ವಿಶೇಷಂ	ವಿಶೇಶಂ	87	5
ಕೃತ್ವಾ	ಕೃತ್ಪಾ	87	11
ಉಪೋಷಣಂ	ಉಪೇಷಣಂ	87	11
ಕೃತ್ವಾ	ಕೃತ್ಪಾ	87	12
ಶುದ್ಧಿ	ಶದ್ಧಿ	87	12
ನಿಷೇಧಿಸಿ	ನಿಶೇಧಿಸಿ	87	15
ಅರಿತುಕೊಂಡು	ಆರಿತುಕೊಂಡ	87	28
ಜಗತ್ತತ್ವತೋ	ಜಗತ್ತತ್ಪತೋ	88	4
ಮಖಿಲಾ	ಮುಃಖಿಲಾ	88	7
ಬ್ರಹ್ಮೇತಿ	ಭೃಹ್ಮೇತಿ	88	24
ಖಲ್ವಿಮಾನಿ	ಖಲ್ಪಿಮಾನಿ	88	25
ಗೀತಾ	ಗ್ರಿತಾ	92	19
ಯಥಾರ್ಥ	ಯತಾರ್ಥ	94	6
ಪೂರ್ವಾಚಾರ್ಯರ	ಪೂರ್ಣಾಚಾರ್ಯರ	94	22
ಕಾರಾಗೃಹದಿಂದ	ಕಾರಾಗ್ರಹದಿಂದ	95	22
ತೀರ್ಥಜೀಯರವರ	ತೀರ್ಥಜೀಯದರ	97	10
ವ್ಯಾಸಪ್ರಣೀತ	ವ್ಯಾಸಪುಣೀತ	101	26

ಯೋಗ, ಯೋಗಾಸನ ಶಿಕ್ಷಣ ಶಾಲಾ

ಕಂಕನಾಡಿ, ಮಂಗಳೂರು-2. [ದ. ಕ.]

ಇಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಅದರ ಅಂಗವಾದ ಯೋಗಾಸನಗಳ ಅಭ್ಯಾಸ ಮಾಡಿಸುವುದರಿಂದ ಶರೀರಕ್ಕೆ ರೋಗರುಜೆಗಳು ಬಾರದಂತೆಯೂ, ಬಂದ ಹಲವಾರು ಹಳೆ ರೋಗಗಳನ್ನು ಅವರವರ ವಯಸ್ಸಿನ ಪರಿಮಿತಿ ಮತ್ತು ರೋಗಗಳ ಮೂಲ ಕಾರಣವನ್ನು ಕಂಡು ಹಿಡಿದು ಅವರವರಿಗೆ ಅನುಕೂಲವಾಗುವಂತೆ ಚಿಕಿತ್ಸಿಸಲಾಗುತ್ತದೆ.

ಅಲ್ಲದೆ ಇಲ್ಲಿ ಕಲಿಯಲು ಇಚ್ಛೆಯುಳ್ಳವರಿಗೆ ಯೋಗ, ಯೋಗಾಸನ, ಸಂಸ್ಕೃತ ಮತ್ತು ಗೀತಾ ಇತ್ಯಾದಿಗಳಿಂದ ಮಾನುಷ ತತ್ವವಿಚಾರ ಇತ್ಯಾದಿಗಳನ್ನು ಧರ್ಮಾರ್ಥವಾಗಿ ಶಿಕ್ಷಣ ಕೊಡಲಾಗುತ್ತದೆ.

ಶಿಕ್ಷಣ ಸಮಯವು ಶಿಕ್ಷಣ ಪಡೆಯಲು ಇಚ್ಛೆಯುಳ್ಳವರ ಅನುಕೂಲವನ್ನು ಹೊಂದಿಕೊಂಡು ಏರ್ಪಡಿಸಲಾಗುತ್ತದೆ.

ಪ್ರತಿ ಆದಿತ್ಯವಾರ ಬೆಳಿಗ್ಗೆ 8 ರಿಂದ 9 ಘಂಟೆ ವರೇಗೆ ಗೀತಾ ಸತ್ಸಂಗ ಒಂದನ್ನು ಜರಗಿಸಲಾಗುತ್ತದೆ.

ಈ ಸದವಕಾಶವನ್ನು ಜನರು ಕಳೆದುಕೊಳ್ಳಬಾರದಾಗಿ ವಿನಂತಿ.

ಸ್ಥಳ:—ತತ್ಕಾಲಕ್ಕೆ ಡಾ॥ ಎಂ. ಎಸ್. ಎ. ಶರ್ಮರವರ ಕಂಕನಾಡಿ ವೈದ್ಯಾಶ್ರಮದಲ್ಲಿ.

ಡಾ॥ ಯಂ. ಎಸ್. ಎ. ಶರ್ಮಾ,
ಕಂಕನಾಡಿ, ಮಂಗಳೂರು-2. ದ.ಕ.